ಪ್ರಚೋದನೆ

ಲಂಕೇಶ್


08 ಅಕ್ಟೋಬರ್ 2014 ಪುಟ 20 ರೂ. 15/-




ರಾಮುಕಥಾ ಗೋಪ್ರೇಮದ ಅಸಲಿಯತ್ತು



ಸೊರಗಿದ ಬಿಗ್‌ಬಾಸ್ ಕಾಡುವ ರಮೇಶ್





ಬಸವಕೇಂದ್ರ ಹಗರಣ

ಶೆಟ್ಟರ್ ಕೈ ರೇವತಿಯೂ ಸೈ!

ಹಂಪಿ


ದಲಿತನ ಭೂಮಿ ಕದ್ದ ಕಾವಿಸ್ವಾಮಿ

5 ಕೋಟಿ ವಂಚಿಸಿದ ಗ್ರೀನ್‌ಲೀವ್ ವಂಚಕರು

ಹೊನ್ನಾವರ

ಅಕ್ರಮ ಗ್ಯಾಸ್ ಗೋದಾಮಿನ ಅಪ್ಪ ಯಾರು?

ಜಾತಿ ಮತ್ತು ಹೆಸರು: ಒಂದು ಜಿಜ್ಞಾಸೆ



ಡಾ.ವಾಸು ಎಚ್.ವಿ.

ಕರ್ನಾಟಕದ 'ಪ್ರಗತಿಪರ' ಸ್ವಾಮೀಜಿಯೊಬ್ಬರ ಜೊತೆ 10 ವರ್ಷಗಳ ಕೆಳಗೆ ಒಂದು ಚರ್ಚೆಯಾಯಿತು. ಕೋಮುವಾದ ವಿರೋಧಿ ಒಕ್ಕೂಟದ ಪ್ರಯತ್ನ ನಡೆಯುತ್ತಿದ್ದ ಕಾಲವದು. ಇನ್ನೂ ಕೋಮು ಸೌಹಾರ್ದ ವೇದಿಕೆಯ ಹೆಸರು ಅಂತಿಮವಾಗಿರಲಿಲ್ಲ. ಬ್ರಾಹ್ಮಣರು ಮತ್ತು ಬ್ರಾಹ್ಮಣ್ಯದ ವಿರುದ್ಧ ತೀವ್ರ ಆಕ್ರೋಶವನ್ನು ಆ ಸ್ವಾಮೀಜಿಯವರು ಹೊಂದಿದ್ದರು. ಹಾಗಾಗಿ ಸಹಜವಾಗಿ ಬ್ರಾಹ್ಮಣವಾದಿ ಹಿಂದುತ್ವದ ವಿರುದ್ಧದ ಹೋರಾಟದಲ್ಲಿ ಅವರ ಸಹಭಾಗಿತ್ವದ ಅಗತ್ಯವಿತ್ತು. ಆ ಕುರಿತು ಮಾತನಾಡಲು ಅವರೊಂದಿಗೆ ಮುಂಚೆಯೇ ಸಮಯ ನಿಗದಿಪಡಿಸಿಕೊಂಡು ಹೋದಾಗ, ಅಲ್ಲಿ ಇನ್ನೂ ಹಲವರಿದ್ದರು. ಬಂದ ವಿಷಯ ಹೇಳಲು ಸ್ವಾಮೀಜಿ ಸೂಚಿಸಿದರು.

ಕರ್ನಾಟಕದಲ್ಲಿ ಕೋಮುವಾದ ಹೇಗೆ ಬೆಳೆಯುತ್ತಿದೆ, ಅದರಲ್ಲೂ ಅವರು ಮಲೆನಾಡು ಮತ್ತು ಕರಾವಳಿಯನ್ನು ತಮ್ಮ ಪ್ರಯೋಗಶಾಲೆಯನ್ನಾಗಿಸಿಕೊಂಡಿರುವ ರೀತಿ, ಪುರೋಹಿತಶಾಹಿಗಳ ವಿರುದ್ಧದ ಹೋರಾಟದಲ್ಲಿ ಮುಂಚಿನಿಂದಲೂ ಸಕ್ರಿಯವಾಗಿರುವ ಸ್ವಾಮೀಜಿಯವರ ಪಾತ್ರ ಇತ್ಯಾದಿ ನಾನು ಹೇಳಲಾರಂಭಿಸಿದೆ. ಸ್ವಾಮೀಜಿ ತಡೆದರು. 'ನನ್ನ ಒಂದು ಪ್ರಶ್ನೆಗೆ ನಿಮ್ಮ ಉತ್ತರ ಬೇಕು'. 'ಹೇಳಿ ಸಾರ್'. 'ಪುರೋಹಿತಶಾಹಿಗಳ ವಿರುದ್ಧದ ಹೋರಾಟದಲ್ಲೂ ಅವರೇ ಯಾಕೆ ಇರ್ತಾರೆ? ಒಂದು ನಿರ್ದಿಷ್ಟ ಸಮುದಾಯದ ಜನರೇ ನಿಮ್ಮಲ್ಲಿ ಹೆಚ್ಚು ಯಾಕಿದ್ದಾರೆ?' 'ಯಾರಿದ್ದಾರೆ ಸಾರ್?' ಒಂದೆರಡು ಕ್ಷಣ ಮೌನ. ನಂತರ ಸ್ವಾಮೀಜಿಯವರು ಸದರಿ ಕೆಲಸದಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದ ವ್ಯಕ್ತಿಯ ಹೆಸರು ಹೇಳಿ, 'ಅವರು ಯಾವ ಸಮುದಾಯಕ್ಕೆ ಸೇರಿದವರು?' ಅವರು ಹೆಸರಿಸಿದ ವ್ಯಕ್ತಿ ಬ್ರಾಹ್ಮಣೇತರ ಸಮುದಾಯಕ್ಕೆ ಸೇರಿದ್ದರು. 'ಅವರು ಇಂತಹ ಸಮುದಾಯಕ್ಕೆ ಸೇರಿದವರು...'. ಸ್ವಾಮೀಜಿಗೆ ಗೊಂದಲ ಉಂಟಾಯಿತು. ಅವರ ನಿರೀಕ್ಷೆ ಸುಳ್ಳಾಗಿತ್ತು. ಕೆಲಕ್ಷಣ ಸುಮ್ಮನಿದ್ದರು. ಕಣ್ಣು ಮುಚ್ಚಿಕೊಂಡು 'ನನ್ನ ಪ್ರಶ್ನೆ, ಈ ಒಕ್ಕೂಟದಲ್ಲಿ ಯಾರ್‍ಯಾರಿದ್ದಾರೆ ಅಂತ ಅಲ್ಲ, ಅದರಲ್ಲಿ ಎಲ್ಲರೂ ಇದ್ದಾರೆ. ಮುಖ್ಯ ಪಾತ್ರ ವಹಿಸುತ್ತಿರುವುದು ನಿಮ್ಮ ಸಂಘಟನೆ. ನೀವು ಪ್ರತಿನಿಧಿಸುವ ಸಂಘಟನೆಯಲ್ಲಿ ಯಾವ್ಯಾವ ಸಮುದಾಯಕ್ಕೆ ಸೇರಿದವರು ಎಷ್ಟೆಷ್ಟಿದ್ದಾರೆ?' 'ಅದರ ರಾಜ್ಯ ಸಮಿತಿಯಲ್ಲಿ ಇಬ್ಬರು ಒಕ್ಕಲಿಗರು, ಇಬ್ಬರು ದಲಿತರು, ಒಬ್ಬರು ಲಿಂಗಾಯತರು, ಒಬ್ಬರು ನಾಯಕ ಸಮುದಾಯಕ್ಕೆ ಸೇರಿದವರು, ಒಬ್ಬರು ಬ್ರಾಹ್ಮಣರು, ಒಬ್ಬರು ಕುರುಬರು, ಒಬ್ಬರು ದೇವಾಂಗ ಸಮುದಾಯಕ್ಕೆ ಸೇರಿದವರು, ಇನ್ನು ಮೂವರ ಜಾತಿ ಗೊತ್ತಿಲ್ಲ'. ನಿಜಕ್ಕೂ ಕೆಲವರ ಜಾತಿ ಗೊತ್ತಿರಲಿಲ್ಲ. ಸಮಿತಿಯಲ್ಲಿದ್ದ ಇನ್ನೂ ಒಬ್ಬರ ಹೆಸರನ್ನು ಸ್ವಾಮೀಜಿ ಹೇಳಿ ಅವರ ಜಾತಿ ಕೇಳಿದರು. ಆಂಧ್ರದ ಗಡಿಭಾಗದ, ಬಹುಶಃ ಬ್ರಾಹ್ಮಣರು ಪೂಜಿಸುವ ದೇವರ ಹೆಸರು ಅದು. 'ಅವರು ಪರಿಶಿಷ್ಟ ಪಂಗಡಕ್ಕೆ ಸೇರಿದವರು.' ಸ್ವಾಮೀಜಿ ಇಕ್ಕಟ್ಟಿಗೆ ಬಿದ್ದಂತೆ ಕಂಡಿತು. 'ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು ಯಾರು?', ಕೇಳಿದರು, ಹೇಳಿದೆ.

ನಿರ್ದಿಷ್ಟ ಕಾರಣಕ್ಕೆ ತಾನು ಈ ಆಂದೋಲನದಲ್ಲಿ ಭಾಗವಹಿಸಲಾರೆ ಎಂದು ಹೇಳಿ ಕಳಿಸಬೇಕೆಂದುಕೊಂಡಿದ್ದ ಸ್ವಾಮೀಜಿಗೆ ಕಷ್ಟವಾಗಿರಬಹುದು. ಇನ್ನೊಮ್ಮೆ ಭೇಟಿ ಮಾಡೋಣ ಎಂದು ಹೇಳಿ ಕಳಿಸಿದರು. ಸ್ವಾಮೀಜಿಯವರ ಸಮಸ್ಯೆ ಅರ್ಥವಾಯಿತು. ಹೆಸರು, ಬಣ್ಣ ಇತ್ಯಾದಿಗಳ ಮಾನದಂಡದ ಮೇಲೆ ಅವರು ಆ ಸಮಿತಿಯಲ್ಲಿದ್ದ ಹೆಚ್ಚಿನವರನ್ನು ನಿರ್ದಿಷ್ಟ ಜಾತಿಗೆ ಸೇರಿದವರೆಂದು ತಿಳಿದಿದ್ದರು (ಅಥವಾ ಅವರಿಗೆ ತಿಳಿಸಲಾಗಿತ್ತು)! ಸಹಜವಾಗಿಯೇ ಅವರಿಗೆ ಅದು ಆಕ್ಷೇಪಾರ್ಹ ಸಂಗತಿಯಾಗಿತ್ತು. ಈ ದೇಶದಲ್ಲಿ ಹೆಸರು, ಆಹಾರ, ಭಾಷೆ ಮತ್ತು ಅದರಾಚೆ ಇತ್ಯಾದಿಗಳಿಗೂ ಜಾತಿಗೂ ಸಂಬಂಧ ಇರುವುದು ವಾಸ್ತವವಾದ್ದರಿಂದ ಸ್ವಾಮೀಜಿಯವರಿಗೆ ಆ ರೀತಿ ಅನ್ನಿಸಲು ಕಾರಣವೂ ಇತ್ತು. ಆದರೆ ಈಗೊಂದು 30-40 ವರ್ಷಗಳ ಕೆಳಗೆ (ಅಂದರೆ ನನ್ನ ವಯಸ್ಸಿನವರು ಹುಟ್ಟಿದ ಸುತ್ತಮುತ್ತಲಿನ ಕಾಲದಲ್ಲಿ) ಜಾತಿ ಸೂಚಕ ಹೆಸರಿಡುವುದು ಗಣನೀಯವಾಗಿ ಕಡಿಮೆಯಾಗಿತ್ತು, ಬಹುಶಃ ಆ ನಿರ್ದಿಷ್ಟ ಸಂದರ್ಭದಲ್ಲಿ ಸ್ವಾಮೀಜಿಯವರಿಗೆ ಗೊಂದಲ ಉಂಟಾಗಲು ಅದೂ ಕಾರಣವಿರಬಹುದು.



ಉದಾಹರಣೆಗೆ ದೇವೇಗೌಡರ ದೊಡ್ಡ ಮಗನಿಗೆ ಬಿಟ್ಟರೆ ಉಳಿದವರ ಹೆಸರುಗಳಿಗೆ 'ಗೌಡ' ಸೇರಿಕೊಂಡಿಲ್ಲ. ಆದರೆ ಈಗ ಫ್ಲೆಕ್ಸ್‌ಗಳಲ್ಲಿ ರಾರಾಜಿಸಲು ಶುರುವಾಗಿರುವ ಕುಮಾರಸ್ವಾಮಿ ಮತ್ತು ರೇವಣ್ಣ ಅವರುಗಳ ಪುತ್ರರತ್ನರು ತಮ್ಮ ಆಧುನಿಕ ಹೆಸರುಗಳಿಗೆ (ನಿಖಿಲ್ ಮತ್ತು ಪ್ರಜ್ವಲ್) ಗೌಡ ಎಂಬ ಬಾಲಂಗೋಚಿಯನ್ನು ಅಂಟಿಸಿಕೊಂಡಿದ್ದಾರೆ.

ಇವೆಲ್ಲವನ್ನೂ ಈಗ ಬರೆಯಲು ಕಾರಣವಿದೆ. ಇದು ಫೇಸ್‌ಬುಕ್ ಪ್ರವರ್ಧಮಾನಕ್ಕೆ ಬಂದಿರುವ ಕಾಲ. ಅಂಕಿ-ಅಂಶಗಳ ಪ್ರಕಾರ ಭಾರತದಲ್ಲಿ ಫೇಸ್‌ಬುಕ್ 13 ಕೋಟಿ ಜನರ ಅಕೌಂಟ್‌ಗಳನ್ನು ಹೊಂದಿದೆ. ಅದರ ಜೊತೆಗೆ ಬಹುಶಃ ಲಕ್ಷಾಂತರ ಗುಂಪುಗಳು ಮತ್ತು ಪುಟಗಳನ್ನೂ (Groups and pages) ಹೊಂದಿರಬಹುದು. ಅತ್ಯಾಧುನಿಕವಾದ ಮತ್ತು 'ಸೆಕ್ಯುಲರ್' ಆದ ತಂತ್ರಜ್ಞಾನವನ್ನು ಬಳಸುವ ಮಾಧ್ಯಮ ಇದು. ಈ ಜಾತಿಯ ಮಾಧ್ಯಮದ ಹೆಸರು 'ಸಾಮಾಜಿಕ ಮಾಧ್ಯಮ'. ಇದು ಎಷ್ಟರಮಟ್ಟಿಗೆ ಸಾಮಾಜಿಕ ಹಾಗೂ ಸೆಕ್ಯುಲರ್ ಆಗಿದೆ ಎಂಬುದನ್ನು ನೋಡಿದರೆ ಅಚ್ಚರಿ ಹಾಗೂ ವಿಷಾದವಾಗುತ್ತಿದೆ.

ಆಟೋ ಮತ್ತು ಕಾರುಗಳ ಹಿಂದೆ 'ಹಲೋ ಗೌಡ', 'ಗೌಡ್ರ ಹುಡುಗ', 'ಮಂಡ್ಯ ಗೌಡ್ರು' ಇತ್ಯಾದಿಗಳನ್ನು ಸುಮಾರು 10 ವರ್ಷಗಳಿಂದ ಹೆಚ್ಚಾಗಿ ನೋಡುತ್ತಿದ್ದೇವೆ. ಅದಕ್ಕೂ ಹಿಂದೆ ಇಷ್ಟು ಪ್ರಮಾಣದಲ್ಲಿ ಇತ್ತು ಎನಿಸುವುದಿಲ್ಲ. ಈ ಲೇಖನ ಬರೆಯುವ ದಿನ ಒಂದು ಆಟೋದ ಹಿಂದೆ 'ಕುರಿ ಹಾಲಿನಲ್ಲಿ ನೊರೆ ಹೆಚ್ಚು ಕುರುಬನ ಹೃದಯದಲ್ಲಿ ಪ್ರೀತಿ ಹೆಚ್ಚು' ಎಂಬ ಒಂದು ವಾಕ್ಯವನ್ನು ನೋಡಿದೆ. ಇದು ಇನ್ನೂ ಹತ್ತಾರು 'ಬಲಾಢ್ಯ' ಜಾತಿಗಳಿಗೆ ವಿಸ್ತರಿಸಿರಬಹುದು. ಸಂಖ್ಯೆ ಹಾಗೂ ಪ್ರಭಾವದಲ್ಲಿ ಬಲಾಢ್ಯವಾಗುತ್ತಿದ್ದಂತೆ ತಮ್ಮ ಜಾತಿಯ ಹೆಸರನ್ನು ಬಹಿರಂಗವಾಗಿ ಹೇಳಿಕೊಳ್ಳುವುದು ಅಭಿಮಾನದ ಸಂಗತಿಯಾಗಿರಬಹುದು. ಈ ರೀತಿಯಾಗಿ ಜಾತಿ ಪ್ರದರ್ಶನವನ್ನು ರಸ್ತೆಗಳಲ್ಲಿ ಕಾಣುತ್ತಿರುವ ಪ್ರಮಾಣಕ್ಕಿಂತ ಹೆಚ್ಚಾಗಿ ಫೇಸ್‌ಬುಕ್‌ನಲ್ಲಿ ಜಾತಿಯ ನಂಟನ್ನು ಕಾಣಬಹುದು. ಅದುವರೆಗೆ ಜಾತಿ ಅಡ್ಡ ಹೆಸರನ್ನು ಎಂದೂ ಬಳಸಿರದ ಇಬ್ಬರು ಗೆಳೆಯರು ಈ ವರ್ಷ ಫೇಸ್‌ಬುಕ್ ಅಕೌಂಟ್ ತೆರೆಯುವಾಗ ತಮ್ಮ ಹೆಸರಿನ ಜೊತೆ ಜಾತಿ ಹೆಸರನ್ನೂ ಹಾಕಿಕೊಂಡರು. ಆ ಅಕೌಂಟನಿಂದ ನನಗೆ 'ಫ್ರೆಂಡ್ ರಿಕ್ವೆಸ್ಟ್' ಕಳಿಸಿದರು. ನಾನು ಅದನ್ನು ಆಕ್ಷೇಪಿಸಿ, ಈ 'ಬೆಳವಣಿಗೆ'ಯನ್ನು ನಾನು ಒಪ್ಪುವುದಿಲ್ಲವಾದ್ದರಿಂದ ಅವರ 'ಫ್ರೆಂಡ್ ರಿಕ್ವೆಸ್ಟ್'ಅನ್ನು ಒಪ್ಪಿಕೊಳ್ಳುವುದಿಲ್ಲವೆಂದೂ, ಅವರ ಜಾತಿ ಹೆಸರು ತೆಗೆದುಹಾಕಿದರೆ ಮಾತ್ರ ಒಪ್ಪುತ್ತೇನೆಂದೂ ಮೆಸೇಜ್ ಕಳಿಸಿದೆ. ಅವರಿಬ್ಬರಲ್ಲಿ 'ಅಷ್ಟು ಜಾತ್ಯತೀತನಲ್ಲದ' ಗೆಳೆಯ ಕೂಡಲೇ ತೆಗೆದು ಹಾಕಿದ. 'ತುಂಬಾ ಜಾತ್ಯತೀತ'ನಾಗಿರುವ ಇನ್ನೊಬ್ಬ ಗೆಳೆಯ ಇದುವರೆಗೆ ತೆಗೆದಿಲ್ಲ.

ಈ ಬೆಳವಣಿಗೆಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಕ್ರಿಯಾಶೀಲರಾಗಿರುವ ಇನ್ನೊಬ್ಬ ಗೆಳೆಯರ ಹತ್ತಿರ ವಿವರಿಸಿದೆ. ಅವರು ಫೇಸ್‌ಬುಕ್‌ನಲ್ಲಿನ ಘೋಷಿತ ಗುಂಪುಗಳು ಮತ್ತು ಪುಟಗಳ ಕುರಿತು ಇನ್ನಷ್ಟು ಮಾಹಿತಿ ನೀಡಿದರು. ಹೆಚ್ಚಿನ ಮೇಲ್ಜಾತಿಗಳ ಹೆಸರುಗಳಲ್ಲಿ ಸಾಮಾಜಿಕ ಜಾಲತಾಣಗಳ ಗುಂಪುಗಳು ಚಾಲ್ತಿಯಲ್ಲಿವೆ. ಒಂದಲ್ಲ, ಎರಡಲ್ಲ ಹತ್ತಾರು ಗುಂಪುಗಳು ಇದ್ದು, ಒಂದೊಂದಕ್ಕೂ ಸಾವಿರಗಟ್ಟಲೆ ಸದಸ್ಯತ್ವವೂ ಇದೆ. ಅದರೊಳಗೆ ಸದಾಕಾಲ ಜಾತಿ ಚರ್ಚೆಯೇ ನಡೆಯುತ್ತದೆಂದೇನಿಲ್ಲ, ಆದರೆ 'ಮೋದಿ ಭಜನೆ' ಇಂತಹ ಕಡೆ ಸಾರ್ವತ್ರಿಕವಾಗಿದೆ. ಒಂದು ವೇಳೆ ಯಾರಾದ[...] ಈ ಗುಂಪಿನ ಜಾತಿಯನ್ನು ಟೀಕಿಸಿದರೆ ಮಾತ್ರ ಎ[...] ಮೇಲೆರಗುತ್ತಾರೆ.

ಇದರಲ್ಲಿ ಅತ್ಯಂತ ಹೆಚ್ಚು ಜಾತಿ ಮತ್ತು ಉಪಜಾತಿ[...] ಪಂಗಡಗಳು ಹಾಗೂ ಒಳಪಂಗಡಗಳ ಗುಂಪುಗ[...] ರಚಿಸಿಕೊಂಡಿರುವವರು ಬ್ರಾಹ್ಮಣರು. ಕೇವಲ ಮ[...] ಸ್ಮಾರ್ತ, ವೈಷ್ಣವ ಗುಂಪುಗಳು ಮಾತ್ರವಲ್ಲದೇ, ಸ[...] ಸಿರಿನಾಡು, ಬಡಗನಾಡು ಅದೂ ಇದೂ ಎಂದು ಹಲ[...] ಗುಂಪುಗಳನ್ನೂ ನೋಡಬಹುದು. ಹೆಸರಿನಲ್ಲೇ [...] 'ಶ್ರೇಷ್ಠತೆ'ಯನ್ನು ಸಾರುವ ಗುಂಪುಗಳೂ ಸಾಕಷ್ಟಿವೆ. [...] ಮೂರ್‍ನಾಲ್ಕು ಕಾರಣಗಳಿರಬಹುದು. ಒಂದು, ದ[...] ಪ್ರಮಾಣದಲ್ಲಿ ಆರಂಭದಲ್ಲೇ ಈ ಲೋಕಕ್ಕೆ ಪ್ರ[...] ಪಡೆದಿರುವುದು. ಎರಡು, ರಸ್ತೆಗಳಲ್ಲಿ ನೇರವಾಗಿ [...] ಪ್ರದರ್ಶನ ಮಾಡುವ ಧೈರ್ಯವನ್ನು ಈ ಸಮುದಾ[...] ಕಳೆದುಕೊಂಡಿದ್ದು, ಅದನ್ನು ಜಾಲಾಂತರ್ಜಾಲ[...] ಪಡೆದುಕೊಳ್ಳುವ ಸಾಧ್ಯತೆ ಕಂಡಿರಬಹುದು. ಬ್ರಾ[...] ಹುಡುಗರು ಜಾತಿಯಿಂದ ಹೊರಗೆ ಮದ[...] ಮಾಡಿಕೊಳ್ಳಲು ಅಷ್ಟು ಮುಂದಾಗದಿರುವುದು [...] ಮದುವೆಗೆ ಹುಡುಗಿಯರು ಸಿಗದಿರುವ ಬಿಕ್ಕಟ್ಟು [...] ವ್ಯಾಪಿಸುತ್ತಿರುವುದು. ಸಮಾಜದಲ್ಲಿ ಹೆಚ್ಚಾಗುತ್ತಿ[...] ಬಲಪಂಥೀಯ ರಾಜಕಾರಣವು, ಪ್ರತಿಗಾಮಿ ಆಲೋ[...] ಗಳಿಗೂ ಮಾನ್ಯತೆ ತಂದುಕೊಡುತ್ತಿರುವ ಸಂದರ್ಭ[...] ಇದಕ್ಕೆ ಇಂಬು ಕೊಟ್ಟಿರುವ ಸಾಧ್ಯತೆ ಇದೆ. ದೇಶ[...] ಹರಡಿಕೊಂಡಿರುವ ಸಮುದಾಯ ಇದಾಗಿರುವುದ[...] ಹೆಚ್ಚಿನ ಸಂಖ್ಯೆಯ ಉಪಪಂಗಡಗಳು ಇದ್ದು, ಆ ಕಾ[...] ಈ ರೀತಿ ಇರುವುದೂ ಒಂದು ಕಾರಣವಾಗಿರಬಹು[...] ಅದೇನೇ ಇದ್ದರೂ 'ಬಹುವೈವಿಧ್ಯತೆಯ ಅಗಾಧತೆ'ಯ[...] ನೋಡಿ ಖುಷಿ ಪಟ್ಟುಕೊಳ್ಳಬೇಕಾದ ಸಂಗತಿ ಇದಾ[...] ನಿಜಕ್ಕೂ ಆತಂಕಕಾರಿ ವಿದ್ಯಮಾನ ಇದಾಗಿದೆ.


ಕಾಲ ಕಳೆದಂತೆ, ಜಗತ್ತು ಕಿರಿದಾದಂತೆ, ಇಂಟರ್[...] ತಂತ್ರಜ್ಞಾನವು ಇಡೀ ಜಗತ್ತನ್ನು ಒಂದೇ ಸೆಕೆಂಡಿನ ಅಂ[...] ಇಳಿಸಿರುವಾಗ ಗೋಡೆಗಳು ಕರಗುವುದು ಸ[...] ವಿದ್ಯಮಾನವಲ್ಲವೇ? ಹೆಚ್ಚು ಕಡಿಮೆ ನನ್ನ ವಯ[...] ಬಂದಿರುವ ಬಹುತೇಕರು ಜಾತಿಯೊಳ[...] ಒಳಪಂಗಡಗಳನ್ನು ಮರೆತುಹೋಗಿದ್ದರು. ನಂತರದ [...] ವರ್ಷಗಳಲ್ಲಿ ಉಪಜಾತಿಗಳನ್ನು ಮರೆತಿರಬೇಕಿತ್ತು, ನಂ[...] ಹತ್ತು ವರ್ಷಗಳಲ್ಲಿ (ಅಂದರೆ ಈ ಕಾಲದ ಹೊ[...] ಜಾತಿಗಳನ್ನೂ ಸಹ ಮರೆತಿರಬೇಕಿತ್ತು. ಜಗ[...] ಒಂದುಗೂಡಿಸುವ ಫೇಸ್‌ಬುಕ್‌ನಂತಹ ಮಾಧ್ಯಮ[...] ಈ ಗೆರೆಗಳನ್ನು ಇನ್ನೂ ವೇಗವಾಗಿ ಅಳಿಸಬೇಕಿತ್ತು. [...] ಇದೇನಾಗುತ್ತಿದೆ? ಇದೇಕಾಗುತ್ತಿದೆ?

ಫೇಸ್‌ಬುಕ್‌ನಲ್ಲಿ ಕ್ರಿಯಾಶೀಲರಾಗಿರುವ [...] ಯುವಕರು ಮಾತ್ರ ಜಾತಿ ಗುಂಪುಗಳನ್ನು ಹ[...] ರಚಿಸಿಕೊಂಡಿಲ್ಲ ಎಂಬುದನ್ನೂ ಗಮನಿಸಬಹುದು. [...] ಇನ್ನೊಬ್ಬ ಗೆಳೆಯರು ಹೇಳಿದರು, 'ಅಂಬೇಡ್ಕರ್ [...] ಬುದ್ಧರ ಹೆಸರಿನಲ್ಲಿ ಆಗಿರುವ ಗುಂಪುಗಳೆಲ್ಲಾ [...] ಸಮುದಾಯದ ಯುವಕರದ್ದು'. ಅದು ಸಂಪೂರ್ಣ ನಿ[...] ಅಂಬೇಡ್ಕರ್ ಹೆಸರಿನ ಗುಂಪುಗಳಲ್ಲಿ ಹೆಚ್ಚಿನವರು [...] ಸಮುದಾಯಕ್ಕೆ ಸೇರಿದವರು ಎಂಬುದು ನಿಜ, [...] ಎಲ್ಲರೂ ಅಲ್ಲ. ಅದೇನೇ ಆದರೂ, ಅಂಬೇಡ್ಕರ್ [...] ರಾಜಕೀಯ ಪ್ರಜ್ಞೆಯ ಸಂಕೇತವಾಗಿರುವಾಗ ಇದ[...] ಸ್ವಾಗತಾರ್ಹ ಸಂಗತಿ.

ದಲಿತ ಚಳವಳಿ ಬಲವಾದಂತೆಲ್ಲಾ ಅಸ್ಪೃಶ್ಯ ಜ[...] ಹೆಸರನ್ನು ತಮ್ಮ ಹೆಸರಿಗೆ ಅಂಟಿಸಿಕೊಳ್ಳುವ ವಿದ್ಯಮ[...] ಆರಂಭವಾಯಿತು. ಸುಬ್ಬು ಹೊಲೆಯಾರ್, ಚನ್ನಪ್ಪ ವ[...] ಇತ್ಯಾದಿ. ಈ ಅಸರ್ಪನ್ 'ಅವಮಾನ ಪಟ್ಟ[...] ಬೇಕಾದವರು ನಾವಲ್ಲ, ನಮ್ಮನ್ನು ಅವಮಾನಿಸಿ[...] ತಲೆ ತಗ್ಗಿಸಬೇಕು' ಎಂಬ ಸ್ವಾಭಿಮಾನದಿಂದ ಶುರುವಾ[...] ಆದರೆ ಇದು ಫೇಸ್‌ಬುಕ್‌ನಲ್ಲಿ ಕಾಣದ್ದಕ್ಕೆ ಎರಡು-ಮ[...] ಕಾರಣಗಳಿರಬಹುದು. ಒಂದು, ಈ ಲೋಕಕ್ಕೆ ಮೊ[...] ಅವಕಾಶ ಪಡೆದುಕೊಂಡವರು ಮೇಲ್ಜಾತಿಯವರು. [...] ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅವರಿರಬಹುದು. [...] ಅಲ್ಲಿ ಈಗಾಗಲೇ ಪ್ರಬಲ ಜಾತಿಗಳ ಯಾಜ[...] ಸ್ಥಾಪಿತಗೊಂಡಿರುವುದರಿಂದ ಹಿಂಜರಿಕೆ ಇದ್ದಿರಬ[...] ಮೂರು, ಅಸರ್ಪನ್ ಹೆಸರಿನಲ್ಲಿ ಜಾತಿ ಗುಂಪ[...] ಒಂದಾಗುವುದು, ಜಾತಿ ವ್ಯವಸ್ಥೆಯನ್ನು ಬಲಪಡಿಸುವು[...] ಅದರ ಬದಲಿಗೆ ಪ್ರಜ್ಞೆಯ ಸಂಕೇತವಾಗಿ ಅಂಬ[...] ಹೆಸರಿನಲ್ಲಿ ಗುಂಪಾಗುತ್ತಿರಬಹುದು. ಆ ಅರ್ಥದಲ್ಲಿ [...] ಇದು ಸಕಾರಾತ್ಮಕ ಬೆಳವಣಿಗೆ.

ಅದನ್ನು ಬಿಟ್ಟರೆ ಆಧುನಿಕತೆ ಮತ್ತು ಅಭಿವ[...] ಜಾತಿ ಐಡೆಂಟಿಟಿಯನ್ನು ಗಟ್ಟಿಗೊಳಿಸುತ್ತಿರುವ [...] ವಿದ್ಯಮಾನವು ನಕಾರಾತ್ಮಕವಾದದ್ದು. ಇದನ್ನು ಬ[...] ಮಾರ್ಗೋಪಾಯಗಳನ್ನೂ ಗಟ್ಟಿಗರು ಮತ್ತು [...] ಹುಡುಕಿಕೊಳ್ಳುವ ಅಗತ್ಯವಿದೆ.

ಅಪ್ರಯೋಜಕ ಮಂಗಳಯಾನ ಸುತ್ತ ಭಜನೆ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ


ನಿನ್ನೆ ಬುಧವಾರದಂದು ಎಲ್ಲ ಮಾಧ್ಯಮಗಳಲ್ಲೂ ...ಳಯಾನದ ಬಗ್ಗೆಯೇ ಅಬ್ಬರ. ಎಲ್ಲೆಲ್ಲೂ ಅದೇ ...ಹೆಚ್ಚುಗಾರಿಕೆ. ಭಾರತೀಯ ವಿಜ್ಞಾನಿಗಳು ಮಾಡಿರುವ ...ಸಾಧನೆ'ಗೆ ಸಾವಿರಾರು 'ತಂದೆ'ಯರು. ಗುಜರಾತ್ ...ದ ಒಂದು ಪತ್ರಿಕೆಯಂತೂ ನರೇಂದ್ರ ಮೋದಿಯೇ ...ಳಯಾನ ನೌಕೆಯನ್ನು ಸರಿಯಾದ ಕಕ್ಷೆಗೆ ಸೇರಿಸಿದ್ದಾನೆ ...ು ವರದಿ ಮಾಡಿದೆ! ಮೊದಲ ಯತ್ನದಲ್ಲೇ ಭಾರತ ...ಸ್ವಿಯಾಗಿದೆ, ಅತಿ ಕಡಿಮೆ ವೆಚ್ಚದಲ್ಲಿ ಇದನ್ನು ಸಾಧಿಸಿದೆ, ...ಂದ ಭಾರತದ ಕಿರೀಟಕ್ಕೆ ಮತ್ತೊಂದು ...ಸೇರಿದೆ ಎಂದೆಲ್ಲ ಹಿಗ್ಗುವಿಕೆ.

...ನ್ನ ದೃಷ್ಟಿಕೋನವೇ ಹೀಗೋ ಅಥವಾ ...ಬುದ್ಧಿಯೇ ಹಾಗೋ ಗೊತ್ತಿಲ್ಲ, ಈ ... ಮತ್ತು ಹಿಗ್ಗುವಿಕೆಯ ನಡುವೆ ನನ್ನನ್ನು ...ದ ಪ್ರಶ್ನೆ 'ಮಂಗಳದ ಕಕ್ಷೆಗೆ ಒಂದು ...ಯನ್ನು ಕಳುಹಿಸುವ ಮೂಲಕ ಭಾರತಕ್ಕೆ ...ದ ಲಾಭ ಎಂತಹದ್ದು?' ಎಂಬುದು. ...ಂದರೆ ಆ ಗ್ರಹದಲ್ಲಿ ಆಮ್ಲಜನಕ ಮತ್ತು ...ನ್ ಅನಿಲ ಇದೆಯೋ ಇಲ್ಲವೋ ...ು ಕಂಡುಕೊಳ್ಳುವ ಮೂಲಕ ಭಾರತಕ್ಕೆ ...ಸಿನ ಲಾಭವಾಗಲಿ, ಕಿಂಚಿತ್ತು ...ೋಜನವಾಗಲಿ ಇಲ್ಲ. ಪ್ರಸ್ತುತ ...ೇಧನೆಯಿಂದಾಗಿ ಮುಂದೊಂದು ದಿನ ...ಹದಲ್ಲಿ ಮಾನವ ವಾಸಿಸುವಂತಾದರೆ ... ಮೊದಲು ಹೋಗುವುದು ಶ್ರೀಮಂತ ... ಹೊರತು ಸಾಮಾನ್ಯ ಭಾರತೀಯರಲ್ಲ.

...ೋಗಲಿ, ಭಾರತೀಯ ವಿಜ್ಞಾನಿಗಳು ... ಯಾರೂ ಸಾಧಿಸದಿದ್ದದ್ದನ್ನು ...ದ್ದಾರೆಯೇ? ಇಲ್ಲ! ಇವರಿಗಿಂತ ಮುಂಚೆ ...ು ಇದನ್ನು ಸಾಧಿಸಿದ್ದಾರೆ ಮಾತ್ರವಲ್ಲ ...ೀಯ ವಿಜ್ಞಾನಿಗಳಿಗಿಂತ ಈ ವಿಚಾರದಲ್ಲಿ ...ನ್ನು ಸಾಧಿಸಿದ್ದಾರೆ. ಆದರೂ ನಮ್ಮವರು ... ಏನನ್ನು ತೋರಿಸಿಕೊಟ್ಟಿದ್ದಾರೆಂದರೆ ...ೂ ಮಂಗಳ ಗ್ರಹದ ಹತ್ತಿರಕ್ಕೆ ಒಂದು ...ಯನ್ನು ಹಾರಿಸಲು ಬರುತ್ತದೆ' ...ದನ್ನು ಮಾತ್ರ. ಇಷ್ಟಕ್ಕೇ ಇಷ್ಟೊಂದು ...ಬಿಮ್ಮು ಯಾಕೆ ಎಂಬುದೇ ನನಗೆ ...ವಾಗುತ್ತಿಲ್ಲ.

...ಜ ಈ ಮಂಗಳಯಾನಕ್ಕೆ ಭಾರತ ವೆಚ್ಚ ...ರುವ 450 ಕೋಟಿ ರೂಪಾಯಿಗಳು ...ರೆ ದೇಶಗಳು ಇಂತಹ ಯೋಜನೆಗೆ ...ರುವ ವೆಚ್ಚಕ್ಕೆ ಹೋಲಿಸಿದರೆ– ಕಡಿಮೆಯೇ. ಆದರೆ ...ಂದು ತರಹ ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ...ಮುಡಿದಂತೆ. ಯಾಕೆಂದರೆ ನಮ್ಮ ದೇಶದಲ್ಲಿ ಇವತ್ತಿಗೂ ...ತರ ಬಡವರು ಹಸಿದ ಹೊಟ್ಟೆಯಲ್ಲೇ ಪ್ರತಿದಿನ ...ಮಾಡುತ್ತಿದ್ದಾರೆ. ಕೋಟ್ಯಾಂತರ ಜನಕ್ಕೆ ಪೌಷ್ಟಿಕ ...ದವಾಗಲಿ, ಸರಿಯಾದ ಆರೋಗ್ಯ ವ್ಯವಸ್ಥೆಯಾಗಲಿ, ...ವಾಗಲಿ ಸಿಗುತ್ತಿಲ್ಲ, ಅಷ್ಟೆಲ್ಲ ಯಾಕೆ, ನಮ್ಮ ದೇಶದ ಅದೆಷ್ಟೋ ಕಡೆ ಕುಡಿಯಲು ಶುಚಿಯಾದ ನೀರೂ ಸಿಗುತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ ಬೇರೆ ದೇಶದ ವಿಜ್ಞಾನಿಗಳು ಮಾಡಿರುವುದನ್ನೇ ಮಾಡಲು 450 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವುದು ಅಪರಾಧವಲ್ಲವೇ?

ಅದರ ಅರ್ಥ ವಿಜ್ಞಾನಕ್ಕೆ, ಸಂಶೋಧನೆಗೆ ಹಣ ವೆಚ್ಚ ಮಾಡಬಾರದು ಎಂದಲ್ಲ. ಬದಲಾಗಿ ನಮ್ಮ ದೇಶದ ಹಲವಾರು ಸಮಸ್ಯೆಗಳನ್ನು ನಿವಾರಿಸುವ ಬಗೆಗಳನ್ನು ಕುರಿತು ಸಂಶೋಧನೆಗಳನ್ನು ಪ್ರೋತ್ಸಾಹಿಸಬೇಕಾಗಿದೆ. ಉದಾಹರಣೆಗೆ,



Trajectory Design

ನಮ್ಮ ದೇಶವನ್ನು ಕಾಡುತ್ತಿರುವ ವಿಷಯಗಳಾದ ಶಿಕ್ಷಣ, ಆಹಾರ, ವಸತಿ, ಆರೋಗ್ಯ, ಬಡತನ ಕುರಿತ ಸಂಶೋಧನೆಗಳಿಗೆ ಒತ್ತು ಕೊಡಬೇಕಿದೆ. ಅದನ್ನು ಬಿಟ್ಟು, ಹಲವು ವಿಜ್ಞಾನಿಗಳ ಪ್ರತಿಷ್ಠೆಗೆ, ಇಸ್ರೋಗೆ ನಾಸಾ ನಮಸ್ತೆ ಅಂತ ಟ್ವೀಟ್ ಮಾಡಿತು ಎಂಬ ಜುಜುಬಿ ಹೆಗ್ಗಳಿಕೆಗೆ ಕೋಟ್ಯಾಂತರ ರೂಪಾಯಿಗಳನ್ನು ವ್ಯಯ ಮಾಡುವುದು ಸರಿಯಲ್ಲ ಅಲ್ಲವೇ?

ಯಾವ ಕೋನದಿಂದಲೂ 'ಐತಿಹಾಸಿಕ'ವಲ್ಲದ ಈ ಸಾಧನೆಯ ಸುದ್ದಿ ಪ್ರಕಟಗೊಂಡ ದಿನವೇ ಹಲವು ಮಾಧ್ಯಮಗಳಲ್ಲಿ ಪ್ರಕಟಗೊಂಡ ಇತರೆ ವರದಿಗಳು ನನ್ನ ಗಮನವನ್ನು ಸೆಳೆದವು. ಅವುಗಳಲ್ಲಿ ಒಂದು: ಇಸ್ರೋದ ಹೆಡ್‌ಆಫೀಸ್ ಇರುವ 'ಐಟಿ ನಗರ' ಬೆಂಗಳೂರಿನಲ್ಲೇ ಇಬ್ಬರು ಕೂಲಿ ಕಾರ್ಮಿಕರು ಮ್ಯಾನ್‌ಹೋಲ್ ಒಂದರಲ್ಲಿ ಸಾವನ್ನಪ್ಪಿದ್ದು. ಚಂದ್ರನ ಮೇಲೆ ಇಸ್ರೋ ವಿಜ್ಞಾನಿಗಳು ಭಾರತದ ಬಾವುಟವನ್ನು ಬಿಸಾಡಿದ 'ಸಾಧನೆ'ಯ ಸಂದರ್ಭದಲ್ಲೂ ಇಂತಹದ್ದೇ ಸಂಗತಿಯನ್ನು ಪ್ರಸ್ತಾಪಿಸಿದ್ದೆ. ಆದರೂ ಮತ್ತೆ ಅಂತಹದ್ದೇ ಇನ್ನೊಂದು ಪ್ರಕರಣವನ್ನು ಪ್ರಸ್ತಾಪಿಸುತ್ತಿರುವುದಕ್ಕೆ ಕಾರಣ ನಮ್ಮ ದೇಶದಲ್ಲಿ 'ವಿಜ್ಞಾನ' ಬೆಳೆದಿಲ್ಲ ಎಂಬುದನ್ನು ಮನದಟ್ಟು ಮಾಡಲು. ಇವತ್ತು ನಮ್ಮ ವಿಜ್ಞಾನಿಗಳು 5.6 ಮಿಲಿಯನ್ ಕಿಲೋಮೀಟರ್ ದೂರದಲ್ಲಿರುವ ಮಂಗಳದ ಹತ್ತಿರಕ್ಕೆ ಯಾವ ಉಪಯೋಗಕ್ಕೂ ಬಾರದ ಒಂದು ನೌಕೆಯನ್ನು ಕಳುಹಿಸುತ್ತಾರೆ, ಆದರೆ ನಮ್ಮ ಭೂಮಿಯ ಮೇಲೆ ಇರುವ ಆರು ಅಡಿ ಆಳದ ಮ್ಯಾನ್‌ಹೋಲ್‌ಗಳನ್ನು ಸ್ವಚ್ಛ ಮಾಡುವ, ಆ ಮೂಲಕ ಜನರ ಜೀವವನ್ನು ಉಳಿಸುವ, ಒಂದು ಸಿಂಪಲ್ ಯಂತ್ರವನ್ನೂ ಇಲ್ಲಿಯತನಕ ತಯಾರಿಸಿಲ್ಲ!

ಯಾಕೆ ಇಂತಹ ತಾತ್ಸಾರ? ನಮ್ಮ ವಿಜ್ಞಾನಿಗಳಲ್ಲಿ ಹೆಚ್ಚಿನವರು 'ಮೇಲು' ಜಾತಿಗೆ ಸೇರಿರುವುದು, ಮ್ಯಾನ್‌ಹೋಲ್‌ಗಳನ್ನು ಸ್ವಚ್ಛ ಮಾಡುವವರಲ್ಲಿ 'ಕೆಳ' ಜಾತಿಯ ಜನ ಇರುವುದೂ ಇದಕ್ಕೆ ಕಾರಣವಿರಬಹುದೇ? ಹೇಗಿದ್ದರೂ ಬಡ ದಲಿತರು ಇರುವತನಕ ಮ್ಯಾನ್‌ಹೋಲ್ ರಿಪೇರಿಗೆ ಕಾರ್ಮಿಕರ ಅಭಾವ ಇರುವುದಿಲ್ಲ ಎಂಬ 'ಜ್ಞಾನ'ವೇ? ಇಂತಹ ಒಂದು ಯಂತ್ರವನ್ನು ಕಂಡುಹಿಡಿದರೆ ಇಸ್ರೋಗೆ ನಾಸಾ ಸಂಸ್ಥೆ 'ಹಾಯ್' ಎಂದು ಟ್ವೀಟ್ ಮಾಡುವುದಿಲ್ಲ ಎಂದೆ? ಮ್ಯಾನ್‌ಹೋಲ್ ರಿಪೇರಿ ಮಾಡುವ ಯಂತ್ರವನ್ನು ತಯಾರಿಸಲು ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಕೊಡುವುದಿಲ್ಲ ಎಂಬ ಅರಿವೆ? ಮಂಗಳಯಾನದ ಯಶಸ್ಸಿನ ಹಮ್ಮಿನಲ್ಲಿ ಬೀಗುತ್ತಿರುವವರೆಲ್ಲರೂ ಇಂತಹ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ.

ನನ್ನ ಗಮನವನ್ನು ಸೆಳೆದ ಇನ್ನೊಂದು ಸುದ್ದಿ ದಲಿತರ ಸ್ಥಿತಿಗತಿ ಕುರಿತು ಮಾನವ ಹಕ್ಕುಗಳ ಸಂಘಟನೆಯೊಂದು ಭೋಪಾಲ್‌ನಲ್ಲಿ ಬಿಡುಗಡೆ ಮಾಡಿದ ವರದಿ. ಆ ವರದಿಯಲ್ಲಿ ಉತ್ತರ ಪ್ರದೇಶದಲ್ಲಿ ಸಂಭವಿಸಿದ ಒಂದು ವಿದ್ಯಮಾನದ ಬಗ್ಗೆ ಹೀಗೆ ದಾಖಲಿಸಲಾಗಿದೆ:

ಉತ್ತರ ಪ್ರದೇಶದಲ್ಲಿರುವ ಪರಿಗಾಮ ಎಂಬ ಹಳ್ಳಿಯಲ್ಲಿ ಇವತ್ತಿಗೂ ಮೇಲುಜಾತಿಯ ಠಾಕೂರ್‌ಗಳ ಮನೆಗಳಲ್ಲಿ ದಿನಾ ಮಲ ಹೊರುತ್ತಿರುವವರು ದಲಿತ ಮಹಿಳೆಯರು. ಪ್ರತಿ ದಿನ 12 ದಲಿತ ಮಹಿಳೆಯರು ತಪ್ಪದೆ ತಮ್ಮ ಈ ಜವಾಬ್ದಾರಿಯನ್ನು ನಿಭಾಯಿಸಬೇಕು. ಅದಕ್ಕೆ ಆ ಮಹಿಳೆಯರಿಗೆ ಠಾಕೂರ್ ಕುಟುಂಬಗಳು ಪ್ರತಿದಿನ ಕೊಡುವುದು ಮಿಕ್ಕಿ ಉಳಿದಿರುವ ತಂಗಳನ್ನು ಮತ್ತು ವರ್ಷಕ್ಕೊಮ್ಮೆ ಒಂದು ಹಳೆ ಸೀರೆಯನ್ನು ಹಾಗು ಸುಗ್ಗಿಯ ಸಮಯದಲ್ಲಿ ಒಂದಿಷ್ಟು ಆಹಾರಧಾನ್ಯಗಳನ್ನು. ಯಾವತ್ತಿಗೂ ಒಂದೇ ಒಂದು ನಯಾ ಪೈಸೆಯನ್ನು ಸಂಬಳವಾಗಿ ದಲಿತ ಮಹಿಳೆಯರಿಗೆ ನೀಡಿಲ್ಲ.

ಇತ್ತೀಚೆಗೆ ಆ ದಲಿತ ಮಹಿಳೆಯರು ಇನ್ನು ಮುಂದೆ ತಾವು ಮಲ ಹೊರುವುದಿಲ್ಲ ಎಂದು ನಿರ್ಧರಿಸಿದರು. ಆಗ ಠಾಕೂರ್ ಪುರುಷರು ದಲಿತರನ್ನು ಕರೆದು 'ಮಲ ಹೊರದಿದ್ದರೆ ನಿಮ್ಮನ್ನೆಲ್ಲ ಥಳಿಸುತ್ತೇವೆ. ನೆಮ್ಮದಿಯಿಂದ ಬದುಕದಂತೆ ಮಾಡುತ್ತೇವೆ' ಎಂದು ಬೆದರಿಸಿದರು. ಅದಕ್ಕೆ ದಲಿತ ಮಹಿಳೆಯರು ಜಗ್ಗಲಿಲ್ಲ. ಆಗ ಠಾಕೂರರು ಇನ್ನೊಂದು ಹೆಜ್ಜೆ ಮುಂದೆ ಹೋಗಿ 'ಎಲ್ಲರಿಗೂ ಸಾಮಾಜಿಕ ಬಹಿಷ್ಕಾರ ಹಾಕುತ್ತೇವೆ. ನಿಮ್ಮ ದನಗಳು ಗೋಮಾಳಗಳನ್ನು ಪ್ರವೇಶಿಸುವಂತಿಲ್ಲ, ದಲಿತ ಮಹಿಳೆಯರು ಒಣ ಸೌದೆಯನ್ನು ಸಂಗ್ರಹಿಸುವಂತಿಲ್ಲ' ಎಂದು ಧಮಕಿ ಹಾಕಿದರು. ಆಗ ವಿಧಿ ಇಲ್ಲದೆ ದಲಿತ ಮಹಿಳೆಯರು ಠಾಕೂರರ ಮನೆಗಳಲ್ಲಿ ಮತ್ತೆ ಮಲ ಹೊರಬೇಕಾಯಿತು.

ಅದೇ ವರದಿಯ ಪ್ರಕಾರ ಮಲ ಹೊರುವ ಪದ್ಧತಿಯನ್ನು ಸುಪ್ರೀಂಕೋರ್ಟ್ ನಿಷೇಧಿಸಿದ್ದರೂ ಇವತ್ತಿಗೂ ಮಹಾರಾಷ್ಟ್ರದ ಹಲವು ಪಂಚಾಯತಿಗಳಲ್ಲಿ ಜಾತಿ ಆಧಾರದ ಮೇಲೆ ಶೌಚಾಲಯಗಳನ್ನು ಸ್ವಚ್ಛ ಮಾಡುವ ಕೆಲಸಕ್ಕೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಅಷ್ಟೇ ಅಲ್ಲ, ಒಬ್ಬ ದಲಿತ ಯುವಕ ಬ್ಯಾಂಕಿಂಗ್ ಮತ್ತು ಬಿಕಾಂನಲ್ಲಿ ಪದವೀಧರನಾಗಿದ್ದರೂ ಆತನ ವಿದ್ಯಾರ್ಹತೆಗೆ ಸೂಕ್ತವಾದ ಕೆಲಸವನ್ನು ಕೊಡದೆ ಪಂಚಾಯತಿಯಲ್ಲಿರುವ ಶೌಚಾಲಯವನ್ನು ಕ್ಲೀನ್ ಮಾಡುವ ಹುದ್ದೆಗೆ ಅವನನ್ನು ನೇಮಿಸಲಾಗಿದೆ.

ಇವು ಆಧುನಿಕ ಭಾರತವನ್ನು ಈಗಲೂ ಕಿತ್ತು ತಿನ್ನುತ್ತಿರುವ ಹಲವಾರು ಸಮಸ್ಯೆಗಳಲ್ಲಿ ಒಂದೆರಡು ಅಂಶಗಳು ಮಾತ್ರ. ಆದರೆ ಇದ್ಯಾವುದೂ ನಮ್ಮ ಜನರಿಗಾಗಲಿ, ಮಾಧ್ಯಮಗಳಿಗಾಗಲಿ, ಸರ್ಕಾರಗಳಿಗಾಗಲಿ ಮುಖ್ಯವೇ ಅಲ್ಲ. ಬದಲಾಗಿ ಯಾವ ಪ್ರಯೋಜನವೂ ಇಲ್ಲದ ಮಂಗಳಯಾನ ಎಂಬ ಸಾಧನೆ ಅಲ್ಲದ ಸಾಧನೆ ಬಗ್ಗೆ ಭಜನೆಯೋ ಭಜನೆ.

ಭಾರತ ಒಂದು ಅಸಂಬದ್ಧ ನಾಡು ಎಂಬುದನ್ನು ಇದು ಎತ್ತಿ ತೋರಿಸುತ್ತದಲ್ಲವೇ? ●

...ದಲಿತರನ್ನು ಸೃಷ್ಟಿಸಿದ್ದು ಮುಸಲ್ಮಾನರು: ಆರೆಸ್ಸೆಸ್ ಸಂಶೋಧನೆ

...ಗೋಮುವಾದಿ ಸಂಘಟನೆಯಾದ ಆರೆಸ್ಸೆಸ್ ಮತ್ತು ಅದರ ಕೃಪಾಪೋಷಿತ ...ೋಧಕರು ಜಾತಿ ವ್ಯವಸ್ಥೆಯ ಉಗಮಕ್ಕೆ ಒಂದು ಹೊಸ ವ್ಯಾಖ್ಯಾನವನ್ನು ಕೊಟ್ಟಿದ್ದಾರೆ. ... ಪ್ರಕಾರ ಮಧ್ಯಕಾಲೀನ ಅವಧಿಯಲ್ಲಿ ದನದ ಮಾಂಸ ತಿನ್ನುವ ಮುಸಲ್ಮಾನ ...ಣಕಾರರು ಭಾರತಕ್ಕೆ ಬರುವತನಕ ಇಲ್ಲಿ ಶೂದ್ರ ವರ್ಗವಾಗಲಿ, ಅಸ್ಪೃಶ್ಯತೆಯಾಗಲಿ ...ಲ್ಲವಂತೆ. ಅರಬ್ಬಿ ದೇಶದಿಂದ ಭಾರತಕ್ಕೆ ಬಂದ ಮುಸಲ್ಮಾನರು ಬೇಕಂತಲೇ ... ಹಿಂದೂಗಳಿಗೆ ಅಸಹ್ಯ ಹುಟ್ಟಿಸುವಂತಹ ದನಗಳನ್ನು ಕಡಿಯುವ, ಅವುಗಳ ...ವನ್ನು ಸಿಗಿಯುವ, ಶವಗಳನ್ನು ಸಾಗಿಸುವ ಕೆಲಸಗಳನ್ನು ಕೊಟ್ಟಿದ್ದರಿಂದ ...ವರೂ ಅಸ್ಪೃಶ್ಯರಾದರಂತೆ. ಆಮೇಲೆ ಬಂದ ಬ್ರಿಟಿಷರು ಅವರಿಗೆಲ್ಲ ದಲಿತರು ... ನಾಮಕರಣ ಮಾಡಿ ಅವರನ್ನೆಲ್ಲ ಹಿಂದೂಗಳಿಂದ ಬೇರ್ಪಡಿಸಿದರಂತೆ.

...ರೆಸ್ಸೆಸ್ಸಿನ ಈ ಹೊಸ ತರ್ಕದ ಹಿಂದೆ ಎರಡು ಕುತಂತ್ರಗಳು ಅಡಗಿವೆ. ...ನೆಯದು: ಎಲ್ಲರೂ ಹಿಂದೂ ಎಂದು ಹೇಳುವ ಮೂಲಕ ತಮ್ಮ ರಾಜಕೀಯ ... ಸಾಮಾಜಿಕ ಬೇಳೆ ಬೇಯಿಸಿಕೊಳ್ಳುವುದು. ಎರಡನೆಯದು: ಮುಸಲ್ಮಾನರ ...ದ್ಧ ದಲಿತರನ್ನು ಎತ್ತಿಕಟ್ಟುವುದು.

...ತ್ತೀಚೆಗೆ ಆರೆಸ್ಸೆಸ್‌ನ ವಕ್ತಾರನಾದ ವಿಜಯ್ ಸೋಂಕಾರ್ ...ಶಾಸ್ತ್ರಿ ಬರೆದಿರುವ ಮೂರು ಪುಸ್ತಕಗಳಲ್ಲಿ ಇಂತಹ ...ವನ್ನು ಮುಂದಿಸಲಾಗಿದೆ. ಈ ಮೂರೂ ಪುಸ್ತಕಗಳಿಗೆ ಇತರೆ ... ನಾಯಕರು ಮುನ್ನುಡಿಗಳನ್ನು ಬರೆದಿದ್ದಾರಲ್ಲದೆ, ಆರೆಸ್ಸೆಸ್ ...ಸ್ಥ ಮೋಹನ್ ಭಾಗವತನೇ ಇವುಗಳನ್ನು ಬಿಡುಗಡೆ ...ದ್ದಾನೆ. ಸ್ವಘೋಷಿತ ಲೇಖಕ ಮತ್ತು ಅಸಂಬದ್ಧ ಸಂಶೋಧಕ ...ಶಾಸ್ತ್ರಿಯು ಬಿಜೆಪಿ ಅಧ್ಯಕ್ಷ ಅಮಿತ್ ಶಾನ ಗೂಡನ ತಂಡದಲ್ಲಿ ...ದಿದ್ದಾನಲ್ಲದೆ ಈತ ಬರೆದಿರುವ ಪುಸ್ತಕಗಳನ್ನು ಉತ್ತರ ಪ್ರದೇಶದಲ್ಲಿ ...ವ ಮೂಲಕ ದಲಿತರನ್ನು ಇನ್ನಷ್ಟು ಸಂಖ್ಯೆಯಲ್ಲಿ ಬಿಜೆಪಿಯತ್ತ ...ವುದು ಈ ಪುಸ್ತಕಗಳ ಉದ್ದೇಶ.



ಈ ಶಾಸ್ತ್ರಿಗೆ ಮುಸಲ್ಮಾನರು ಇಲ್ಲಿಗೆ ಬರುವ ಬಹಳಷ್ಟು ಮುನ್ನವೇ ಸೃಷ್ಟಿಯಾಗಿದ್ದ ಮಹಾಭಾರತದಲ್ಲೇ ಜಾತಿಯ ಉಲ್ಲೇಖ ಇದೆ ಎಂದೂ, ಸಾವಿರಾರು ಸಂಬಂಧಿಗಳನ್ನು ಹತ್ಯೆಗೈದಿದ್ದ ಧರ್ಮರಾಯನಿಗೆ ಪಟ್ಟಾಭಿಷೇಕ ಮಾಡಕೂಡದೆಂದೂ ವಾದಿಸಿದ್ದ ಚಾರ್ವಾಕ ಎಂಬ ಶೂದ್ರನಿಗೆ ಕೃಷ್ಣನೇ ಜೀವಂತ ದಹನದ ಶಿಕ್ಷೆ ಕೊಟ್ಟಿದ್ದು ಎಂದೂ ಗೊತ್ತು! ಅಷ್ಟೇ ಅಲ್ಲ, ಅಂಬೇಡ್ಕರ್ ಅವರ ನೇತೃತ್ವದಲ್ಲಿ ರಚನೆಯಾದ ನಮ್ಮ ದೇಶದ ಸಂವಿಧಾನದ ಬದಲಾಗಿ ಮನುಸ್ಮೃತಿಯೇ ಸಂವಿಧಾನವಾಗಬೇಕು ಎಂದು ವಾದಿಸುವ ಶಾಸ್ತ್ರಿ ತರಹದವರಿಗೆ ಇದೇ ಮನುಸ್ಮೃತಿಯಲ್ಲೂ ಬ್ರಾಹ್ಮಣೇತರರನ್ನು ಹೇಗೆ ಬಣ್ಣಿಸಲಾಗಿದೆ ಎಂದೂ ಗೊತ್ತು. ಆದರೂ ಈಗ ಬೇಕಂತಲೇ ದಲಿತರು ಮುಸಲ್ಮಾನರ ಆಗಮನಕ್ಕೆ ಮುನ್ನ ಬ್ರಾಹ್ಮಣ ಮತ್ತು ಕ್ಷತ್ರಿಯ ತರಹದ ಮೇಲುಜಾತಿಯವರಾಗಿದ್ದರು, ಅವರು ರಾಜರೂ ಆಗಿದ್ದರೂ, ಆದರೆ ಅವರನ್ನೆಲ್ಲ ಕುಲಗೆಡಿಸಿದ್ದು ಮುಸಲ್ಮಾನರು ಎಂಬ ತರ್ಕವನ್ನು ಮಂಡಿಸುವ ಮೂಲಕ ಮತ್ತೊಮ್ಮೆ ದಲಿತರನ್ನು ಮತ್ತು ಶೂದ್ರರನ್ನು ವಂಚಿಸಲು ಯತ್ನಿಸುತ್ತಿದ್ದಾರೆ.

ಅಷ್ಟೇ ಅಲ್ಲ, ಈ ಪುರೋಹಿತಶಾಹಿ ವರ್ಗ ಈಗಲೂ ಶೂದ್ರ ಮತ್ತು ದಲಿತರನ್ನು ಮುಸಲ್ಮಾನರ ವಿರುದ್ಧ ಎತ್ತಿ ಕಟ್ಟಿ, ತಮ್ಮ ಹಿತಾಸಕ್ತಿಯನ್ನು ಕಾಪಾಡುವ ಕಾಲಾಳುಗಳನ್ನಾಗಿಸಲು ಹೊಂಚುಹಾಕುತ್ತಿದ್ದಾರೆ.


ಈ ಶಾಸ್ತ್ರಿ ತರಹದವರನ್ನು ಯಾವ ದನದ ಚರ್ಮದಿಂದ ತಯಾರಿಸಿದ ಎಕ್ಕಡದಿಂದ ಬಾರಿಸಬೇಕು?

ಏಜೆಂಟರ ಮತ್ತು ಓದುಗರ ಗಮನಕ್ಕೆ

ದಸರಾ ಪ್ರಯುಕ್ತ ಮುದ್ರಣಾಲಯಗಳಿಗೆ ರಜೆಯಿರುವುದರಿಂದ ಮುಂದಿನ ವಾರದ ಸಂಚಿಕೆಯು ಒಂದು ದಿನ ಮುಂಚಿತವಾಗಿಯೇ ಗುರುವಾರ ಮಾರುಕಟ್ಟೆಗೆ ಬರಲಿದೆ. ಎಂದಿನಂತೆ ಸಹಕರಿಸಿ

–ಸಂ.

ಹೊನ್ನಾವರ: ಅಕ್ರಮ ಗ್ಯಾಸ್ ಗೋದಾಮಿನ ಅಸಲಿ ಅಪ್ಪ ಯಾರು




ರಾಘವೇಂದ್ರ ವಿಠ್ಠಲ ನಾಯ್ಕ್

ಸಮುದ್ರ ನಗರಿ ಹೊನ್ನಾವರ ಎಲ್‌ಪಿಜಿ ಗ್ಯಾಸ್ ಬೆಂಕಿಯಲ್ಲಿ ಬೂದಿಯಾಗುವ ಭಯದಲ್ಲಿ ಬಸವಳಿದುಹೋಗಿದೆ! ಎಲ್ಲ ಕಾನೂನು-ಕಟ್ಟಳೆ ಧಿಕ್ಕರಿಸಿ ಕಳ್ಳ ಹಣದ ಕುಬೇರನೊಬ್ಬ ಬೇನಾಮಿಯಾಗಿ ಜನವಸತಿ ಪ್ರದೇಶದ ನಟ್ಟನಡುವೆಯೇ ಗ್ಯಾಸ್ ಸಿಲಿಂಡರ್ ದಾಸ್ತಾನು ಮಳಿಗೆ ಎಬ್ಬಿಸುತ್ತಿರುವುದು ಅಸಹಾಯಕ ಜನರನ್ನು ಕಂಗಾಲಾಗಿಸಿಬಿಟ್ಟಿದೆ. ಸ್ಥಳೀಯ ಪಟ್ಟಣ ಪಂಚಾಯತ್‌ನಿಂದ ಹಿಡಿದು ಜಿಲ್ಲಾಡಳಿತದತನಕ, ಅಗ್ನಿಶಾಮಕ ದಳದಿಂದ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ವರೆಗಿನ ಅಷ್ಟೂ ಇಲಾಖೆಯ ಅಧಿಕಾರಿಗಳು ಲಂಚದ ಅಮೇಧ್ಯ ಭರಪೂರ್ ತಿಂದು ಮುಗ್ಧ ಮಂದಿಯ ಮಾರಣಹೋಮಕ್ಕೆ ರೆಡಿಯಾಗಿರುವ ರಕ್ಕಸರಿಗೆ ನೆರವಾಗುತ್ತಿರುವುದು ಘೋರವಾಗಿದೆ!

ಹೊನ್ನಾವರದಲ್ಲಿ ಈಗಾಗಲೇ ಒಂದು ಅಡುಗೆ ಅನಿಲ ಸಿಲಿಂಡರ್ ವಿತರಣಾ ಘಟಕವಿದೆ. ಈ ಡಿಸ್ಟ್ರಿಬ್ಯೂಟರ್‌ಗೆ ನಿಭಾಯಿಸಲಾಗದಷ್ಟು ಗ್ರಾಹಕರಿದ್ದಾರೆ. ಹೀಗಾಗಿ ಅರ್ಹ ವಿಕಲಚೇತನ ಒಬ್ಬನಿಗೆ ಹೊಸದೊಂದು ಏಜೆನ್ಸಿ ಕೊಡಲು ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಓಸಿ) ತೀರ್ಮಾನಿಸಿ ಜಾಹೀರಾತು ನೀಡಿತ್ತು. ಆಗ ಹಲವು ಅರ್ಹರು ಅರ್ಜಿ ಗುಜರಾಯಿಸಿದ್ದರು. ಆದರೆ ಲೈಸೆನ್ಸ್ ದಕ್ಕಿದ್ದು ಮಾತ್ರ ಶುದ್ಧ ಅಯೋಗ್ಯನಿಗೆ! ತೀರಾ ಸಣ್ಣ ಅಂಗವೈಕಲ್ಯದ ರಾಘವೇಂದ್ರ ವಿಠ್ಠಲ ನಾಯ್ಕ್ ಎಂಬ ಸರ್ಕಾರಿ ಗುತ್ತಿಗೆದಾರ ತನ್ನ 'ಬಾಸ್'ನ ಪಾಪದ ಹಣ ಹರಿಸಿ ಈ ಪರವಾನಗಿ ತಂದಿದ್ದಾನೆ. ಈತನ ಅಂಗವೈಕಲ್ಯದ ಪ್ರಮಾಣ ಪತ್ರವೇ ಖೋಟಾ. ತನ್ನ ಎಡಗಾಲು ಶೇಕಡಾ 45-50ರಷ್ಟು ಸಾಮರ್ಥ್ಯ ಕಳೆದುಕೊಂಡಿದೆ ಎಂದೀತ ಬೋಗಸ್ ಪ್ರಮಾಣಪತ್ರ ಪಡೆದಿದ್ದಾನೆ.

ಯಾವ ಆ್ಯಂಗಲ್‌ನಿಂದ ಎಂಥ ಪೆದ್ದು ವೈದ್ಯ ಪರೀಕ್ಷಿಸಿದರೂ ಈ ದಗಲುಬಾಜಿ ರಾಘು ನಾಯ್ಕ್‌ನ ಅಂಗವೈಕಲ್ಯ ಅಬ್ಬಬ್ಬಾ ಎಂದರೂ ಶೇಕಡಾ 5 ರಿಂದ 10ರಷ್ಟು ಎಂಬುದು ಖಾತ್ರಿಯಾಗುತ್ತದೆ. ಈ ನಕಲಿ ದೈಹಿಕ ನ್ಯೂನತೆ ಸರ್ಟಿಫಿಕೇಟ್ ತೋರಿಸಿಯೇ ಐಓಸಿಯ ಪ್ರಭೃತಿಗಳನ್ನು ಯಾಮಾರಿಸಿದ ರಾಘು ನಾಯ್ಕ್ ಮತ್ತವನ ರಹಸ್ಯ ಫೈನಾನ್ಸಿಯರ್ ನಂತರ ಕೈಹಾಕಿದ್ದು ಹೊನ್ನಾವರದ ನಿಷ್ಪಾಪಿ ಜನರ ಜೀವ-ಜೀವನಕ್ಕೆ! ದಟ್ಟ ಜನವಸತಿ ಪ್ರದೇಶವಾಗಿ ರೂಪುಗೊಳ್ಳುತ್ತಿರುವ 'ರಾಮತೀರ್ಥ' ಏರಿಯಾದಲ್ಲಿ ಈ 'ಗ್ಯಾಸ್ ಗೂಂಡಾಗಳು' ಎಲ್‌ಪಿಜಿ ಸಿಲಿಂಡರ್ ದಾಸ್ತಾನಿಗೆ ಐಓಸಿ ಮತ್ತು ಸ್ಥಳೀಯ ಮುನ್ಸಿಪಾಲ್ಟಿಯಿಂದ ನಿರಾಕ್ಷೇಪಣಾ ಪತ್ರ (ಎನ್‌ಓಸಿ) ವಾಮಮಾರ್ಗದಿಂದ ಪಡೆದುಕೊಂಡುಬಿಟ್ಟರು. ಈ ಎರಡು ಎನ್‌ಓಸಿ ಸಿಕ್ಕಿದ್ದೇ ತಡ, ಸದ್ರಿ ಅವಾಂತರಕಾರಿಗಳು ಎಲ್ಲ ಕಾನೂನು-ನೀತಿ-ನಿಯಮ-ಮನುಷ್ಯತ್ವ ಬುದ್ಧಿಪೂರ್ವಕವಾಗೇ ಉಲ್ಲಂಘಿಸಿ ಗ್ಯಾಸ್ ಸಿಲಿಂಡರ್ ದಾಸ್ತಾನು ಮಳಿಗೆ ರಾತ್ರಿ ಬೆಳಗಾಗುವುದರಲ್ಲಿ ಕಟ್ಟಿ ಕೇಕೆ ಹಾಕಿದರು!!



CERTIFICATE OF DISABILITY

CERTIFICATE FOR THE PERSONS WITH DISABILITIES

ರಾಘವೇಂದ್ರ ವಿಠ್ಠಲ ನಾಯ್ಕ್‌ನ ಅಂಗವೈಕಲ್ಯದ ಬೋಗಸ್ ಪ್ರಮಾಣಪತ್ರ

ರಾಘು ನಾಯ್ಕನ ನಿಗೂಢ ಚಹರೆ-ತರಾತುರಿಯಲ್ಲಿ ಆತನ ಕಟ್ಟಡ ತಲೆಯೆತ್ತಿದ ಪರಿ ಸ್ಥಳೀಯರಲ್ಲಿ ಸಂಶಯ ಮೂಡಿಸಿತು. ಪಟ್ಟಣ ಪಂಚಾಯತ್ ತಹಸೀಲ್ದಾರ್‌ರನ್ನು ಸದ್ರಿ ಕಟ್ಟಡದ ಬಗ್ಗೆ ಕೇಳಿದರು. ಆಗವರಿಗೆ ಸಿಕ್ಕ ಉತ್ತರ ಆಘಾತಕಾರಿಯಾಗಿತ್ತು, ರಾಮತೀರ್ಥದ ಜನವಸತಿ ಮಧ್ಯದಲ್ಲಿ ಕಟ್ಟಲಾಗಿರುವ ಕಟ್ಟಡ ತಮ್ಮನ್ನು ಒಂದಲ್ಲ ಒಂದು ದಿನ ಆಪೋಷನ ಪಡೆಯುವ ಗ್ಯಾಸ್ ಗೋದಾಮೆಂದು ಗೊತ್ತಾದಾಗ ಜನರು ಬೆಚ್ಚಿಬಿದ್ದರು. ಸಂಬಂಧಿಸಿದವರಿಗೆ ತಮ್ಮ ಮನೆ-ಜೀವನಾಧಾರ ಕಸುಬು-ದೇವಸ್ಥಾನಗಳಿರುವ ಪರಿಸರದಲ್ಲಿ ಗ್ಯಾಸ್ ಸಿಲಿಂಡರ್ ಸಂಗ್ರಹಕ್ಕೆ ಪರವಾನಗಿ ಕೊಡಬಾರದೆಂದು ದುಂಬಾಲು ಬಿದ್ದರು. ಎಲ್ಲಾ ಸರ್ಕಾರಿ ಇಲಾಖೆಗಳು ಪ್ರತಿಭಟನಾಕಾರರ ಕಣ್ಣೊರೆಸುವ ಕರಾಮತ್ತು ಮಾಡಿದರೇ ಹೊರತು ಕಾನೂನುಬಾಹಿರ ಪಾತಕ ನಡೆಸುತ್ತಿದ್ದ ರಾಘು ನಾಯ್ಕ್ ಅಂಡ್ ಕೋ.ಗೆ ಕಡಿವಾಣ ಹಾಕಲಿಲ್ಲ.

ಐಓಸಿ ನಿಬಂಧನೆ, ಅಗ್ನಿಶಾಮಕ ದಳದ ನಿರ್ಬಂಧ ಮತ್ತು ಸ್ಥಳೀಯಾಡಳಿತದ ಪಟ್ಟಣ ಪಂಚಾಯತಿಯ ಷರತ್ತುಗಳಂತೆ ರಾಮತೀರ್ಥ ಪ್ರದೇಶದಲ್ಲಿ ಅಪಾಯಕಾರಿ ಗ್ಯಾಸ್ ಸಿಲಿಂಡರ್ ಶೇಖರಣೆಗೆ ಅವಕಾಶವೇ ಇಲ್ಲ. ಐಓಸಿ ಜನವಸತಿ ಪ್ರದೇಶದ 100 ಮೀಟರ್ ಪರಿಧಿಯಲ್ಲಿ ಎಲ್‌ಪಿಜಿ ಗ್ಯಾಸ್ ದಾಸ್ತಾನು ಮಾಡುವಂತಿಲ್ಲ ಎಂಬುದು ಐಓಸಿಯ ಕಟ್ಟುನಿಟ್ಟಿನ ನಿಯಮ! ಅಗ್ನಿಶಾಮಕ ಇಲಾಖೆ ಗ್ಯಾಸ್ ದಾಸ್ತಾನಿನ ಬಳಿ ಹೋಗಿ ಬರಲು ಅಗ್ನಿಶಾಮಕ ವಾಹನಕ್ಕೆ ಕನಿಷ್ಠ 6 ಮೀಟರ್ ಅಗಲದ ಮತ್ತು 45,000 ಕೆಜಿ ಭಾರ ಹೊರಬಲ್ಲ ಸಾಮರ್ಥ್ಯದ ರಸ್ತೆ ಬೇಕೇಬೇಕೆನ್ನುತ್ತದೆ. ಪಟ್ಟಣ ಪಂಚಾಯತಿಗಂತೂ ಜನನಿಬಿಡ ಪ್ರದೇಶದಲ್ಲಿ ಅನಾಹುತಕಾರಿ ಗ್ಯಾಸ್ ಸಿಲಿಂಡರ್ ಸಂಗ್ರಹಕ್ಕೆ ಪರವಾನಗಿ ಕೊಡಲಿಕ್ಕೇ ಅವಕಾಶವಿಲ್ಲ! ಗ್ಯಾಸ್ ಗೋದಾಮಿನ ಮೇಲಾಗಲಿ ಹತ್ತಿರವಾಗಲಿ ಸಾಮಾನ್ಯ ಅಥವಾ ಹೈಟೆನ್ಷನ್ ವಿದ್ಯುತ್ ತಂತಿ ಹೋಗಬಾರದೆಂದು ಅಗ್ನಿಶಾಮಕ ಮತ್ತು ಸ್ಫೋಟಕ ನಿಯಂತ್ರಕ ಇಲಾಖೆ ಸ್ಪಷ್ಟವಾಗಿ ನಿರ್ಬಂಧ ಹಾಕಿದೆ!

ಈ ಎಲ್ಲ ಕಾನೂನು-ಕಟ್ಟಳೆ ರಾಘು ನಾಯ್ಕನ ಹಿಂದಿರುವ ದೋಖಾ ದೊರೆಯ ಧನೋನ್ಮಾದದ ಎದುರು ಕತ್ತೆಯಂತಾಗಿ ಹೋಗಿದೆ. ಈ ತೆರೆಮರೆಯ 'ಗ್ಯಾಸ್‌ಬಾಸ್' ಸರ್ಕಾರದ ಮಟ್ಟದಲ್ಲಿರುವ ತನ್ನ ಸಂಪರ್ಕ-ದುಡ್ಡಿನ ದೌಲತ್ತಿನಿಂದ ರಾಘುಗೆ ಎಲ್ಲಾ ಎನ್‌ಓಸಿ ಲೈಸೆನ್ಸ್ ಸೌಲಭ್ಯ ಸಲೀಸಾಗಿ ಸಿಗುವಂತೆ 'ಜಾದೂ' ಮಾಡಿದ್ದಾನೆ! ನಿಯೋಜಿತ ಗ್ಯಾಸ್ ಗೋದಾಮಿಗೆ ಅಗ್ನಿಶಾಮಕ ವಾಹನ ಹೋಗಲು ಬೇಕಾದಷ್ಟು ಅಗಲದ ರಸ್ತೆಯೇ ಇಲ್ಲ. ಇಲ್ಲಿರುವುದು ಕೇವಲ 3.66 ಮೀಟರ್ (12 ಫೂಟ್) ಅಗಲದ, ಗ್ಯಾಸ್ ಸಿಲಿಂಡರ್ ಹೊತ್ತು ತರುವ ದೈತ್ಯ ಲಾರಿಯ ಭಾರ ಹೊರಲಾಗದ ಕಚ್ಚಾ ರಸ್ತೆ! ಅಗ್ನಿಶಾಮಕ ವಾಹನದ ಅಗಲ 12 ಫೂಟ್‌ಗಿಂತ ಜಾಸ್ತಿ. ಅಷ್ಟೇ ಅಲ್ಲ, ಆಕಸ್ಮಾತ್ ಅಗ್ನಿ ಅಪಘಡವಾದರೆ ಸಲೀಸಾಗಿ ಗೋದಾಮಿನ ಬಳಿ ಅಗ್ನಿಶಾಮಕ ವಾಹನಕ್ಕೆ ಹೋಗುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ ಈ ಕಚ್ಚಾ ರಸ್ತೆಯಲ್ಲಿ ತೀವ್ರತರದ ತಿರುವೊಂದಿದೆ.

ರಾಘುನ ಗೋದಾಮಿನ ಮೇಲೆಯೇ ಸಾಮಾನ್ಯ ವಿದ್ಯುತ್ ಲೈನ್ ಹಾದು ಹೋಗಿದ್ದರೆ, ಕೇವಲ 41 ಮೀಟರ್ ಅಂತರದಲ್ಲಿ ಕೈಗಾ ಅಣುವಿದ್ಯುತ್ ಸರಬರಾಜಿನ 110 ಕೆವಿ ಸಾಮರ್ಥ್ಯದ ಹೈಟೆನ್ಷನ್ ವಿದ್ಯುತ್ ಮಾರ್ಗ ಹಾದು ಹೋಗಿದೆ! ಇದು ದೊಡ್ಡ ಅಪಘಾತಕ್ಕೆ ಆಹ್ವಾನ ಕೊಡುವಂತಿದೆ. ಗ್ಯಾಸ್ ಸಿಲಿಂಡರ್ ಸಂಗ್ರಹಾಗಾರದ ಅತೀ ಹತ್ತಿರದಲ್ಲಿ ಎಪಿಎಂಸಿ ಮಾರುಕಟ್ಟೆ ಪ್ರಾಂಗಣ, ದಾಸ್ತಾನು ಮಳಿಗೆ, ಕಚೇರಿ ಇದೆ. ಇಲ್ಲಿಗೆ ನೂರಾರು ಜನ ಬಂದುಹೋಗುತ್ತಾರೆ. ಇನ್ನೊಂದು ಪಕ್ಕದಲ್ಲಿ ನ್ಯಾಯಾಂಗ ಇಲಾಖೆಯ ವಸತಿಗೃಹಕ್ಕೆ ಮಂಜೂರಾದ ಎಕರೆಗಟ್ಟಲೆ ಜಾಗವಿದೆ. ಹಲವು ಜನರ ಸೈಟ್‌ಗಳಿವೆ. ಅನಾದಿಕಾಲದಿಂದ ನೆಲೆ ನಿಂತ ಜನರ ಮನೆ-ತೋಟ-ಜೀವನಾಧಾರ ಕಸುಬಿನ ಅಂಗಡಿ-ಮಳಿಗೆ ಇದೆ. ಐದಾರು ದೇವಾಲಯಗಳ ಸಂಕೀರ್ಣವಿದೆ. ಭಕ್ತಾದಿಗಳು ನಿರಂತರವಾಗಿ ಬಂದು-ಹೋಗುವ 'ಕ್ಷೇತ್ರ'ವಿದು. ಇದೆಲ್ಲ ಗೊತ್ತಿದ್ದೂ ಜಿಲ್ಲಾಡಳಿತ-ಪಟ್ಟಣ ಪಂಚಾಯತ್ ಮತ್ತು ಐಓಸಿ ರಾಘುನ ದೊರೆಯ ಹಣದ ಆಮಿಷಕ್ಕೆ ಬಿದ್ದು ಸಾಲಾಗಿ ಪರವಾನಗಿ-ಅವಕಾಶ ನೀಡಿದೆ. ಅಮಾಯಕ ಜನರನ್ನು ಗಂಡಾಂತರಕ್ಕೆ ನೂಕಿದೆ.

ಪಟ್ಟಣ ಪಂಚಾಯ್ತದಲ್ಲಿ ಲೀನಾ ಬ್ರಿಟ್ಟೊ ಎಂಬ ಅಧಿಕಪ್ರಸಂಗಿ ಹೆಂಗಸು ಮುಖ್ಯಾಧಿಕಾರಿಯಾಗಿದ್ದಾಗ ರಾಘುನ ಅಕ್ರಮ ಗ್ಯಾಸ್ ಮಳಿಗೆಗೆ ಬೇಕಾದ ಅನುಕೂಲ ಎಲ್ಲವೂ ಮಾಡಿಕೊಟ್ಟಿದ್ದಾರೆ. ಗ್ಯಾಸ್ ಗೋದಾಮಿಗೆ ಅವಶ್ಯವಿರುವುದು ಕನಿಷ್ಠ 9 ಗುಂಟೆ ಜಾಗ. ರಾಘು ಮತ್ತು ನಾಗೇಶ್ ನಾಯ್ಕನ ಎರಡೂ ಸೈಟ್ ಸೇರಿದರೆ, ಆಗೋದು 13 ಗುಂಟೆ ಜಾಗ. ಆದರೆ ಇದರಲ್ಲಿ ರಾಘುನದು ವಸತಿ ಉದ್ದೇಶಕ್ಕೆ ಬಿನ್ ಶೇತ್ಕಿ ಆಗಿರುವ ಜಾಗವಾದರೆ ನಾಗೇಶರದು ಪಕ್ಕಾ ಕೃಷಿ ಜಮೀನು! ಗ್ಯಾಸ್ ಗೋದಾಮಿಗೆ ಬೇಕಾಗಿರುವುದು ವಾಣಿಜ್ಯ ಉದ್ದೇಶಕ್ಕೆ ಬಿನ್ ಶೇತ್ಕಿ ಆಗಿರುವ ಭೂಮಿ. ಇದೆಲ್ಲ ಪ್ರಜ್ಞಾಪೂರ್ವಕವಾಗಿ ಕಡೆಗಣಿಸಿರುವ ಮುಖ್ಯಾಧಿಕಾರಿಣಿ ಲೀನಾ ಮೇಡ... ಸಿಕ್ಕಷ್ಟು ಪರ್ಸೆಗಿಳಿಸಿ ಅಕ್ರಮ-ಅನ್ಯಾಯ-ಅನಾಹುತಕಾರಿ ಪರ್ಮಿಷನ್ ನೀಡಿದ... ಈ ಜಾಗದಲ್ಲಿ ವಾಣಿಜ್ಯ ಉದ್ದೇಶದ ಚಟುವಟಿಕೆ ನಡೆಸಲಿಕ್ಕೇಬಾರದು. ... ಬಾಯಿಯಷ್ಟೇ ಪಾತಕ ಮಂಗಳೂರಿನ ಸ್ಫೋಟಕ ಇಲಾಖೆಯ ಉಪಮು... ನಿಯಂತ್ರಕ ಸಾಹೇಬರು ಮಾಡಿದ್ದಾರೆ. ಎಲ್ಲ ಕುರುಡು ಕಾಂಚಾಣದ ಮಹಿಮೆ...

ಚೆನ್ನೈನ ಐಓಸಿ ಮತ್ತು ಸ್ಫೋಟಕ ಇಲಾಖೆಯ ನಿಯಂತ್ರಕರಿಗೆ ರಾ... ನಾಯ್ಕ್ ಸುಳ್ಳು ನೀಲನಕ್ಷೆ ಕೊಟ್ಟು-ಜೊತೆಗೊಂದು ಕಾಣಿಕೆ ಪೊಟ್ಟಣ ... ಪರವಾನಗಿ ಪಡೆದಿದ್ದಾನೆ. ಆತನ ಬ್ಲೂಪ್ರಿಂಟ್‌ನಲ್ಲಿ ಗ್ಯಾಸ್ ಗೋದಾ... ಸುತ್ತಲಿನ 7 ಮೀಟರ್ ಪ್ರದೇಶದಲ್ಲಿ ಯಾವ ಮನೆ-ಮಠ-ಕಚೇರಿ ವಿದ್ಯು... ಲೈನ್ ಇಲ್ಲದ "ಕ್ಲಿಯರ್ ಸ್ಪೇಸ್" ಸೃಷ್ಟಿಸಲಾಗಿದೆ! ಜನ ವಸತಿಯಿಂದ ... ಮೀಟರ್ ದೂರದ ಅಗ್ನಿಶಾಮಕ ವಾಹನ ಸರಾಗವಾಗಿ ಓಡಾ... ಅನುಕೂಲಕರವಾದ ಪ್ರದೇಶದಲ್ಲಿ ಮಾತ್ರ ಗ್ಯಾಸ್ ಗೋದಾ... ನಿರ್ಮಿಸಬಹುದೆಂಬ ನಿಯಮ ಸ್ಥಳೀಯಾಡಳಿತದಲ್ಲಿದೆ. ಹಾಗಾಗಿ ಸು... ಮನೆಗಳು, ಎಪಿಎಂಸಿ, ಹೈಟೆನ್ಷನ್ ವಿದ್ಯುತ್ ಗೋಪುರ-ಲೈನ್, ದೇ... ಇಲ್ಲದ ಖಾಲಿ ಜಾಗ ರಾಘವ ನಕಾಶೆಯಲ್ಲಿ ತೋರಿಸಲಾಗಿದೆ. ಈ ನಕಾಶೆ ಆಧಾರದಲ್ಲಿ ಸ್ಫೋಟಕ ನಿಯಂತ್ರಕ, ಐಓಸಿ ಮತ್ತು ಹೊ... ಮುನ್ಸಿಪಾಲ್ಟಿಯ "ಕಳ್ಳಿ" ಪರವಾನಗಿ ನೀಡಿದ್ದಾರೆ.



ಗ್ಯಾಸ್ ಗೋದಾಮಿನ ಮೇಲೆ ವಿದ್ಯುತ್ ಲೈನ್



ಗ್ಯಾಸ್ ಗೋದಾಮಿನ ಬಳಿಯೇ ದೇವಸ್ಥಾನ-ಹೈಟೆನ್ಷನ್ ಲೈನ್ ಮತ್ತು ಎಪಿಎಂಸಿ



ಅಗ್ನಿಶಾಮಕ ವಾಹನ ಓಡಾಡಲಾಗದ ಕಚ್ಚಾರಸ್ತೆ

ಇಷ್ಟೆಲ್ಲ ಅಕ್ರಮಗಳನ್ನು ವ್ಯವಸ್ಥಿತವಾಗಿ ಮಾಡಿ ಹೊನ್ನಾವರದಿಂದ ... ತನಕದ ವಿವಿಧ ಇಲಾಖೆಗಳಿಂದ ಎನ್‌ಓಸಿ ತರುವ ಹಿಕಮತ್ತು-ಹಣ ... ರಾಘು ನಾಯ್ಕನಿಗೆ ಇಲ್ಲ. ಪೆದ್ದು-ಪೆದ್ದಾಗಿ ಹಲ್ಲು ಕಿಸಿಯುವ ಈ ರಾ... ಹಿಂದಿರುವ ಸೂತ್ರಧಾರ ಆರ್.ಪಿ. ನಾಯ್ಕ್ ಎಂಬ ನಗರಾಭಿವೃದ್ಧಿ ಇಲಾ... ಗೋಲ್‌ಮಾಲ್ ಇಂಜಿನಿಯರ್. ಈತ ಸರ್ಕಾರಿ ನೌಕರನಾದರೂ ... ಮಾತ್ರ ಅಪ್ಪಟ ಪುಢಾರಿಯದು. ಜುಜುಬಿ ಜೇಇ ಗ್ರೇಡಿನ (ಡಿಪ್ಲೊ... ಆರ್.ಪಿ. ನಾಯ್ಕ್ ಇವತ್ತು ಜಿಲ್ಲಾ ಮಟ್ಟದ ಕಾರ್ಯನಿರ್ವಾಹಕ ಇಂಜಿನಿ... ಆಗಿ ಕುಂತಿದ್ದಾನೆ. ಜಿಲ್ಲಾ ನಗರಾಭಿವೃದ್ಧಿ ಕೋಶಾನ ಇಇ ಆಗಿರುವ ... ಆ ಹುದ್ದೆಗೇರುವ ಯೋಗತ್ಯೆಯಿಲ್ಲ. ಆದರೂ ತನ್ನ ಭ್ರಷ್ಟಾಚಾರದ ದ... ಆತ ಅಲ್ಲಿ ಪ್ರತಿಷ್ಠಾಪಿತನಾಗಿದ್ದಾನೆ.

ಇವತ್ತು ಜಿಲ್ಲಾಧಿಕಾರಿ-ಜಿಲ್ಲಾ ಮಂತ್ರಿಯನ್ನೇ ತನಗೆ ಬೇಕಾದಂತೆ ಕುಣಿಸುವ ತಾಕತ್ತು ತಲುಪಿರುವ ಆರ್.ಪಿ. (13ನೇ ಪು...

...ಂಡು ಭೂಮಿಗಾಗಿ ದಲಿತನ ನೆತ್ತರು ಕುಡಿದ ವಿದ್ಯಾರಣ್ಯ ಭಾರತಿ ಸ್ವಾಮೀಜಿ


...ಹಂಪಿಯ ಮಠದಲ್ಲೊಬ್ಬ 'ಕಿಲ್ಲರ್ ಸ್ವಾಮೀಜಿ'!

...ತ್ತೀಚೆಗೆ ಕರ್ನಾಟಕದಲ್ಲಿ ಕಾವಿ ಸ್ವಾಮಿಗಳ ...ಂತಕ್ಕಿಂತ ರಾದ್ಧಾಂತಗಳೇ ಹೆಚ್ಚಾಗುತ್ತಿವೆ. ಒಬ್ಬ ...ತ್ರಿಗಳ ಹೆಸರಿನಲ್ಲಿ ಅತ್ಯಾಚಾರ, ಅನಾಚಾರಗಳಲ್ಲಿ ...ಗೆದ್ದರೆ ಮತ್ತೊಬ್ಬ ತಾನು ಮಾಡಿಕೊಂಡ ಭಾನ್ಗಡಿ ...ಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 'ಚೆತ್ತಲುಸೇವೆ' ... ಬಂದಿದ್ದಾನೆ, ಇನ್ನೊಬ್ಬ ಕಾಡು-ಗೋಮಾಳಗಳನ್ನೂ ... ರಿಯಲ್ ಎಸ್ಟೇಟ್ ದಂಧೆಗಿಳಿದಿದ್ದರೆ ...ಒಬ್ಬನ್ಯಾರೋ ರಾಜಕಾರಣಿಗಳಿಗೆ ಸುಳ್ಳು ಭವಿಷ್ಯ ...ವುದರಲ್ಲೇ ಹೊಟ್ಟೆ ಹೊರೆದುಕೊಳ್ಳುತ್ತಿದ್ದಾನೆ. ಒಟ್ಟಿನಲ್ಲಿ ...ಷದವರ ದಾರಿಗಳು ಬೇರೆಬೇರೆಯಾದರೂ ಲೂಟಿ ...ವುದೇ ಅವರ ಮೂಲ ಕಸುಬು ಎಂಬಂತಾಗಿದೆ. ...ಹಂಪಿಯ ವಿದ್ಯಾರಣ್ಯ ಭಾರತಿಸ್ವಾಮಿ, ಇವರೆಲ್ಲರನ್ನೂ ...ಮೀರುವಂತ ಕಿರಾತಕ ಸ್ವಾಮಿಯೇ ಸರಿ. ಏಕೆಂದರೆ ...ಷ್ಟ್ ತುಂಡು ಭೂಮಿಗೋಸ್ಕರ ಈ ಸ್ವಾಮಿ, ಒಬ್ಬ ... ದಲಿತ ರೈತನ ನೆತ್ತರು ಕುಡಿದು ಅವನ ಇಡೀ ...ಬವನ್ನು ಬೀದಿಗೆ ತಂದು ನಿಲ್ಲಿಸಿದ್ದಾನೆ. ಗಂಡನನ್ನು ...ಕೊಂಡ ಆ ವಿಧವೆ ಹೆಂಗಸು ನಿಲ್ಲಲೂ ನೆಲೆಯಿಲ್ಲದೆ, ...ಗೆ ಬಂದ ತನ್ನ ನಾಲ್ಕು ಹೆಣ್ಣು ಮಕ್ಕಳೊಂದಿಗೆ ...ಣಾದಂತೆ ಗೋಳಿಡುವ ದೃಶ್ಯ ಎಂಥವರ ಕರುಳನ್ನೂ ...ಿಡುತ್ತೆ. ಆದರೆ ಒಂದು ಸಾವಿಗೆ ಪರೋಕ್ಷವಾಗಿ ...ಾದ ವಿದ್ಯಾರಣ್ಯ ಭಾರತಿ ಸ್ವಾಮೀಜಿಗಾಗಲಿ ಅಥವಾ ... ಆರ್‌ಎಸ್‌ಎಸ್ ಕೊಲೆಗಡುಕ ಗುಂಪಿಗಾಗಲಿ ಈ ... ಕಿಂಚಿತ್ತೂ ಪಾಪಪ್ರಜ್ಞೆಯಿಲ್ಲ, ಬದಲಾಗಿ ಇಡೀ ...ವನ್ನೇ ಮುಚ್ಚಿಹಾಕಿ ಶತಾಯಗತಾಯ ವಿಧವೆಯಿಂದ ...ಯನ್ನು ಕಬಳಿಸಲೇಬೇಕೆಂದು ಹುನ್ನಾರ ...ವುದರಲ್ಲೇ ಬ್ಯುಸಿಯಾಗಿದ್ದಾರೆ. ವಿಪರ್ಯಾಸವೆಂದರೆ, ... ಭಜನೆಯಲ್ಲೇ ಕಳೆದುಹೋಗಿರುವ 'ಪ್ರಜ್ಞಾವಂತ'(?) ...ಮಗಳಿಗಾಗಲಿ ಅಥವಾ 'ಸಭ್ಯ' ಸಮಾಜಕ್ಕಾಗಲಿ ...ಕಡ್ಡೊಂದು ದೌರ್ಜನ್ಯ ಲೆಕ್ಕಕ್ಕೇ ಇಲ್ಲ!

...ಲಿತ ಜೀವಗಳ ತುಂಡು ಭೂಮಿ

...ದ್ಯಾರಣ್ಯ ಭಾರತಿಸ್ವಾಮಿಯ ನಿರಂತರ ಬೆದರಿಕೆ ಮತ್ತು ... ಗೂಂಡಾಗಳ ಉಪಟಳಕ್ಕೆ ಬೇಸತ್ತು ಜೀವ ...ಕೊಂಡವನು ಹಂಪಿಯ ಪಕ್ಕದಲ್ಲಿರುವ ಕಡ್ಡಿರಾಂಪುರ ...ದ ದಲಿತ ರೈತ ಶಂಕರ್‌ನಾಯ್ಕ್. ಇವನ ತಾತನ ...ಂದಲೂ ಒಂದೆರಡು ದಲಿತ ಕುಟುಂಬಗಳು ಗ್ರಾಮದ ...ಭದ್ರಾ ನದಿ ದಂಡೆಯಲ್ಲಿರುವ ಕಲ್ಲು ಬಂಡೆಗಳ ...ಷ್ಟು ಜಾಗವನ್ನೇ ಹಸನುಮಾಡಿಕೊಂಡು ಅಲ್ಲಿ ಉಳುಮೆ ...ತ್ತಿದ್ದರು. 1984-85 ರಲ್ಲಿ 0/36ಡಿ ಸರ್ವೇ ...ನ 1 ಎಕರೆ ಜಮೀನನ್ನು ಶಂಕರ್‌ನಾಯ್ಕನ ತಂದೆ ...ಯ್ಕನಿಗೂ ಮತ್ತು 0/36ಸಿ ಸರ್ವೇ ನಂಬರ್‌ನ 2 ...ಜಮೀನನ್ನು ಮತ್ತೊಂದು ದಲಿತ ಕುಟುಂಬವಾದ ... ಗಂಡ ದಕ್ಯಾನಾಯ್ಕನ ಹೆಸರಿಗೂ ಸ್ವತಃ ಸರ್ಕಾರವೇ ...ೂರು ಮಾಡಿತ್ತು, ಇವುಗಳಿಗೆ ಸರ್ಕಾರ ದಾಖಲೆ, ... ನಂಬರ್ (ಹಿಂದೆ ಈ ಭಾಗದಲ್ಲಿ ಪಹಣಿಯ ... ಈ ನಂಬರ್ ನೀಡುತ್ತಿದ್ದರು) ಸಹ ನೀಡಿದೆ. ...ತ ಹೆಚ್ಚಿನದೇನನ್ನೂ ತಿಳಿಯದ ಆ ಮುಗ್ಧ ...ಬಗಳಿಗೆ ಬದಲಾದ ನಿಯಮಗಳ ಪ್ರಕಾರ ತಮ್ಮ ...ನಿಗೆ ಪಹಣಿ ತೆಗೆದುಕೊಳ್ಳಬೇಕೆಂಬ ಅರಿವೂ ...ಿ. ನದಿ ತಟದ ಲಾಭದಾಯಕ ಜಾಗದ ಮೇಲೆ ...ು ವಿರೂಪಾಕ್ಷೇಶ್ವರ ವಿದ್ಯಾರಣ್ಯ ಭಾರತಿ ಸ್ವಾಮಿಯ ...ಬಿದ್ದಿದ್ದೇ ತಡ, ಆ ಲಂಬಾಣಿಗರ ಬದುಕುಗಳಲ್ಲಿ ...ಳಿಯನ್ನೇ ಎಬ್ಬಿಸಿತ್ತು.

...ಸಲಿಗೆ ಕೃಷಿ ಜಮೀನಿನ ಹಿಂದೆ-ಮುಂದೆ ತಿಳಿಯದ ...ಿ ಇದ್ದಕ್ಕಿದ್ದಂತೆ ಲಂಬಾಣಿ ತಾಂಡಾದ ಜನ ಉಳುಮೆ ಮಾಡುತ್ತಿದ್ದ ಭೂಮಿಯ ಮೇಲೆ ಕಣ್ಣು ಬಿದ್ದದ್ದು ಏಕೆ? ಎಂಬ ಪ್ರಶ್ನೆಗೆ ಹಂಪಿಯ ರಿಯಲ್ ಎಸ್ಟೇಟ್ ದಂಧೆಯೇ ಉತ್ತರ ನೀಡುತ್ತದೆ. ಹಂಪಿಯಲ್ಲಿ ಈಗ ಚಿನ್ನಕ್ಕಿಂತ ಕೊಂಪೆ ಭೂಮಿಯ ಬೆಲೆಯೇ ಜಾಸ್ತಿ. ಮೊದಲೇ ಪ್ರವಾಸೋದ್ಯಮದಿಂದಾಗಿ ತಕ್ಕಮಟ್ಟಿಗೆ ಬೆಲೆ ಏರಿಸಿಕೊಂಡಿದ್ದ ಹಂಪಿಯಲ್ಲಿ ಬಳ್ಳಾರಿ ಗಣಿ ಮಾಫಿಯಾದ ಇಂಟರ್‌ನ್ಯಾಷನಲ್ ದಂಧೆಗಳಿಂದಾಗಿ ಭೂಮಿ ಬೆಲೆ ಮತ್ತಷ್ಟೂ ಗಗನಕ್ಕೇರಿತ್ತು. ಇದೇ ಕಾರಣದಿಂದ ಏನಾದರೂ ಮಾಡಿ ತುಂಗಭದ್ರಾ ಹೊಳೆಯ ತಟದಲ್ಲಿರುವ ಮತ್ತು ಸಂಪದ್ಭರಿತ ಭೂಮಿಯನ್ನು ವಶಪಡಿಸಿಕೊಳ್ಳಬೇಕೆಂದು ಸ್ವಾಮಿ ಆಸೆಗಣ್ಣು ಬಿಟ್ಟಿದ್ದ.




ವಿದ್ಯಾರಣ್ಯ ಭಾರತಿ ಸ್ವಾಮಿ

ಮೊದಲ ಸಂಚು ಗೋಶಾಲೆ

ಹಾಗೆ ನೋಡಿದರೆ, ಆ ಎರಡೂ ಲಂಬಾಣಿ ಕುಟುಂಬಗಳು ಉಳುಮೆ ಮಾಡುತ್ತಿರುವ ಮೂರು ಎಕರೆ ಜಮೀನಲ್ಲದೆ ಅವುಗಳ ಸುತ್ತ ಇನ್ನುಳಿದಂತೆ ಒಂಬತ್ತು ಎಕರೆ ಜಮೀನೂ ಇತ್ತು. ಆದರೆ ಅಲ್ಲೆಲ್ಲ ಕಲ್ಲುಬಂಡೆಗಳೇ ತುಂಬಿದ್ದರಿಂದ ಅದು ವ್ಯವಸಾಯ ಯೋಗ್ಯವಾಗಲಿ ಅಥವಾ ಮತ್ತ್ಯಾವುದೇ ಉಪಯೋಗಕ್ಕಾಗಲಿ ಬರುವಂತಿರಲಿಲ್ಲ. ಒಟ್ಟು 12 ಎಕರೆಯ ಮೇಲೂ ಕಣ್ಣು ಮುಗಿಯುವುದಕ್ಕೂ ಲಾಯಕ್ಕಲ್ಲದ ನಮ್ಮ ಮನೆ ಬಾಗಿಲಿಗೇ ಸ್ವಾಮಿಯೇ ಆಫರ್ ತಂದಿತ್ತಿರೋದು ಮಹಾಪ್ರಸಾದವೇ ಸರಿ ಎಂದು ಭಾವಿಸಿದ ಆ ಮುಗ್ಧ ಕುಟುಂಬಗಳು ಸ್ವಾಮಿಯ ದುರಾಲೋಚನೆಯನ್ನು ಅರ್ಥಮಾಡಿಕೊಳ್ಳದೆ ಗೋಶಾಲೆಗೆ ಅನುಮತಿ ನೀಡಿದರು. ಅದಕ್ಕೆ ಪ್ರತಿಯಾಗಿ ಗೋಶಾಲೆಯಲ್ಲಿ ಗೋವುಗಳನ್ನು ನೋಡಿಕೊಳ್ಳಲು ಶಂಕರ್‌ನಾಯ್ಕನ ಅಣ್ಣ ಭೀಮಾನಾಯ್ಕ್‌ನನ್ನೇ ಸ್ವಾಮಿ ನೇಮಿಸಿಕೊಂಡಿದ್ದ. ಹೀಗೆ ಆ ಜನರ ವಿಶ್ವಾಸ ಗಳಿಸಿಕೊಂಡ ವಿದ್ಯಾರಣ್ಯ ಸ್ವಾಮೀಜಿ ಆ ಜಮೀನಿನಲ್ಲಿ ತನ್ನದೊಂದು ಅಸ್ತಿತ್ವವನ್ನು ಊರಿದ್ದ.

ಈ ಜನ ತಮ್ಮ ಹೆಸರಲ್ಲಿ ಪಹಣಿ ಮಾಡಿಸಿಕೊಂಡಿಲ್ಲ ಎಂಬುದನ್ನು ಚೆನ್ನಾಗಿ ಅರಿತಿದ್ದ ಸ್ವಾಮೀಜಿ ಒಳಗಿಂದೊಳಗೇ ಹಣ ಮತ್ತು ಪ್ರಭಾವ ಬಳಸಿ 12 ಎಕರೆಗೂ ವಿದ್ಯಾರಣ್ಯ ದೇವಸ್ಥಾನದ ಹೆಸರಲ್ಲಿ ಪಹಣಿ ತಯಾರಿಸಿಟ್ಟುಕೊಂಡ. ತಮ್ಮ ಗೋಶಾಲೆ ಅಲ್ಲಿ ತಲೆತಲಾಂತರದಿಂದ ಇದೆ, ಅದಕ್ಕೆ ಸಂಬಂಧಪಟ್ಟ ಪಹಣಿಯೂ ನಮ್ಮ ಬಳಿ ಇದೆ ಎಂಬ ರಾಗ ಶುರು ಮಾಡಿದ ಸ್ವಾಮೀಜಿ ಕೂಡಲೇ ಜಾಗ ಖಾಲಿ ಮಾಡುವಂತೆ ಲಂಬಾಣಿ ಕುಟುಂಬಗಳಿಗೆ ಶಾಕ್ ನೀಡಿದ್ದ. ಬೆಳಗುವ ಊದಿನಕಡ್ಡಿಯೇ ಅಂದು ಸುಟ್ಟಂತಾಗಿತ್ತು ಅವರಿಗೆಲ್ಲ. ಗೋಶಾಲೆ ಮಾಡುವುದಾಗಿ ತಮ್ಮಿಂದಲೇ ಜಾಗ ಗಿಟ್ಟಿಸಿಕೊಂಡ ಸ್ವಾಮಿ ಇದೀಗ ಸಮಸ್ತ 12 ಎಕರೆಯೂ ನನ್ನದೇ ಜಾಗ ಖಾಲಿ ಮಾಡಿ ಎನ್ನುವುದನ್ನು ಅವರಿಂದ ಅರಗಿಸಿಕೊಳ್ಳಲಿಕ್ಕೇ ಆಗಿರಲಿಲ್ಲ. ಆ ಜಮೀನು ಬಿಟ್ಟರೆ ಆ



ಶಂಕರ್‌ನಾಯ್ಕ್‌ನ ತಂದೆ ಲಕ್ಯಾನಾಯ್ಕ್‌ನ ಹೆಸರಲ್ಲಿರುವ ಜಮೀನಿನ ಸರ್ಕಾರಿ ದಾಖಲೆ ....

ದೃಷ್ಟಿ ಬಿದ್ದದ್ದು ಅವರನ್ನು ಜರ್ಜರಿತರನ್ನಾಗಿಸಿತ್ತು. ಶಂಕರ್‌ನಾಯ್ಕ್‌ನ 4 ಜನ ಹೆಣ್ಣು ಮಕ್ಕಳು ಬೆಳೆದು ನಿಂತಿದ್ದಾರೆ, ಭೂಮಿ ಬಿಟ್ಟು ಹೋಗಬೇಕೆಂಬ ಆರ್‌ಎಸ್‌ಎಸ್ ಪುಂಡರ ಕಿರುಕುಳದಿಂದ ಬದುಕಿನ ಭರವಸೆ ಇರದಂತಾಗಿತ್ತು. ಇದು ವಿಪರೀತಕ್ಕೆ ಹೋದದ್ದು ಸೆಪ್ಟೆಂಬರ್ 06 ರ ಶನಿವಾರದಂದು. ಅವತ್ತು ವಿದ್ಯಾರಣ್ಯ ಭಾರತಿ ಸ್ವಾಮಿಯ ಆರ್‌ಎಸ್‌ಎಸ್ ಗೂಂಡಾಗಳಾದ ಮಹಾಲಿಂಗ, ವೀರಾಸ್ವಾಮಿ ಮತ್ತು ಚಂದ್ರ ಎಂಬುವವರು ಶಂಕರ್‌ನಾಯ್ಕ್‌ನ ಹೊಲಕ್ಕೆ ನುಗ್ಗಿ ಬೆಳೆದು ನಿಂತಿದ್ದ 6 ತಿಂಗಳ ಕಬ್ಬನ್ನು ನಾಶಮಾಡಿದ್ದಲ್ಲದೆ, ಫಸಲಿಗೆ ಬಂದಿದ್ದ ಹುರುಳಿಯನ್ನು ದನಗಳನ್ನು ಬಿಟ್ಟು ಮೇಯಿಸಿದ್ದರು. ಅವರ ಅಟ್ಟಹಾಸ ಅಷ್ಟಕ್ಕೇ ನಿಲ್ಲದೆ ವಾಸಕ್ಕೆಂದು ಆ ಬಡ ಕುಟುಂಬಗಳು ಹೊಲದಲ್ಲಿ ಕಟ್ಟಿಕೊಂಡಿದ್ದ ಚಿಕ್ಕ ಗುಡಿಸಲನ್ನೂ ಕೆಡವಿ ರಣಕೇಕೆ ಹಾಕಿದ್ದರು. ಅವರ ಅಮಾನವೀಯ ಅಟ್ಟಹಾಸ ಪಕ್ಕಾ ರಾಯಲಸೀಮೆ ರೌಡಿಗಳನ್ನೂ ನಾಚಿಸುವಂತಿತ್ತು. ಎಷ್ಟೇ ಆಗಲಿ ಈ ರೀತಿ ನಾಶ ಮಾಡುವುದು, ಕೆಡುವವ ಸಂಸ್ಕೃತಿಯೇ ಆರ್‌ಎಸ್‌ಎಸ್ ಪ್ರತಿಪಾದನೆ ತಾನೆ.



ಗೂಂಡಾಗಳಿಂದ ಧ್ವಂಸವಾಗುವುದಕ್ಕೆ ಮುನ್ನ ಗುಡಿಸಲಿನ ಮುಂದೆ ಶಂಕರ್‌ನಾಯ್ಕ್‌ನ ಕುಟುಂಬ



ಆರೆಸ್ಸೆಸ್ ಗೂಂಡಾಗಳಿಂದ ನಾಶಗೊಂಡ ಭೀಮನಾಯ್ಕ್‌ನ ಗದ್ದೆ...

ಹಾಕಿದ ವಿದ್ಯಾರಣ್ಯ ಭಾರತಿ ಸ್ವಾಮೀಜಿ ಆ ಜಮೀನಿನಲ್ಲಿ ತನ್ನ ತಳವೂರಲು ಆಯ್ಕೆ ಮಾಡಿಕೊಂಡದ್ದು ಗೋಶಾಲೆ ಎಂಬ ನೆಪವನ್ನು. ಶಂಕರ್‌ನಾಯ್ಕನ ಕುಟುಂಬವನ್ನು ಸಂಪರ್ಕಿಸಿದ ಸ್ವಾಮಿ 'ಮೂಕಪ್ರಾಣಿಗಳಿಗೆ ಇಲ್ಲೊಂದು ಗೋಶಾಲೆ ಕಟ್ಟುತ್ತೇವೆ. ಹೇಗೂ ಪಕ್ಕದಲ್ಲೇ ನದಿ ಇರುವುದರಿಂದ ಮೇವು, ನೀರಿಗೆ ತೊಂದರೆ ಇರುವುದಿಲ್ಲ ಅಂತ ಈ ಜಾಗವನ್ನು ಆಯ್ಕೆ ಮಾಡಿಕೊಂಡಿದ್ದೇವೆ' ಎಂಬುದಾಗಿ ತಲೆ ಸವರಿದ್ದ. ಜಾಗ ಕೊಟ್ಟ ಉಪಕಾರಕ್ಕಾಗಿ ನಿಮ್ಮ ಕುಟುಂಬದ ಒಬ್ಬರಿಗೆ ಗೋಶಾಲೆಯಲ್ಲಿ ರಾಸುಗಳನ್ನು ನೋಡಿಕೊಳ್ಳುವ ಕೆಲಸವನ್ನೂ ಕೊಡುವುದಾಗಿ ಕುಟುಂಬವನ್ನು ಸ್ವಾಮಿ ಪುಸಲಾಯಿಸಿದ್ದ. ಜಮೀನು ಪಕ್ಕದಲ್ಲಿರೋದು ಬರಡು ನೆಲ ತಾನೆ, ಗೋಕಲ್ಯಾಣ(!)ಕ್ಕೆ ನಾವ್ಯಾಕೆ ಅಡ್ಡಿಯಾಗಬೇಕು, ಅಲ್ಲದೇ ದೂರ ನಿಂತು ಕೈ ...



ಶಂಕರ್‌ನಾಯ್ಕ್‌ನ ಶವದ ಮುಂದೆ ರೋದಿಸುತ್ತಿರುವ ಹೆಂಡತಿ ಹಾಗೂ ಮಕ್ಕಳು

ಕುಟುಂಬಗಳಿಗೆ ಬೇರಾವುದೇ ಆಸರೆ ಇರಲಿಲ್ಲ. ಅವರು ವಾಸಿಸುವ ಗುಡಿಸಲುಗಳು ಇದ್ದದ್ದೂ ಅದೇ ಜಮೀನಿನಲ್ಲಿ!

ಆರ್‌ಎಸ್‌ಎಸ್ ಗೂಂಡಾಗಿರಿ

ಬರಬರುತ್ತಾ ಸ್ವಾಮೀಜಿಯ ಬೆದರಿಕೆಗಳು ಹೆಚ್ಚಾಗುತ್ತಾ ಬಂದವು. ಸ್ಥಳೀಯ ಆರ್‌ಎಸ್‌ಎಸ್ ಹುಡುಗರನ್ನೇ ಬಳಸಿಕೊಂಡ ಸ್ವಾಮಿ ಬಡ ಕುಟುಂಬಗಳ ವಿರುದ್ಧ ಛೂಬಿಟ್ಟ. ಅಲ್ಲಿಯವರೆಗೂ ಅಣ್ಣ ತಮ್ಮಂದಿರಂತಿದ್ದ ಅದೇ ಗ್ರಾಮದ ಜನ, ಸ್ವಾಮೀಜಿ ಹುಟ್ಟುಹಾಕಿದ ವಿಷಬೀಜದಿಂದಾಗಿ ಪರಸ್ಪರ ವೈಷಮ್ಯಕ್ಕಿಳಿದಿದ್ದರು. ಧರ್ಮೋನ್ಮತ್ತ ಆರ್‌ಎಸ್‌ಎಸ್ ಪಡೆಗಳಿಗೆ ನಾವು ಯಾರ ವಿರುದ್ಧ ಮಾತನಾಡುತ್ತಿದ್ದೇವೆಂದಾಗಲೀ ಇದರಿಂದ ಸ್ವಾಮೀಜಿಗಾಗುತ್ತಿರುವ ಲಾಭದ ಬಗ್ಗೆಯಾಗಲೀ ಯೋಚನೆ ಮಾಡದೇ ಆ ಬಡ ಕುಟುಂಬಗಳನ್ನು ಒಕ್ಕಲೆಬ್ಬಿಸಲು ಸಜ್ಜಾಗಿದ್ದರು. ಇದೇ ವಿಚಾರದಲ್ಲಿ ಲಂಬಾಣಿ ತಾಂಡಾದ ಜನರಿಗೂ ಊರವರಿಗೂ ವಾಗ್ವಾದ ನಡೆದು ಜಗಳದ ಮಟ್ಟಕ್ಕೂ ಹೋಗಿತ್ತು. ಇಲ್ಲಿಯವರೆಗೂ ಶಂಕರ್‌ನಾಯ್ಕ, ಭೀಮ್ಯಾನಾಯ್ಕ, ಟೀಕ್ಯಾನಾಯ್ಕ (ಸಕ್ರಮ್ಮನ ಮಗ) ಕುಟುಂಬಗಳು ಉಳುಮೆ ಮಾಡುತ್ತಿದ್ದ ಈ ಭೂಮಿಯನ್ನು ಬಿಡಬೇಕೆಂದು ಹೆದರಿಸುವುದು ಹೆಚ್ಚಾಗತೊಡಗಿತು. ಸ್ವಾಮಿಯ ಹಿಂಬಾಲಕರೆಂದು ಹೇಳಿಕೊಳ್ಳುತ್ತಿದ್ದ ಆರ್‌ಎಸ್‌ಎಸ್‌ನ ಗೂಂಡಾಪಡೆಗಳು ಆಗಾಗ ರೈತನ ಭೂಮಿಗೂ ಹೋಗಿ ಬೆದರಿಸುವುದು, ಜಮೀನಿಗೆ ಹರಿಯುತ್ತಿದ್ದ ನೀರನ್ನು ಬಂದ್ ಮಾಡುವುದು, ಗೋಶಾಲೆಯ ದನಗಳನ್ನು ನುಗ್ಗಿಸಿ ಬೆಳೆದು ನಿಂತ ಪೈರುಗಳನ್ನೆಲ್ಲಾ ನಾಶ ಮಾಡುವುದು.. ಹೀಗೆ ಕಿರುಕುಳವನ್ನು ನೀಡಲಾರಂಭಿಸಿದರು.

ಶಂಕರ್‌ನಾಯ್ಕ್ ಮತ್ತು ಕುಟುಂಬವರ್ಗ ಬಹಳ ಕಷ್ಟಪಟ್ಟು ಬೆವರು ಸುರಿಸಿ ದುಡಿದು ಹಸನು ಮಾಡಿಕೊಂಡಿದ್ದ ಭೂಮಿಯ ಮೇಲೆ ಸ್ವಾಮೀಜಿಯ ಕಾಕ


ಹೆಣವಾದ ದಲಿತ ರೈತ

ತಮ್ಮನ್ನು ಬದುಕಲು ಬಿಡುವಂತೆ ಶಂಕರ್‌ನಾಯ್ಕ್, ಅವನ ಹೆಂಡತಿ, ನಾಲ್ಕು ಹೆಣ್ಣುಮಕ್ಕಳು ಪರಿಪರಿಯಾಗಿ ಕೇಳಿಕೊಂಡರೂ ವ್ಯಾಘ್ರ ಮನಸ್ಸಿನ ಸ್ವಾಮಿ ಇದ್ಯಾವುದಕ್ಕೂ ಸೊಪ್ಪು ಹಾಕದೆ ರೈತ ಕುಟುಂಬಗಳಿಗೆ ಕಿರುಕುಳಗಳನ್ನು ಮುಂದುವರಿಸಿದ್ದ. ಕಾವಿಧಾರಿಯ ಈ ದಬ್ಬಾಳಿಕೆಯಿಂದ ಶಂಕರ್‌ನಾಯ್ಕ ಅಕ್ಷರಶಃ ಕನಲಿಹೋಗಿದ್ದ. ಜಮೀನಿನ ಹೊರತಾಗಿ ತನ್ನ ಕುಟುಂಬವನ್ನು ಸಾಕುವ ಬೇರೆ ದಾರಿಯೇ ಕಾಣದಾದ ಆತ ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರಕ್ಕೆ ಬಂದ. ಅದರಂತೆ ಸ್ವಾಮೀಜಿಯ ಗೂಂಡಾಗಳು ದಾಂಧಲೆ ನಡೆಸಿಹೋದ ಅದೇ ದಿನ, ತಾನು ಇಷ್ಟು ದಿನ ಬೆವರು ಹರಿಸಿ ಹಸನು ಮಾಡಿದ್ದ ಹೊಲದಲ್ಲೇ ವಿಷ ಕುಡಿದು ಸತ್ತು ಹೋದ.

ಈ ಸಾವಿಗೆ ಹಂಪಿಯ ವಿದ್ಯಾರಣ್ಯ ಭಾರತೀ ಸ್ವಾಮೀಜಿಯೇ ನೇರ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ. ಇದು ಪೊಲೀಸ್ ಕೇಸೇನಾದರೂ ಆದಲ್ಲಿ ತಾನು ಅದಕ್ಕಾಗಿ ಸಿಲುಕುವುದು ಗ್ಯಾರಂಟಿ ಎನ್ನುವುದು ಖಾತ್ರಿಯಾಗುತ್ತಿದ್ದಂತೆಯೇ ತನ್ನೆಲ್ಲಾ ಪ್ರಭಾವ ಬಳಸಿ ಪೊಲೀಸರನ್ನು ಕಟ್ಟಿ ಹಾಕುವ ಪ್ರಯತ್ನ ಮಾಡಿದ್ದ. ಶಂಕರ್‌ನಾಯ್ಕನ ಹೆಂಡತಿ

(13ನೇ ಪುಟಕ್ಕೆ)

'ಬಸವಕೇಂದ್ರ' ಹಗರಣ: ಶೆಟ್ಟರ್ ಕೈ, ರೇವತಿಯೂ ಸೈ!


ಬಸವರಾಜನ್

ಇತ್ತೀಚೆಗಷ್ಟೆ ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ 'ಅರ್ಕಾವತಿ ವೀರ', ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್ ಮೇಲೆ ಆರೋಪದ ಒಂದು ಬಾಂಬ್ ಎಸೆದಿದ್ದರು. ಶೆಟ್ಟರ್ ಮುಖ್ಯಮಂತ್ರಿಯಾಗಿದ್ದಾಗ ಕಾನೂನು, ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಬೆಂಗಳೂರಿನ ಗಾಂಧೀನಗರದಲ್ಲಿರುವ ಮುರುಘಾ ಮಠಕ್ಕೆ ಸೇರಿದ 28,500 ಚದರಡಿ ಜಾಗದ ಬಸವಕೇಂದ್ರವನ್ನು 63.55 ಕೋಟಿಗೆ ಖರೀದಿ ಮಾಡಿದ್ದರು ಎಂಬುದೇ ಆ ಆರೋಪವಾಗಿತ್ತು, ಅದಾದ ಮೇಲೆ ತಥಾಕಥಿತ ಧಾಟಿಯಲ್ಲಿ ಇದೆಲ್ಲಾ ಮುಖ್ಯಮಂತ್ರಿ ಸಿದ್ದರಾಮಯ್ಯನ ಹುನ್ನಾರ ಅಂತ ಶೆಟ್ಟರ್ ಮಸಿ ಒರೆಸಿಕೊಳ್ಳುವ ಯತ್ನ ಮಾಡಿದರೆ, ತನಿಖೆಗೆ ಒಪ್ಪಿಸುವುದಾಗಿ ಸಿಎಂ ಸಿದ್ದು ಶೆಟ್ಟರ್‌ಗೆ ಬಿಸಿ ರವಾನಿಸಿದ್ದರು. ನಿಮ್ಮ 'ಲಂಕೇಶ್' ಪ್ರಕರಣದ ಜಾಡು ಹಿಡಿದು ಹೊರಟಾಗ ಶೆಟ್ಟರ್ ಸರ್ಕಾರದ ಜಾತಿಪ್ರೀತಿಯ ಜೊತೆಜೊತೆಯಲ್ಲಿ ಮುರುಘಾ ಮಠದ ಅಪರಾತಪರಾಗಳು, ಬರಗೆಟ್ಟ ಭಾನ್ಗಡಿಗಳು, ಶರಣರ ಖಯಾಲಿಗಳೆಲ್ಲಾ ಒಂದೊಂದಾಗಿ ಬೆತ್ತಲಾಗಿದ್ದವು. ಅವುಗಳನ್ನೆಲ್ಲಾ ವಸ್ತುನಿಷ್ಠವಾಗಿ ನಿಮ್ಮ ಮುಂದಿಡುವ ಪ್ರಯತ್ನವನ್ನು 'ಲಂಕೇಶ್' ಮಾಡಿದೆ.

ಶೆಟ್ಟರ್‌ರನ್ನು ತಲುಪುವುದಕ್ಕೂ ಬಹಳ ಮುಂಚೆಯೇ ಬಸವಕೇಂದ್ರದ ಈ ಅಧೋಗತಿ ವೃತ್ತಾಂತ ಶುರುವಾಗುತ್ತದೆ. ಅದಕ್ಕೂ ಮುನ್ನ ಈ ಬಸವಕೇಂದ್ರ ಸ್ಥಾಪನೆಯ ಇತಿಹಾಸವನ್ನೊಮ್ಮೆ ನೋಡಿ ಬರೋಣ. 1950ಕ್ಕೂ ಮುನ್ನ ಈ ಬಸವಕೇಂದ್ರ (ಆಗಿನ್ನೂ ಈ ಹೆಸರು ಇರಲಿಲ್ಲ) ಒಂದು ವಿರಕ್ತ ಮಠವಾಗಿತ್ತು, ಚಿತ್ರದುರ್ಗ ಮುರುಘಾ ಮಠದ ಅಂದಿನ ಮಠಾಧೀಶ ಮಲ್ಲಿಕಾರ್ಜುನ ಸ್ವಾಮಿಗಳ ಆದರ್ಶಕ್ಕೆ ಮಾರುಹೋದ ಈ ಮಠದ ಪೀಠಾಧಿಪತಿ ತನ್ನ ಕಾಲಾನಂತರ ಬೆಂಗಳೂರಿನ ಮಠವು ಮುರುಘಾ ಮಠದ ಸುಪರ್ದಿಗೆ ಒಳಪಡತಕ್ಕದ್ದು ಎಂದು ಘೋಷಿಸಿದ ಪರಿಣಾಮವಾಗಿ ಅದು ಮುರುಘಾ ಮಠಕ್ಕೆ ಸೇರಿತು. ಹಾಗೇ ಬಂದ ಮಠವನ್ನ ಮುರುಘಾ ಮಠಾಧಿಪತಿ ಮಲ್ಲಿಕಾರ್ಜುನ ಸ್ವಾಮಿಗಳು 'ಬಸವಕೇಂದ್ರ'ವೆಂದು ನಾಮಕರಣಮಾಡಿ ಶರಣರ ಚಿಂತನೆಗಳಿಗೆ ಚಾವಡಿಯಾಗಿ ಪರಿವರ್ತಿಸಿದ್ದರು. ಆಗಿನಿಂದಲೂ ಅದು ತನ್ನ ಕಾರ್ಯವನ್ನು ಮುಂದುವರೆಸಿಕೊಂಡೇ ಬಂದಿತ್ತು,


ಬಸವರಾಜನ್‌ನ ಕುತಂತ್ರ

ಈ ನಡುವೆ ಬಸವರಾಜನ್ ಎಂಬ ಆಸಾಮಿ ಮಲ್ಲಿಕಾರ್ಜುನ ಸ್ವಾಮಿಗಳ ವಿಶ್ವಾಸ ಸಂಪಾದಿಸಿಕೊಂಡು ಮುರುಘಾ ಮಠವನ್ನು ಹೊಕ್ಕಿದ್ದ. ಈ ಬಸವರಾಜನ್ ಯಾರು, ಅವನೆಂತಹ ಕಪಟಿ, ಈಗಿರುವ ಶಿವಮೂರ್ತಿ ಶರಣರಿಗೆ ತನ್ನ ಪಾಲಿನ ಗದ್ದುಗೆಯನ್ನು ತ್ಯಾಗ(?) ಮಾಡಿ ಅವರನ್ನು ಹೇಗೆ ಕಪಿಮುಷ್ಠಿಯಲ್ಲಿಟ್ಟುಕೊಂಡಿದ್ದ, ಮಠದ ಆಸ್ತಿಯನ್ನು ಹೇಗೆ ಒಂದೊಂದಾಗಿ ಕರಗಿಸುತ್ತಾ ಬಂದ, ಕೊನೆಗೆ ಮಠದಿಂದ ಹೊರ ದಬ್ಬಿಸಿಕೊಂಡ ಬಳಿಕವೂ ಚೆಕ್‌ಬೌನ್ಸ್ ಕೇಸುಗಳ ಮೂಲಕ ಹೇಗೆಲ್ಲಾ ಮಠವನ್ನು ಗೋಳುಹೊಯ್ದುಕೊಂಡ ಎನ್ನುವುದನ್ನು ಇಲ್ಲಿಗೆ ಎರಡು ಸಂಚಿಕೆಗಳ ಹಿಂದೆ 'ಮುರುಘಾ ಶರಣರ ವೈಚಾರಿಕ ಅಧಃಪತನ' ಎಂಬ ಲೇಖನದಲ್ಲಿ ಪತ್ರಿಕೆ ಸವಿಸ್ತಾರವಾಗಿ ವರದಿ ಮಾಡಿತ್ತು, ಹಾಗಾಗಿ ಅದನ್ನು ಮತ್ತೊಮ್ಮೆ ಪ್ರಸ್ತಾಪಿಸುವ ಗೋಜಿಗೆ ಹೋಗದೆ ಪ್ರಸ್ತುತ ವಿಷಯಕ್ಕೆ ಬರುತ್ತೇವೆ.

ಇಂತಿಪ್ಪ ಬಸವರಾಜನ್ ಮುರುಘಾ ಮಠದ ಶಿವಮೂರ್ತಿ ಶರಣರಿಂದ ಒಂದಷ್ಟು ಖಾಲಿ ಚೆಕ್‌ಗಳಿಗೆ ಹಾಗೂ ಖಾಲಿಪತ್ರಗಳಿಗೆ ಸಹಿ ಹಾಕಿಸಿಟ್ಟುಕೊಂಡಿದ್ದ. ವಿಶ್ವಾಸಕ್ಕೋ ಅಥವಾ ಅವನ ಸರ್ವಾಧಿಕಾರಕ್ಕೆ ಬೆದರಿಯೋ ಶರಣರು ಸಹಿ ಮಾಡಿದ್ದರು. 2004ರಲ್ಲಿ ಧನದಾಹಿ ಬಸವರಾಜನ್ ಶರಣರ ಸಹಿ ಇದ್ದ ಅಂತಹುದೇ ಒಂದು ಖಾಲಿ ಹಾಳೆ ಮೇಲೆ ಬೆಂಗಳೂರಿನ ಬಸವಕೇಂದ್ರ ಕಟ್ಟಡವನ್ನು 34 ಕೋಟಿಗೆ ಅಡವಿಡುವುದಾಗಿ ಬರೆದುಕೊಂಡು ಅದನ್ನು ಸೀದಾ ಗಾಂಧಿನಗರದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅಡಮಾನ ಇಟ್ಟವನೇ ಅನಾಮತ್ತು 34 ಕೋಟಿ ಎತ್ತಿಕೊಂಡಿದ್ದ, ಇದರಲ್ಲಿ ಶಿವಮೂರ್ತಿಶರಣರ ಪಾತ್ರ ಎಷ್ಟಿತ್ತೊ ಆ ಮುರುಘನೇ ಬಲ್ಲ!

ಹೋಗಲಿ, ಕಟ್ಟಡವನ್ನು ಅಡವಿಟ್ಟು ಸಾಲ ಪಡೆಯುವಂತ ಜರೂರತ್ತು ಮಠಕ್ಕೆ ಏನಿತ್ತು? ಹಾಗೆ ಪಡೆದ ಹಣವನ್ನು ಏತಕ್ಕೋಸ್ಕರ ಬಳಸಿಕೊಳ್ಳಲಾಯಿತು? ಎಂಬ ಪ್ರಶ್ನೆಗಳೂ ನಿಗೂಢವಾಗಿ ಉಳಿಯುತ್ತವೆ. ಏಕೆಂದರೆ ಅಡಮಾನಿನಿಂದ ಬಂದ 34 ಕೋಟಿಯಲ್ಲಿ 1 ಕೋಟಿ ಹಣವನ್ನು ಮಾತ್ರ 2004ರಲ್ಲಿ ಚಿತ್ರದುರ್ಗದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಡೆಪಾಸಿಟ್ ಇಡಲಾಗಿತ್ತು, ಅದರ ಹೊರತಾಗಿ ಉಳಿದ 33 ಕೋಟಿಯ ಸುಳಿವು ಮಠದ ಅಕೌಂಟ್ಸ್ ಪುಸ್ತಕದ ಯಾವ ಪುಟದಲ್ಲಿಯೂ ಸಿಗುವುದಿಲ್ಲ,


ಸೋಜಿಗವೆಂದರೆ 2004ರಲ್ಲಿ ಯಾವ ಬಸವಕೇಂದ್ರ ಕಟ್ಟಡವನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅಡಮಾನ ಇಟ್ಟಿದ್ದರೋ ಅದೇ ಕಟ್ಟಡದ ನೆಲಮಹಡಿಯನ್ನು 12.4.2007ರಲ್ಲಿ ದಾವಣಗೆರೆಯ ಐ.ವಿ. ವೀರಣ್ಣ ಬಿನ್ ವೀರಸಂಗಪ್ಪ ಎಂಬಾತನಿಗೆ 11 ತಿಂಗಳಿಗೆ ಲೀಜ್ ಅಗ್ರಿಮೆಂಟ್ ಮಾಡಿಕೊಡಲಾಗಿತ್ತು, ಅದೇ ವೀರಣ್ಣ ಎ.ಪಿ. ಬಸವರಾಜ ಎನ್ನುವವನಿಗೆ 3.6 ಲಕ್ಷ ಮುಂಗಡ ಹಾಗೂ ಪ್ರತಿ ತಿಂಗಳು 10 ಸಾವಿರ ಬಾಡಿಗೆಯಂತೆ ಅದನ್ನು 5.10.2007 ರಂದು ಸಬ್‌ಲೀಜ್ ನೀಡಿದ್ದ, ಇಂತಹ ಡಬಲ್ ಲೀಜ್ ವಿಷಯ ತಿಳಿಯುತ್ತಿದ್ದಂತೆಯೇ ಶಿವಮೂರ್ತಿ ಶರಣರು ಕಂಗಾಲಾಗಿ ಹೋಗಿದ್ದರು. ಏಕೆಂದರೆ, ಅಷ್ಟರಲ್ಲಾಗಲೆ ಬಸವರಾಜನ್ ಮಠದಿಂದ ಹೊರದಬ್ಬಿಸಿಕೊಂಡಿದ್ದನಾದ್ದರಿಂದ ಮತ್ತಾರು ಈ ಮಸಲತ್ತು ಮಾಡಿರಬಹುದೆನ್ನುವ ದಿಗಿಲು ಅವರದಾಗಿತ್ತು, ತಡಮಾಡದ ಮುರುಘಾಶರಣರು 05.04.2008ರಂದು ಬೆಂಗಳೂರಿನ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ 'ಐ.ವಿ. ವೀರಣ್ಣ ನನ್ನ ಸಹಿಯನ್ನು ಫೋರ್ಜರಿ ಮಾಡಿ ಆಸ್ತಿ ಕಬಳಿಸಲು ಯತ್ನಿಸಿದ್ದಾರೆ' ಎಂಬುದಾಗಿ ದೂರು ನೀಡಿದ್ದರು. ಪೊಲೀಸ್ ಠಾಣೆಯಲ್ಲಿ 0181/2008 ದೂರು ಸಂಖ್ಯೆಯಡಿ ಕೇಸು ದಾಖಲಾಗಿ ಸಿಒಡಿ ತನಿಖೆಗೂ ಒಳಪಟ್ಟಿತ್ತು, ಆಗ ಅದು ಶಿವಮೂರ್ತಿ ಶರಣರದ್ದೊ ಅಥವಾ ಫೋರ್ಜರಿ ಸಹಿಯೋ ಎಂಬುದನ್ನು ತಿಳಿಯಲು ಮುಂಬೈನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿತ್ತು, ಬಂದ ವರದಿ ಶರಣರನ್ನು ದಂಗುಬಡಿಸಿತ್ತು, ಯಾಕೆಂದರೆ ಅದು ಅವರದೇ ಸಹಿಯಾಗಿತ್ತು, ತನ್ನಿಂದ ಖಾಲಿ ಪತ್ರ, ಚೆಕ್‌ಗಳಿಗೆ ಸಹಿ ಹಾಕಿಸಿಟ್ಟುಕೊಂಡಿದ್ದ ಬಸವರಾಜನ್‌ನ ಕೈಚಳಕ ಶಿವಮೂರ್ತಿಗಳಿಗೆ ಅರಿವಾದದ್ದೇ ಆಗ. ಅಷ್ಟರಲ್ಲಿ ಕಾಲ ಮಿಂಚಿಹೋಗಿತ್ತು, ಅಲ್ಲಿ ಶರಣರು ಮತ್ತೊಂದು ಯಡವಟ್ಟು ಮಾಡಿದ್ದರು. ವೀರಣ್ಣನಿಗೆ ಲೀಜ್ ನೀಡಿದ ವಿಷಯ ಬಯಲಾದದ್ದೇ ತಡ ಶರಣರು ತಮ್ಮ ರಾಜಕೀಯ ಪ್ರಭಾವ ಬಳಸಿ ರಾತ್ರೊ ರಾತ್ರಿ ಬಸವಕೇಂದ್ರವನ್ನು ಬುಲ್ಡೋಜರ್ ಇಟ್ಟು ನೆಲಸಮಾಡಿಬಿಟ್ಟಿದ್ದರು.


ಶಿವಮೂರ್ತಿ ಮುರುಘಾ ಶರಣ


ರೇವತಿ

ಶೆಟ್ಟರ್ ಸರ್ಕಾರದ ಎಂಟ್ರಿ

ಬಸವಕೇಂದ್ರದ ಸುತ್ತ ಇಷ್ಟೆಲ್ಲಾ ರಗಳೆಯಾದ ನಂತರ ಬೆಂಗಳೂರಿನ ಯೂನಿಯನ್ ಬ್ಯಾಂಕು ನಡುಗಿಹೋಗಿತ್ತು, ಯಾಕೆಂದರೆ ಲೀಗಲ್ ಒಪಿನಿಯನ್ ಕೂಡಾ ಇಲ್ಲದೆ ಆಸ್ತಿ ಅಡವಿಟ್ಟು ಕೊಂಡು ಕೋಟ್ಯಂತರ ರೂಪಾಯಿ ನೀಡಿದ್ದು ಕಾನೂನುಬಾಹಿರ ವಾಗಿತ್ತು, ಎಚ್ಚೆತ್ತುಕೊಂಡ ಬ್ಯಾಂಕ್‌ನವರು ನಮ್ಮ ಸಾಲ ಮತ್ತು ಬಡ್ಡಿಯನ್ನು ವಾಪಾಸ್ ಮಾಡಿ ಇಲ್ಲವೇ ಬಸವಕೇಂದ್ರದ ಆಸ್ತಿಯನ್ನು ಹರಾಜು ಹಾಕುತ್ತೇವೆ ಎಂಬ ನೋಟಿಸನ್ನು ಮುರುಘಾ ಶರಣರಿಗೆ ಕಳುಹಿಸಿದ್ದರು. ಹಾಗೊಂದು ವೇಳೆ ಬ್ಯಾಂಕ್ ಹರಾಜು ಪ್ರಕ್ರಿಯೆಗೆ ಮುಂದಾದದ್ದೇ ಆದಲ್ಲಿ ಜನರೆದುರು ಅವಮಾನಕ್ಕೆ ಈಡಾಗಬೇಕಾಗುತ್ತದೆ ಎನ್ನುವ ಸಂದಿಗ್ಧತೆಗೆ ಬಿದ್ದ ಶಿವಮೂರ್ತಿ ಶರಣರಿಗೆ ಅನಿವಾರ್ಯ ಆಯ್ಕೆಯಾಗಿ ಕಂಡದ್ದು ಆಗ ಅಧಿಕಾರದಲ್ಲಿ[...] ಶೆಟ್ಟರ್ ಸರ್ಕಾರ. ಸಾಲ ತೀರಿಸಲಾಗದೆ ಬ್ಯಾಂಕ್‌ನವ[...] ಮಠದ ಆಸ್ತಿಯನ್ನು ಹರಾಜು ಹಾಕಿದರು ಎನ್ನು[...] ಅಪಮಾನಕ್ಕಿಂತ 'ಅಭಿವೃದ್ಧಿ ಕಾರ್ಯಕ್ಕೋಸ್ಕರ ಸರ್ಕಾ[...] ಮುರುಘಾ ಮಠದ ಆಸ್ತಿಯನ್ನು ಖರೀದಿಸಿತು' ಎನ್ನು[...] ಗೌರವಯುತ ಸಾಂತ್ವನ ಸಂಪಾದಿಸಿಕೊಳ್ಳುವುದು ಶರಣ[...] ಉದ್ದೇಶವಾಗಿತ್ತು,


ಜಗದೀಶ್ ಶೆಟ್ಟರ್

ಜಾತಿಯ ಕಂದಾಚಾರ ಕಿತ್ತೊಗೆಯಬೇಕೆಂಬ ವೇದಿ[...] ಭಾಷಣದ ಶರಣರು ಕೊನೆಗೂ ತಮ್ಮ ಮಠದ ಅಪಮಾ[...] ತಪ್ಪಿಸುವುದಕ್ಕೋಸ್ಕರ ಅದೇ ಜಾತಿಪ್ರೇಮದ ಜಗದೀ[...] ಶೆಟ್ಟರ್, ಯಡಿಯೂರಪ್ಪ, ಅಂದಿನ ಕೈಗಾರಿಕಾ ಮಂ[...] ಮುರುಗೇಶ್ ನಿರಾಣಿ, ಮಾಜಿ ಪೊಲೀಸಪ್ಪ ಶಂಕ[...] ಬಿದರಿಯ ಮೊರೆ ಹೋಗಿದ್ದರು. ಸಿಎಂ ಗಾದಿಯಲ್ಲಿ[...] ಶೆಟ್ಟರ್ ಸಾಹೇಬರಂತೂ ಜಾತ್ಯಸ್ಥ ಮಠದ ಮಾನ ಕಾಪಾಡ[...] ಇಡೀ ಸರಕಾರವನ್ನೇ ಬಲಿಪೀಠದಲ್ಲಿ ತಂದುನಿಲ್ಲಿಸಲ[...] ಸಿದ್ಧವಾಗಿದ್ದರು.

ಒಂದು ವ್ಯವಸ್ಥಿತ ಸಂಚಿನ ಭಾಗವಾಗಿ ಕೈಗಾರಿ[...] ಮಂತ್ರಿ ಮುರುಗೇಶ್ ನಿರಾಣಿ ಮುಖ್ಯಮಂತ್ರಿಗೆ ಒಂ[...] ಪತ್ರ ಬರೆದು 'ಕರ್ನಾಟಕ ಕೈಗಾರಿಕಾ ಪ್ರದೇಶಾಭಿವ[...] ಮಂಡಳಿಗೆ ಸ್ವಂತ ಕಟ್ಟಡ ಕಟ್ಟಲು ಗಾಂಧೀನಗರ ಬಸವಕೇಂ[...] ಜಾಗವೇಬೇಕು' ಎಂದು ಜಗದೀಶ್ ಶೆಟ್ಟರ್‌ನ[...] ಅಂಗಲಾಚುತ್ತಾನೆ. ಅದಕ್ಕೆ ಪ್ರತಿಯಾಗಿ ಶೆಟ್ಟರ್ ಕೂ[...] 06.09.2012ರ ಸಂಪುಟ ಸಭೆಯಲ್ಲಿ ತರಾತುರಿಯ[...] ಅನುಮತಿ ಪಡೆದು ಆಸ್ತಿ ಖರೀದಿಸುವ ಪ್ರಕ್ರಿಯೆಗೆ ಚಾ[...] ನೀಡಿಬಿಡುತ್ತಾರೆ. ಸಾಮಾನ್ಯವಾಗಿ ಸರ್ಕಾರ ಯಾವು[...] ಆಸ್ತಿಯನ್ನು ಖರೀದಿ ಮಾಡುವ ಮುನ್ನ ಕಾನೂನು ಸಲ[...] ಕೇಳಬೇಕೆನ್ನುವುದು ನಿಯಮ. ಆದರೆ ಶೆಟ್ಟರ್ ಅದ[...] ಧಿಕ್ಕರಿಸಿ ಸಂಪುಟ ಸಭೆಯಲ್ಲಿ ಅನುಮತಿ ನೀಡಿದ್ದ[...] ಬಸವ ಕೇಂದ್ರದ ಆಸ್ತಿ ವಿವಾದಗಳು (ಡಬಲ್ ಲೀ[...] ಮತ್ತು ಬ್ಯಾಂಕ್ ಸಾಲ) ನ್ಯಾಯಾಲಯದ ವ್ಯಾಪ್ತಿಯಲ್ಲಿದ್ದ[...] ಅವೆಲ್ಲವನ್ನು ಮರೆಮಾಚಿ ಜಾತಿ ಮಠವನ್ನು ಜನರ ತೆ[...] ದುಡ್ಡಿನಿಂದ ಸೇಫ್ ಮಾಡುವುದಷ್ಟೇ ಶೆಟ್ಟರ[...] ಅಜೆಂಡಾವಾಗಿತ್ತು, ನೆಪಕ್ಕೆಂಬಂತೆ ಸಂಪುಟ ಸಭೆ ಮು[...] ಒಂದು ವಾರದ ಬಳಿಕ, ಅಂದರೆ 13.09.2012ರ[...] ಸರ್ಕಾರ ಬಸವಕೇಂದ್ರ ಆಸ್ತಿ ಖರೀದಿಯ ಕುರಿತು ಕಾನೂ[...] ಸಲಹೆ ಕೇಳಿತ್ತು, 15.09.2012ರಂದು ತನ್ನ ಸ[...] ನೀಡಿದ್ದ ಕಾನೂನು ಇಲಾಖೆಯು, ಯಾವುದೇ ಆಸ್ತಿಯ[...] ಖರೀದಿಸುವ ಬದಲು ಸೂಕ್ತ ಕಾರಣ ನೀಡಿ ಸ್ವಾಧೀನಪ[...] ಕೊಳ್ಳುವ ಹಕ್ಕು ಸರ್ಕಾರಕ್ಕಿರುತ್ತದೆ ಮತ್ತು ಸ್ವಾ[...] ಪಡಿಸಿಕೊಳ್ಳುವುದರಿಂದ ಮುದ್ರಣ ಶುಲ್ಕ, ನೋಂ[...] ಶುಲ್ಕದ ಹೊರೆಯೂ ಸರ್ಕಾರಕ್ಕೆ ತಪ್ಪುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿತ್ತು,

ತಮ್ಮ ಸ್ಥಾನ ಮತ್ತು ಜನರಿತ್ತ ಅಧಿಕಾರದ [...] ಕಿಂಚಿತ್ತಾದರೂ ಗೌರವಿದ್ದಿದ್ದರೆ ಶೆಟ್ಟರ್ ಆಗಲಾ[...] ಬಸವಕೇಂದ್ರ ಡೀಲ್‌ನಿಂದ ಹಿಂದೆ ಸರಿಯಬಹು[...] ಮೊದಲೇ ಕ್ಯಾಬಿನೆಟ್‌ನಲ್ಲಿ ಅನುಮೋದನೆ ಗಿಟ್ಟಿಸಿಕೊ[...] ಶೆಟ್ಟರ್ ಕಾನೂನು ಸಲಹೆಯನ್ನು ಕಾಲ ಕಸವ[...] ಮುಂದುವರೆದಿದ್ದರು. ಈ ನಡುವೆ ಖರೀದಿಗೇನೊ ಸ[...] ಒಕೆ ಎಂದಿತ್ತಾದರೂ ಹಣ ಬಿಡುಗಡೆ

9ನೇ [...]

ಡೆಪಾಸಿಟ್ ಹಣಕ್ಕೂ ಬಸವರಾಜನ್ ಕಣ್ಣು

2004ರಲ್ಲಿ ಬಸವಕೇಂದ್ರವನ್ನು ಯೂನಿಯನ್ ಬ್ಯಾಂಕ್‌ನಲ್ಲಿ ಅಡವಿಟ್ಟ ಬಸವರಾಜನ್ 34 ಕೋಟಿ ಸಾಲ ಪಡೆದು ಅದರಲ್ಲಿ ಒಂದು ಕೋಟಿಯನ್ನು ಚಿತ್ರದುರ್ಗದ ಯೂನಿಯನ್ ಬ್ಯಾಂಕ್‌ನಲ್ಲಿ ಡೆಪಾಸಿಟ್ ಇಟ್ಟ ವಿಚಾರ ತಿಳಿದಿದೆ. ಜೀವನದುದ್ದಕ್ಕೂ ಮಠದ ಆಸ್ತಿಯನ್ನು ಮುಂಡಾಯಿಸುತ್ತಲೇ ಬಂದ ಬಸವರಾಜನ್‌ಗೆ ಆ ಒಂದು ಕೋಟಿಯ ಮೇಲೂ ಕಣ್ಣು ಬಿದ್ದಿತ್ತು, 2010ರಲ್ಲಿ ಆ ಡೆಪಾಸಿಟ್ ಹಣ ಮೆಚೂರಾಗಿತ್ತು, ಆಗ ಅದನ್ನು ಬಿಡಿಸಿಕೊಳ್ಳುವುದಕ್ಕೆ ಬಸವರಾಜನ್ ಸ್ಕೆಚ್ ಹಾಕಿದ್ದ.

ಆ ಹೊತ್ತಿಗಾಗಲೆ ಆತ ಮಠದಿಂದ ಹೊರದಬ್ಬಿಸಿಕೊಂಡು ಮೂರು ವರ್ಷವಾಗಿತ್ತು, ಹಾಗಾಗಿ ನೇರವಾಗಿ ಆತ ಕೈಚಳಕ ತೋರುವಂತಿರಲಿಲ್ಲ. ಡೆಪಾಜಿಟ್ ಇಟ್ಟ ಹಣದ ಬಗ್ಗೆ ಮುರುಘಾ ಶರಣರಿಗಾಗಲಿ, ಮೆಡಿಕಲ್ ಕಾಲೇಜಿನ ಆಡಳಿತಾಧಿಕಾರಿಯ ಗಮನಕ್ಕಾಗಲಿ ಬಂದಿರಲಿಲ್ಲ, ಆಗ ಬಸವರಾಜನ್ ಎಸ್. ಮಂಜುನಾಥ ಎನ್ನುವವನ್ನು ಮುಂದಿಟ್ಟುಕೊಂಡು ಪ್ಲಾನ್ ಹಾಕಿದ. ಈ ಮಂಜುನಾಥ ಹಿಂದೆ ದಂತವೈದ್ಯಕೀಯ ಕಾಲೇಜಿನ ಆಡಳಿತಾಧಿಕಾರಿಯಾಗಿದ್ದಂತವನು. ಏನೋ ಎಡವಟ್ಟು ಮಾಡಿಕೊಂಡು ಇದೇ ಬಸವರಾಜನ್‌ನಿಂದ ಹೊರದಬ್ಬಿಸಿಕೊಂಡು ಹೋಗಿದ್ದ,

ಈಗ ಮತ್ತದೇ ಮಂಜುನಾಥನನ್ನು ಹುಡುಕಿ ಕರೆತಂದ ಬಸವರಾಜನ್ ಅವನ ಮೂಲಕ ಬ್ಯಾಂಕಿನ ವಹಿವಾಟು ನಡೆಸಿದ್ದ, ಮಂಜುನಾಥ ತಾನು ಆಡಳಿತಾಧಿಕಾರಿಯಾಗಿದ್ದಾಗ ಬಳಸುತ್ತಿದ್ದ ಹಳೆಯ ಲೆಟರ್ ಹೆಡ್‌ಗಳಲ್ಲಿ ಈಗಲೂ ತಾನೇ ಆಡಳಿತಾಧಿಕಾರಿ ಎಂಬುದಾಗಿ ಸುಳ್ಳು ಅರ್ಜಿಯನ್ನು 29.01.2010ರಂದು ಯೂನಿಯನ್ ಬ್ಯಾಂಕಿಗೆ ಗುಜರಾಯಿಸಿ ಮೆಚೂರಿಟಿ ಮೊತ್ತ ವಾಪಸ್ ಮಾಡುವಂತೆ ಕೇಳಿಕೊಂಡಿದ್ದ, ಬ್ಯಾಂಕ್‌ನವರು ಮಂಜುನಾಥನಿಗೆ 706649, 706650, 706651, 706652 ಸಂಖ್ಯೆಯ ಚೆಕ್‌ಗಳ ಮೂಲಕ ಹಣ ಬಿಡುಗಡೆ ಮಾಡಿದ್ದರು. ಈ ನಡುವೆ ಬ್ಯಾಂಕಿನ ಮ್ಯಾನೇಜರ್‌ಗೆ ಅನುಮಾನ ಬಂದು ಆತ ಮಠದ ವಿದ್ಯಾಪೀಠದ ಕಾರ್ಯದರ್ಶಿ ಕೆ.ಚಿ. ಪ್ರಭಾಕರ್‌ಗೆ ಸಂಪರ್ಕಿಸಿ ವಿಷಯ ತಿಳಿಸಿದಾಗ ಮಠ ಮತ್ತೊಮ್ಮೆ ನಡುಗಿ ಹೋಗಿತ್ತು, ಕೆಲವರು ಮಧ್ಯಸ್ಥಿಕೆ ವಹಿಸಿದ ಪರಿಣಾಮವಾಗಿ ಮಂಜುನಾಥ್ ಮತ್ತು ಬಸವರಾಜನ್ ನಡುವೆ ಹಣ ಹರಿದು ಹಂಚಿಕೆಯಾದ ನಂತರ ಉಳಿದದ್ದು ಮಠ ಸೇರುವಂತಾಗಿತ್ತು, ಚಿತ್ರದುರ್ಗದ ಬ್ಯಾಂಕ್ ಕಾಲೋನಿಯಲ್ಲಿ ಬಸವರಾಜನ್ ಮನೆ ಖರೀದಿಸಿದ್ದು ಆಗಲೇ!


ಮುರುಘಾ ಮಠದ ಆಸ್ತಿಯನ್ನು ಕಬಳಿಸುವುದು ಸುಲಭದ ಮಾತಲ್ಲ, ಏಕೆಂದರೆ ಮಠದ ಸಮಸ್ತ ಆಸ್ತಿಗೆ ಪೀಠಾಧಿಪತಿಯೇ ಒಡೆಯರಾಗಿರುತ್ತಾರೆ. ಕಲಂ 53ರ ಪ್ರಕಾರ ಪ್ರಿನ್ಸಿಪಾಲ್ ಸಿವಿಲ್ ನ್ಯಾಯಾಧೀಶರ ಅನುಮತಿಯಿಲ್ಲದೇ ಮಠದ ಆಸ್ತಿಯನ್ನು ಮಾರುವುದಾಗಲಿ, ಖರೀದಿಸುವುದಾಗಲಿ ಅಸಾಧ್ಯ, ಮಠದ ಸ್ವಾಮೀಜಿಯಾಗಲಿ ಅಥವಾ ಆಡಳಿತಾಧಿಕಾರಿಯಾಗಲಿ ನ್ಯಾಯಾಲಯದ ಕಣ್ಣುತಪ್ಪಿಸಿ ಏನನ್ನೂ ಮಾಡುವ ಹಾಗಿಲ್ಲ, ಉದಾಹರಣೆಗೆ ಎರಡು ವರ್ಷಗಳ ಹಿಂದಷ್ಟೆ ಮಠದ ಕಾಲೇಜಿನಲ್ಲಿ (ಯುಜಿಸಿ) ಉಪನ್ಯಾಸಕ ನೇಮಕಾತಿ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದ್ದಾಗ ನ್ಯಾಯಾಧೀಶ ಸುಧೀಂದ್ರರಾವ್ (ಮಾಜಿ ಮುಖ್ಯಮಂತ್ರಿ ಯಡ್ಡಿಯನ್ನು ಜೈಲಿಗಟ್ಟಿದವರು) 'ಈ ಮುರುಘಾಮಠ Prevention of corruption act 1988 ಪ್ರಕಾರ ಲೋಕಾಯುಕ್ತರ ವ್ಯಾಪ್ತಿಗೊಳಪಡುತ್ತದೆ' ಎಂಬುದಾಗಿ ಹೇಳಿದ್ದಾರೆ. ಅಂದರೆ ಇಲ್ಲಿ ಅವ್ಯವಹಾರ ನಡೆಸಿ ಜೀರ್ಣಿಸಿಕೊಳ್ಳುವುದು ಸುಲಭವೇನೂ ಅಲ್ಲ, ಆದರೂ ಮಠದ ಆಸ್ತಿ ನುಂಗಣ್ಣರ ಪಾಲಾಗುತ್ತಿರುವುದು ವಿಪರ್ಯಾಸವೇ ಸರಿ.

ಮಂಡ್ಯ, ರಾಮನಗರ, ಕನಕಪುರ, ಮೈಸೂರು, ಹುಣಸೂರು

...ಕೋಟಿ ರೂ. ಮುಂಡಾಯಿಸಿದ ...ಗ್ರೀನ್‌ಲೀವ್ಸ್ ವಂಚಕರು







...ಟ್ಯೋನು ಕೋಡಂಗಿ ಇಸ್ಕೊಂಡೋನು ...ದ್ದ' ಡಬ್ಲಿಂಗ್ ದಂಧೆಯ ಬ್ಲೇಡ್ ಕಂಪನಿಗಳ ಮೂಲ ...ನೇ ಇದು. ಅದು ಗೊತ್ತಿದ್ರೂ ನಮ್ಮ ಜನ ಕಾಸು ...ಳ್ಳುವ ಖಯಾಲಿಯಿಂದ ಇನ್ನೂ ಹೊರಬಂದಂತೆ ...ಲ್ಲ. ಮೈಸೂರಿನ ಗ್ರೀನ್‌ಬಡ್ಸ್ ಎಂಬ ಬ್ಲೇಡ್ ...ಯ ರವೀಂದ್ರನಾಥ್ ಹಲವು ಕೋಟಿಗಳ ಪಂಗನಾಮ ...ಪ್ರಕರಣ ಮರೆಯಾಗುವ ಮುನ್ನವೇ ಗ್ರೀನ್‌ಲೀವ್ಸ್ ...ಯಲ್ ಕ್ರಾಪ್ಸ್ ಎಂಬ ಮತ್ತೊಂದು ಬ್ಲೇಡ್ ಕಂಪನಿ ...4-5 ಕೋಟಿ ರೂ.ಗಳನ್ನು ಮುಂಡಾಯಿಸಿ ತಲೆ ...ಸಿಕೊಂಡಿದೆ.

...% ಕಮೀಷನ್ ಕೊಡ್ತೀವಿ ಎಂದ ಗ್ರೀನ್‌ಲೀವ್ಸ್ ...ರ ಮೋಡಿ ಮಾತುಗಳನ್ನು ನಂಬಿದ ಏಜೆಂಟರು ...ದ ಕೋಟ್ಯಾಂತರ ರೂ.ಗಳನ್ನು ಕಟ್ಟಿಸಿದ್ದರು. ಈಗ ...ಕ್ಕೆ ಪಂಗನಾಮ ಬಿದ್ದಿರುವುದು ಖಚಿತವಾದ ನಂತರ ...ದ ಪೂರ್ವ ಪೊಲೀಸ್‌ಠಾಣೆಯಲ್ಲಿ ದೂರು ಕೊಟ್ಟು ...ಯುತ್ತಿದ್ದಾರೆ. ಇತ್ತ ವಂಚಕರು ಊರು ಬಿಟ್ಟಿದ್ದರೆ ...ಹಣ ಕಟ್ಟಿ ಜನ ಏಜೆಂಟರ ಬೆನ್ನುಬಿದ್ದಿದ್ದಾರೆ.

...ತಿಂಗಳ ಹಿಂದಷ್ಟೇ ಮೈಸೂರಿನ ಗ್ರೀನ್‌ಬಡ್ಸ್ ...ರವೀಂದ್ರನಾಥ್ ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ...ಮದ್ದೂರು ಮೊದಲಾದ ಕಡೆಗಳಲ್ಲಿ ಏಜೆಂಟರನ್ನು ...ಕೋಟ್ಯಾಂತರ ಹಣ ಎತ್ತಿದ್ದ. ಆಮೇಲೆ ಹಣ ...ರಿಗೆ ನಾಮ ತೀಡಿ ನಾಪತ್ತೆಯಾಗಿದ್ದ. ವಾರದ ...ನ್ನೇ ಅಡಾಯ್ ಎಂಬ ಆನ್‌ಲೈನ್ ಕಂಪನಿ ಮಂಡ್ಯ ...ಂದರಲ್ಲೇ ಹತ್ತಾರು ಕೋಟಿ ಹಣಕ್ಕೆ ಕೈ ಎತ್ತಿತ್ತು.

ವಂಚನೆಯೇ ಪ್ರಮುಖ ಗುರಿ

...09ರಲ್ಲಿ ಮಂಡ್ಯದ ಅಶೋಕನಗರ 1ನೇ ...ಲ್ಲಿರುವ ಸಹಕಾರ ಯೂನಿಯನ್ ರಜತ ಭವನದ ...ಲ್ಲಿ ಗ್ರೀನ್‌ಲೀವ್ಸ್ ಎಸೆನ್ಷಿಯಲ್ ಕ್ರಾಪ್ಸ್ ಎಂಬ ...ಕಂಪನಿಯನ್ನು ಹುಟ್ಟು ಹಾಕಿದ್ದು ಸ್ವರ್ಣಸಂದ್ರ ...ಯ ಲೇಟ್ ರಾಮು ಎಂಬಾತನ ಮಗ ಲಾಯರ್ ...ಜು. ಆದೆಲ್ಲಿಂದಲೋ ವಂಚನಾ ವಿದ್ಯೆಗಳನ್ನು ಕಲಿತು ...ಲಿಂಗರಾಜನಿಗೆ ವಂಚನಾ ಪ್ರವೀಣೆ ಶಿಲ್ಪಶ್ರೀ ...ಅವಳನ್ನು ಜೊತೆಗಾಕಿಕೊಂಡೇ ಗ್ರೀನ್ಸ್ ಲೀವ್ಸ್ ...ವಂಚಕ ಅಡ್ಡೆಯನ್ನು ಲಾಯರ್ ಲಿಂಗ ಮಂಡ್ಯದಲ್ಲಿ ...ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿ ...No. mdyf/55/2009-10 ರಡಿ ರಿಜಿಸ್ಟರ್ ...ಮಾಡಿಸಿದ್ದ. ವಂಚಕ ಅಡ್ಡೆಯ ವ್ಯವಸ್ಥಾಪಕ ...ಕನಾಗಿ ಲಿಂಗರಾಜ ಕುಂತಿದ್ದರೆ, ವಂಚಕಿ ಶಿಲ್ಪಶ್ರೀ ...ಆಗಿದ್ದಳು. ಇನ್ನುಳಿದಂತೆ ಲಿಂಗರಾಜನ ತಾಯಿ ...ಹಾಗೂ ಶಿಲ್ಪಶ್ರೀಯ ಚಿಕ್ಕಮ್ಮ ಭಾಗ್ಯಳೇ ...ಕಂಪನಿಯ ನಿರ್ದೇಶಕರು! ಅಲ್ಲದೆ ಸೋಮಶೇಖರ್, ...ಚರ್ಡ್‌ಸನ್, ರಾಜೇಶ್‌ಕುಮಾರ್, ಮೌನಕುಮಾರ್, ...ಶ್‌ಬಾಬು, ದೇಶಿ ಅರಸ್, ಕೃಷ್ಣ ಹೊಂಬೇಗೌಡ, ...ಮು, ಶಿವಕುಮಾರ ಎಂಬ ಐನಾತಿಗಳು ಆ ...ನಿರ್ದೇಶಕರಾಗಿದ್ದರು.

...ನ್‌ಲೀವ್ಸ್‌ನ ಲಿಂಗರಾಜು ಸುಮಾರು 10 ...ಯಲ್ಲಿ ಮುಂಡಾಯಿಸುವ ಸ್ಕೀಂಗಳನ್ನು ಹಾಕಿ ...ತ್ತೆ. ಗ್ರೀನ್ಸ್‌ಲೀವ್ಸ್ ಇಂಟಿಗ್ರೇಟೆಡ್ ಕ್ರಾಪ್ಸ್ ...ಗ್ರೀನ್ ಚಿಟ್ಸ್, ಮ್ಯಾಟ್ರಿಮೋನಿ, ಟೂರ್ಸ್ ...ಟ್ರಾವೆಲ್ಸ್, ಇನ್ಸೂರೆನ್ಸ್ ಪಾಲಿಸಿ, ಮೈಕ್ರೋ ...ವನಶ್ರೀ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ...ಮೈಕ್ರೋ ಇನ್ಸೂರೆನ್ಸ್, ಸೃಜನ ಫೌಂಡೇಶನ್ ...ಎನ್‌ಜಿಓ, ಹಾಗೂ ಸೌಹಾರ್ದ ಕೋ-...ಟಿವ್ ಬ್ಯಾಂಕ್ ಎಂಬ 10 ಸ್ಕೀಂಗಳು ಜನರ ...ಪಾಲಿ ಮಾಡಲು ಹುಟ್ಟಿಕೊಂಡಿದ್ದವು. ಮುಗ್ಧ ...ವಂಚಿಸಲು ಇವರಿಬ್ಬರು ಮೊದಲ ಅಸ್ತ್ರವನ್ನಾಗಿ ...ಇನ್ಸೂರೆನ್ಸ್ ಪಾಲಿಸಿ. ಎಲ್‌ಐಸಿಯಿಂದ ...ಜೆಂಟ್ ಕೋಡ್ ಪಡೆದ ಲಿಂಗರಾಜು ಹಾಗೂ ...ಸಹಕಾರಿ ಯೂನಿಯನ್ ಬಿಲ್ಡಿಂಗ್‌ನಲ್ಲಿ ಹೈಟೆಕ್ ...ತೆರೆದು ಏಜೆಂಟರಿಗೆ 15% ಕಮೀಷನ್ ...ಟ್ಟಿಸಿದರು. ನೋಡುನೋಡುತ್ತಿದ್ದಂತೆ ಮಂಡ್ಯ, ...ರ, ಮೈಸೂರು, ಹುಣಸೂರು ಸೇರಿದಂತೆ ...ಕಡೆಗಳಲ್ಲಿ 500-600ರಷ್ಟು ಏಜೆಂಟರು ...ಂಡರು. ನಗರ ಹಾಗೂ ಗ್ರಾಮೀಣ ಪ್ರದೇಶದ ...ರನ್ನು ಹುಡುಕಿ ಇನ್ಸೂರೆನ್ಸ್ ಪಾಲಿಸಿಗಳಲ್ಲಿ ...ಹೂಡುವಂತೆ ಮಾಡುವುದು ಅವರ ...ಕೆಲಸವಾಗಿತ್ತು.

ಮಾಸಿಕ, ತ್ರೈಮಾಸಿಕ, ವಾರ್ಷಿಕ ಹಾಗೂ ಏಕ ರೂಪದ ಕಂತುಗಳ ಮೂಲಕ ಆರ್‌ಡಿ, ಎಫ್‌ಡಿ, ಪಿಗ್ಮಿ ಸ್ಕೀಮುಗಳಲ್ಲಿ ಕಟ್ಟಿಸಿಕೊಂಡ ಹಣವೇ 2014ರ ವೇಳೆಗೆ 5 ಕೋಟಿ ರೂ.ಗಳಷ್ಟಾಗಿತ್ತು. ಶುರುವಿನಲ್ಲೇ ಗ್ರಾಹಕರಲ್ಲಿ ನಂಬಿಕೆ ಮೂಡಿಸಲು ಯತ್ನಿಸಿದ ಲಿಂಗರಾಜು ಹಾಗೂ ಶಿಲ್ಪಶ್ರೀ ಜೋಡಿ ಅದರಲ್ಲಿ ಯಶಸ್ವಿ ಆಗಿತ್ತು. ಇದನ್ನು ನಂಬಿದ ಏಜೆಂಟರು 15% ಕಮಿಷನ್ ಸಿಗುವ ಉದ್ದೇಶದಿಂದ ಮುಗ್ಧರಿಂದ ವಂಚನಾ ಸ್ಕೀಂಗಳಲ್ಲಿ ಹಣ ಕಟ್ಟಸುತ್ತಿದ್ದರು. ಬಹುಪಾಲು ಹಣ ಇನ್ಸೂರೆನ್ಸ್ ಪಾಲಿಸಿಯಲ್ಲಿ ಹೂಡಲಾಗಿದೆ ಎಂದು ಗ್ರಾಹಕರನ್ನು ಲಿಂಗರಾಜು ಹಾಗೂ ಶಿಲ್ಪಶ್ರೀ ನಂಬಿಸಿದ್ದರು.

ಗ್ರೀನ್ ಲೀವ್ಸ್ ಬ್ಲೇಡ್ ಕಂಪನಿ ಶುರುವಾಗಿ 3 ವರ್ಷಗಳ ನಂತರ ಲಿಂಗರಾಜು ಹಾಗೂ ಶಿಲ್ಪಶ್ರೀಯ ವಂಚನಾ ನಾಟಕದ ಸುಳಿವು ಏಜೆಂಟರಿಗೆ ಗೊತ್ತಾಗ ತೊಡಗಿತ್ತು. ಗ್ರಾಹಕರ ಹಣ ಹಿಂದಿರುಗಿಸಲು ಸುಸ್ತು ಹೊಡೆಯತೊಡಗಿದ್ದರು. ವಂಚನೆಯನ್ನೇ ಪ್ರಮುಖ ಗುರಿಯಾಗಿಸಿಕೊಂಡು ಆರಂಭಿಸಿದ ಜಿಎಲ್‌ಇಸಿ ಸಂಸ್ಥೆ ಗ್ರಾಹಕರ 5 ಕೋಟಿಯಷ್ಟು ಹಣವನ್ನು ಮುಂಡಾಯಿಸಿ ಬಾಗಿಲೆಳೆದುಕೊಂಡಿತ್ತು.

ಕಡೆಗೆ ಗ್ರಾಹಕರು ಏಜೆಂಟರ ಮನೆಗೆ ಎಡತಾಗಿದ ನಂತರ ಮೈಸೂರಿನ ಎಲ್‌ಐಸಿಯ ಮೈಕ್ರೋ ಇನ್ಸೂರೆನ್ಸ್ ವಿಭಾಗಕ್ಕೆ ಹೋಗಿ ವಿಚಾರಿಸಿದಾಗ 3 ವರ್ಷಗಳಿಂದ ಗ್ರಾಹಕರು ಕಟ್ಟಿದ ಹಣದಲ್ಲಿ ಲಿಂಗರಾಜು ಹಾಗೂ ಶಿಲ್ಪಶ್ರೀ ಕಟ್ಟಿದ್ದು ಕೇವಲ 1 ತಿಂಗಳಷ್ಟೇ. ಉಳಿದ ಹಣವನ್ನು ತಾವೇ ಸ್ವಾಹಾ ಮಾಡಿದ್ದರು. ಈ ಬಗ್ಗೆ ಲಿಂಗರಾಜು, ಶಿಲ್ಪಶ್ರೀ, ನಿರ್ದೇಶಕರಾದ ಆಲಭೂಜನಹಳ್ಳಿ ಜಯರಾಮು, ಶಿವಕುಮಾರ್ ಅವರನ್ನು ಕೇಳಿದರೆ ಇನ್ಸೂರೆನ್ಸ್‌ಗೆ ಹಾಕುವ ಬದಲು ನಮ್ಮ ಸಂಸ್ಥೆಯನ್ನೇ ಬೆಳೆಸುವ ಸಲುವಾಗಿ ಹಣವನ್ನು ರಿಯಲ್ ಎಸ್ಟೇಟ್, ಮೇಕೆ, ಹಸು ಫಾರಂ, ಆಗ್ರೋ ಚಟುವಟಿಕೆಗಳಲ್ಲಿ ತೊಡಗಿಸಿದ್ದೇವೆ ಎಂದು ಬೂಸಿ ಬಿಟ್ಟಿದ್ದರು. ಕೊಂಚ ಅನುಮಾನಗೊಂಡ ಮನುಕುಮಾರ್, ಯೋಗೇಶ್, ನಾಗರಾಜು ಮೊದಲಾದ ಏಜೆಂಟರು ಪೊಲೀಸರಿಗೆ ದೂರು ನೀಡುವುದಾಗಿ ಹೇಳಿದಾಗ ಮಧ್ಯಪ್ರವೇಶಿಸಿದ ಸಂಸ್ಥೆಯ ನಿರ್ದೇಶಕ ಶಿವಕುಮಾರ್ ಹಾಗೂ ಜಯರಾಮು ನಿಮ್ಮ ಹಣವನ್ನು ಮೂರು ತಿಂಗಳೊಳಗೆ ಕೊಡಿಸುತ್ತೇವೆ ಎಂಬ ಭರವಸೆ ನೀಡಿದ್ದರು. 3 ತಿಂಗಳ ವೇಳೆಗಾಗಲೆ ಅದೇ ಜಯರಾಂ ಹಾಗೂ ಶಿವಕುಮಾರ್, ವಂಚಕ ಜೋಡಿ ಲಿಂಗರಾಜು ಹಾಗೂ ಶಿಲ್ಪಶ್ರೀಯಿಂದ ಸಾಕಷ್ಟು ಗುಂಜಿಕೊಂಡು ಭರವಸೆ ನೀಡಿದ್ದ ಏಜೆಂಟರಿಗೆ ಹಣ ಕೊಡಿಸಲು ಸಾಧ್ಯವಿಲ್ಲ ಎಂದು ಕೈ ಎತ್ತಿದ್ದರು. ಅಲ್ಲದೆ ಲಿಂಗರಾಜು, ಶಿಲ್ಪಶ್ರೀ ಇಬ್ಬರೂ ನಾಪತ್ತೆಯಾಗಿಬಿಟ್ಟಿದ್ದರು.

ಸುಳ್ಳು ದೂರು ಕೊಟ್ಟಳು

ಗ್ರೀನ್ ಲೀವ್ಸ್‌ಗೆ ಸುಮಾರು 600ಕ್ಕೂ ಹೆಚ್ಚು ಏಜೆಂಟರುಗಳು ಹತ್ತಾರು ಸಾವಿರ ಜನರಿಂದ ಆರ್‌ಡಿ, ಎಫ್‌ಡಿ, ಇನ್ಸೂರೆನ್ಸ್ ಎಂದು 4-5 ಕೋಟಿ ಹಣವನ್ನು ಹಾಕಿಸಿದ್ದರು. ಎಂಡಿ ಲಿಂಗರಾಜು ಹಾಗೂ ಶಿಲ್ಪಶ್ರೀ ಜೋಡಿ ಸಾವಿರಾರು ಗ್ರಾಹಕರಿಗೆ ಮೋಸ ಮಾಡಿ ನಾಪತ್ತೆಯಾಗಿದ್ದರಿಂದ ಕಂಗಾಲಾದ ಮದ್ದೂರು ತಾಲ್ಲೂಕಿನ ಬೊಪ್ಪ ಸಮುದ್ರದ ಮನುಕುಮಾರ್ ಹಾಗೂ ತೊರೆಬೊಮ್ಮನಹಳ್ಳಿಯ ಯೋಗೇಶ್, ಚನ್ನಪಟ್ಟಣದ ನಾಗರಾಜು ಸೇರಿದಂತೆ ಹಲವು ಏಜೆಂಟರು ಲಿಂಗರಾಜು ಹಾಗೂ ಶಿಲ್ಪಶ್ರೀ ಹುಡುಕಲು ಆರಂಭಿಸಿದ್ದಾರೆ. ಮಂಡ್ಯದಲ್ಲಿ ಅವರ ಕೈಗೆ ವಂಚಕಿ ಶಿಲ್ಪಶ್ರೀ ತಗಲಾಕಿಕೊಂಡಿದ್ದಾಳೆ. ರಸ್ತೆಯಲ್ಲಿ ಮಾತನಾಡುವುದು ಬೇಡ ಎಂದು ಶಿಲ್ಪಶ್ರೀ ತಾಯಿಯ ಮನೆಯಲ್ಲಿ ಮಾತನಾಡಿದ ಸಂದರ್ಭದಲ್ಲಿ ಹಣವನ್ನು ರಿಯಲ್‌ಎಸ್ಟೇಟ್, ಮೇಕೆ, ಹಸು ಫಾರಂ ಎಂದು ಹಲವು ಕಡೆ ಇನ್‌ವೆಸ್ಟ್ ಮಾಡಿದ್ದೇವೆ, ಒಂದು ವಾರ ಅವಕಾಶ ಕೊಡಿ ಜನರಿಗೆ ಹಣ ಹಿಂದಿರುಗಿಸುತ್ತೇವೆ ಎಂದು ಅಲವತ್ತುಕೊಂಡು ಮನುಕುಮಾರ್, ಯೋಗೇಶ್‌ರನ್ನು ಸಾಗಹಾಕಿದ್ದಳು.

ಆದರೆ ಚಾಲಾಕಿ ಶಿಲ್ಪಶ್ರೀ ಹಣ ವಾಪಾಸ್ ಕೇಳಿದ ಮನುಕುಮಾರ್, ಯೋಗೇಶ್ ಸೇರಿದಂತೆ ಹಲವರ ಮೇಲೆಯೇ ಕೊಲೆ ಬೆದರಿಕೆ ಹಾಗೂ ಬಲಾತ್ಕಾರದ ಸುಳ್ಳು ದೂರನ್ನು ಮಂಡ್ಯ ಗ್ರಾಮೀಣ ಹಾಗೂ ಪೂರ್ವ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ್ದಳು. ಫ್ರಾಡ್ ಶಿಲ್ಪಶ್ರೀ ಕೊಟ್ಟ ದೂರನ್ನು ಸರಿಯಾಗಿ ವಿಚಾರಿಸದ ಸಿಪಿಐ ಹರೀಶ್‌ಬಾಬು ಮನುಕುಮಾರ್ ಹಾಗೂ ಯೋಗೇಶ್ ಕರೆಸಿದ್ದಾರೆ. ಅಲ್ಲಿ ಗ್ರೀನ್ ಲೀವ್ಸ್ ವಂಚನಾ ಪುರಾಣವನ್ನು ಮನುಕುಮಾರ್ ಹಾಗೂ ಯೋಗೇಶ್ ಹೇಳಿದ್ದಾರೆ. ನಾವು ದುಡ್ಡು ಕೇಳಿದ್ದರಿಂದ ಶಿಲ್ಪಶ್ರೀ ಈ ರೀತಿ ಸುಳ್ಳು ಕಂಪ್ಲೇಂಟ್ ನೀಡಿದ್ದಾಳೆ. ಅವಳನ್ನು ಠಾಣೆಗೆ ಕರೆಸಿ ಎಂದಾಗ ಫೋನ್ ಮಾಡಿದರೂ ಶಿಲ್ಪಶ್ರೀ ಹಾಜರಾಗದ ಕಾರಣ ಪೊಲೀಸರೇ ಇದೊಂದು ಸುಳ್ಳು ದೂರು ಎಂಬ ಷರಾ ಬರೆದು ಮನುಕುಮಾರ್ ಹಾಗೂ ಯೋಗೇಶರನ್ನು ಬಿಟ್ಟುಕಳುಹಿಸಿದ್ದರು.


ಎಸ್ಪಿ, ಡಿವೈಎಸ್ಪಿ ನ್ಯಾಯ ಕೊಡಿಸಲಿ

ಪರಾರಿಯಾಗಿರುವ ಗ್ರೀನ್‌ಲೀವ್ಸ್‌ನ ಲಿಂಗರಾಜು ಹಾಗೂ ಶಿಲ್ಪಶ್ರೀ ಪರಸ್ಪರ ಸಂಪರ್ಕದಲ್ಲಿದ್ದಾರೆ. ಜನರ ಕೋಟ್ಯಾಂತರ ರೂಪಾಯಿ ದುಡ್ಡಿನಲ್ಲಿ ಕಾರು, ಬಂಗಲೆಯಲ್ಲಿ ಐಷಾರಾಮಿಯಾಗಿ ಬದುಕುತ್ತಿದ್ದಾರೆ. ಲಿಂಗರಾಜು ಹಲವೆಡೆ ಸೈಟುಗಳನ್ನು ಖರೀದಿ ಮಾಡಿದ್ದಾನೆ. ಇವನ ಜೊತೆಗಾತಿ ವಂಚಕಿ ಶಿಲ್ಪಶ್ರೀ ಕೂಡ ಕೋಟಿಗಳ ಲೆಕ್ಕದಲ್ಲಿ ಆಸ್ತಿ ಖರೀದಿಸಿದ್ದಾಳೆ. ಜನರಿಂದ ಸಂಗ್ರಹವಾದ 4 ಕೋಟಿ ಹಣದಲ್ಲಿ ಒಂದಷ್ಟು ಪಾಲನ್ನು ತನ್ನ ಕಂಪನಿಯ ನಿರ್ದೇಶಕರಾದ ಶಿವಕುಮಾರ್, ಜಯರಾಮು ಸೇರಿದಂತೆ ಹಲವರಿಗೆ ತಿನ್ನಿಸಿ ತೆಪ್ಪಗಾಗಿಸಿದ್ದಾರೆ.

ಸಹಕಾರ ಸಂಘಗಳ ಅಡಿಯಲ್ಲಿ ನೋಂದಣಿಯಾಗಿರುವ ಸಾವಿರಾರು ಸಹಕಾರ ಸಂಘಗಳು ಮಂಡ್ಯ ಜಿಲ್ಲೆಯಲ್ಲಿ ವ್ಯವಹಾರ ಮಾಡುತ್ತಿವೆ. ಜನರು ಕೂಡ ನಂಬಿಕೆಯಿಂದ ಇಂತಹ ಹಲವಾರು ಸಹಕಾರ ಸಂಘಗಳಲ್ಲಿ ಹಣ ಹೂಡುತ್ತಿದ್ದಾರೆ. ಆದರೆ ಗ್ರೀನ್ ಲೀವ್ಸ್ ಬ್ಲೇಡ್ ಕಂಪನಿ ಎಂಬುದು ಜನರಿಗೆ ಗೊತ್ತಾಗುವ ವೇಳೆಗೆ ತುಂಬಾ ತಡವಾಗಿ ಹೋಗಿತ್ತು. ಈ ಸಂಸ್ಥೆಯಲ್ಲಿ ಹಣ ತೊಡಗಿಸಿದವರಲ್ಲಿ ಶೇ.90 ರಷ್ಟು ಜನ ಗ್ರಾಮೀಣ ಪ್ರದೇಶದ ರೈತರು, ಕೂಲಿಕಾರರು, ಹಳ್ಳಿಯ ಹೆಣ್ಣುಮಕ್ಕಳು. ಮಂಡ್ಯ, ಮದ್ದೂರು, ಕೆ.ಆರ್.ಪೇಟೆಯಲ್ಲಿ ಮಾತ್ರವಲ್ಲದೆ ರಾಮನಗರ, ಕನಕಪುರ, ಮೈಸೂರು, ಹುಣಸೂರಿನಲ್ಲೂ ಬ್ರಾಂಚ್‌ಗಳನ್ನು ವಿಸ್ತರಿಸಿ ಚೆನ್ನಾಗಿ ಹಣ ಮಾಡಿದ್ದರು. ವಂಚನೆಗೊಳಗಾದ ಏಜೆಂಟರು ಈಗಾಗಲೇ ಜಿಲ್ಲಾ ಎಸ್ಪಿ ಭೂಷಣ್ ಜಿ.ಬೊರಸೆಯವರನ್ನು ಭೇಟಿ ಮಾಡಿ ನ್ಯಾಯ ಕೊಡಿಸುವಂತೆ ಮೊರೆಯಿಟ್ಟಿದ್ದಾರೆ. ಎಸ್ಪಿ ಸಾಹೇಬರ ಸೂಚನೆಯಂತೆ ಡಿವೈಎಸ್ಪಿ ಉಮೇಶ್‌ರವರ ಮಾರ್ಗದರ್ಶನದಲ್ಲಿ ಪೂರ್ವ ಪೊಲೀಸ್ ಠಾಣೆಯಲ್ಲಿ ಲಿಂಗರಾಜು, ಶಿಲ್ಪಶ್ರೀ, ಜಯರಾಮು, ಶಿವಕುಮಾರ್ ಸೇರಿದಂತೆ 15 ಮಂದಿಯ ಮೇಲೆ ಸೆಕ್ಷನ್ 406, 408,409,420,149ರಡಿ ಪ್ರಕರಣ ದಾಖಲಾಗಿದೆ.

ವಿಚಾರಣೆ ಕೈಗೆತ್ತಿಕೊಂಡಿರುವ ಎಸ್‌ಐ ವೆಂಕಟೇಗೌಡರು ಸಾವಿರಾರು ಸಂಖ್ಯೆಯ ರೈತರು, ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳ ಉಳಿತಾಯಕ್ಕೆ ಮೋಸ ಮಾಡಿದ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಅಲ್ಪಸ್ವಲ್ಪ ಹಂಚಿ ಹೋಗಿರುವುದು ಬಿಟ್ಟರೆ ಇನ್ನುಳಿದಂತೆ ಅಷ್ಟೂ ಹಣ ಲಿಂಗರಾಜು ಮತ್ತು ಶಿಲ್ಪಶ್ರೀ ಬಳಿಯೇ ನಗದು ಅಥವಾ ಆಸ್ತಿ ರೂಪದಲ್ಲಿ ಜಮೆಯಾಗಿ ಕೂತಿದೆ. ಅವರಿಬ್ಬರನ್ನೂ ಹೆಡೆಮುರಿಗೆ ಕಟ್ಟಿ ತಂದು ವಿಚಾರಣೆ ನಡೆಸಿ, ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಹಣ ಕಳೆದುಕೊಂಡವರಿಗೆ ವಾಪಾಸ್ ಮಾಡಿಸಬೇಕಾದ ಜವಾಬ್ದಾರಿ ತನಿಖಾಧಿಕಾರಿ ವೆಂಕಟೇಗೌಡರ ಮೇಲಿದೆ. ಅದೇ ವಿಶ್ವಾಸದಲ್ಲಿ 20 ಸಾವಿರ ಗ್ರಾಹಕರು ಕಾಯುತ್ತಿದ್ದಾರೆ. ಪೊಲೀಸ್ ತನಿಖೆ ಆ ನಂಬಿಕೆ ಉಳಿಸಿಕೊಳ್ಳುತ್ತದೆಯಾ ಕಾದು ನೋಡಬೇಕು.

■ ಮಂಡ್ಯ ನಾಗೇಶ್



GLEC

Save, Secure & Grow for Future

Reg.No. MDYF / 55 / 2009-2010

GREEN LEAVES ESSENTIAL CROPS


GREEN LEAVES GROUP OF COMPANIES

Office : # 1156, Sahakara Union Rajataha Bhavana, 1st Main, Ashok Nagar, Mandya-571401 (INDIA)

Phone : 08232-400735 Mobile : 9140807038

1. Green Leaves Inligrated Crops Pvt. Ltd.,
2. Green Leaves Essential Crops. (Agro Activities)
3. Green Leaves Chits Pvt., Ltd.
4. Green Leaves Matrimony,
5. Green Leaves Tours & Travels.
6. Green Leaves Insurance Services.
7. Fare Growth Micro Finance Institution
8. Vanashree Grameenabhivrudhi Samsthe (LIC Micro Insurance)
9. Srujana Foundation (N G O)
10. Green Leaves Souharda Co-operative Ltd.,

ಜಿಎಲ್‌ಇಸಿ ಮುಂಡಾಯಿಸಿರುವ ವಿವಿಧ ಸ್ಕೀಂ!



GREEN LEAVES ESSENTIAL CROPS®

Office: # 1156, Sahakara Union Rajatha Bhavana, 1st Main, Ashoka Nagar, Mandya-571401, Ph: 08232

Renewal Date: 15-07-2013

Receipt No. : KQ106110 Certificate No : 725064118

Received from Mr./Mrs: SIDDAMMA

A sum of Rupees: *** FIVE HUNDRED ONLY ***

for THIRTY-SIX installment towards purchase of product GLECPLAN-A

Mode Monthly By Cash/Cheque/DD No. CASH Executive Code: MA100034

Consideration Amount 30000 Paid Amount 18000 Balance Amount 12000

Next Due Date : 13-08-2013 Late Payment fee's


Amount Received in Advance against the product as mentioned in Application.

Rs. **500 /-

for GREEN LEAVES ESSENTIAL CROPS.


Authorised Signatory

ಗ್ರಾಹಕರಿಗೆ ಜಿಎಲ್‌ಇಸಿ ನೀಡಿರುವ ರಶೀದಿ



ಗ್ರಾಹಕರು ಹಣಕಟ್ಟಿರುವ ರಶೀದಿ

ಕಲ್ಲಿದ್ದಲಿನ ಒಡಲ ಬೆಂಕಿ



ಸೆಪ್ಟೆಂಬರ್ 24ರಂದು ಭಾರತದ ಮಾಧ್ಯಮಗಳ ತುಂಬಾ ಒಂದು ಸುದ್ದಿ ಆವರಿಸಿಕೊಂಡಿತ್ತು, ಅದು ಮಂಗಳಯಾನ ಯಶಸ್ವಿಗೊಂಡ ಸಂಭ್ರಮದ ಸುದ್ದಿ. ಈ ಸಂದರ್ಭವನ್ನು ಬಳಸಿಕೊಂಡ ಪ್ರಧಾನಿ ನರೇಂದ್ರ ಮೋದಿ ಇಸ್ರೋಗೆ ಭೇಟಿ ಕೊಟ್ಟು ಪೋಸು ನೀಡಿದ ಸುದ್ದಿಗಳೇ ಮಹಾಪೂರ. ಜೊತೆಜೊತೆಗೆ ವ್ಯವಸ್ಥೆಯ ಶುದ್ಧೀಕರಣ ಮಾಡುವುದಾಗಿ ಘೋಷಣೆ ಮಾಡಿದ ಮೋದಿಯ ಬಗ್ಗೆ ಪ್ರಶಂಸೆಯ ಸುರಿಮಳೆ.

ಇಷ್ಟೆಲ್ಲಾ ಸುದ್ದಿ ಸಂಭ್ರಮದ ನಡುವೆ ಈ ದೇಶದ ರಾಜಕೀಯ-ಆರ್ಥಿಕತೆಗೆ ಸಂಬಂಧಿಸಿದ ಅತ್ಯಂತ ಪ್ರಮುಖ ಸುದ್ದಿಯೊಂದು ಮೂಲೆಗುಂಪಾಗಿ ಹೋಗಿತ್ತು. ಕೋಲ್‌ಗೇಟ್ ಹಗರಣ ಎಂದು ಕುಖ್ಯಾತಿ ಗಳಿಸಿದ್ದ ಪ್ರಕರಣದ ವಿಚಾರಣೆ ನಡೆಸುತ್ತಿದ್ದ ಸುಪ್ರೀಂಕೋರ್ಟ್ ಅಂತಿಮ ತೀರ್ಪು ನೀಡಿತ್ತು.

ಆರ್.ಎಂ.ಲೋಧಾ ನೇತೃತ್ವದ ಮೂರು ಸದಸ್ಯರ ನ್ಯಾಯಪೀಠ ತನ್ನ 163 ಪುಟಗಳ ವಿವರವಾದ ತೀರ್ಪಿನಲ್ಲಿ 1993ರಿಂದ ವಿವಿಧ ಸರ್ಕಾರಗಳು ಹಂಚಿಕೆ ಮಾಡಿದ್ದ 218 ಕಲ್ಲಿದ್ದಲು ನಿಕ್ಷೇಪಗಳ ಪೈಕಿ 214 ಹಂಚಿಕೆಗಳನ್ನು ರದ್ದುಪಡಿಸಿ ಆದೇಶ ಹೊರಡಿಸಿದೆ. ಆದರೆ ನರೇಂದ್ರ ಮೋದಿ ಗದ್ದುಗೆಯೇರುವವರೆಗೂ ಈ ಕೋಲ್‌ಗೇಟ್ ಹಗರಣವನ್ನು ಯುಪಿಎನ ವೈಫಲ್ಯ ಹಾಗೂ ಭ್ರಷ್ಟಾಚಾರದ ಪ್ರತೀಕವಾಗಿ ಪ್ರಚುರಪಡಿಸುತ್ತಾ ಬಂದಿದ್ದ ಕಾರ್ಪೋರೇಟ್ ಮಾಧ್ಯಮಗಳು ಇದೇ ಪ್ರಕರಣದ ಬಗ್ಗೆ ಸುಪ್ರೀಂಕೋರ್ಟ್ ನೀಡಿದ ಐತಿಹಾಸಿಕ ತೀರ್ಪನ್ನು ಮೂಲೆಗುಂಪು ಮಾಡಿಬಿಟ್ಟಿವೆ ಎಂದರೆ ನಾವು ನಂಬಲೇಬೇಕಾಗಿದೆ. ಯಾಕೆಂದರೆ ವಾಸ್ತವ ನಮ್ಮ ಕಣ್ಣ ಮುಂದಿದೆ.

ನೈಸರ್ಗಿಕ ಸಂಪನ್ಮೂಲಗಳಲ್ಲಿ ಕಲ್ಲಿದ್ದಲಿಗೆ ವಿಶಿಷ್ಟವಾದ ಸ್ಥಾನವಿದೆ. ದೇಶದಲ್ಲಿ ಉತ್ಪಾದನೆಯಾಗುವ ವಿದ್ಯುತ್‌ಶಕ್ತಿಯ ಶೇಕಡ 50ರಷ್ಟು ಉತ್ಪಾದನೆಯಾಗುವುದು ಕಲ್ಲಿದ್ದಲಿನಿಂದಲೇ. ಅಲ್ಲದೇ ಸಿಮೆಂಟ್, ಸ್ಟೀಲ್ ಮುಂತಾದ ಕೈಗಾರಿಕೆಗಳಲ್ಲಿ ಕಲ್ಲಿದ್ದಲಿನ ಬಳಕೆ ತೀರಾ ಅವಶ್ಯ. ಎಂತಲೇ ಭಾರತದ ಆರ್ಥಿಕತೆಯಲ್ಲಿ ಕಲ್ಲಿದ್ದಲಿಗೆ ಮಹತ್ವದ ಸ್ಥಾನವಿದೆ. ಈ ಹಿನ್ನೆಲೆಯಲ್ಲಿ ಈ ಪ್ರಕರಣದ ಪೂರ್ವಾಪರವನ್ನು ಸ್ವಲ್ಪ ಕೆದಕಿ ನೋಡೋಣ.

1973ರಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ಕಲ್ಲಿದ್ದಲು ಗಣಿಗಳ ರಾಷ್ಟ್ರೀಕರಣ ಮಾಡಿದ್ದರು. ಆಗ ಅದಕ್ಕೆ ನೀಡಿದ್ದ ಕಾರಣ ಖಾಸಗಿ ಗಣಿಗಳ ಅವೈಜ್ಞಾನಿಕ ಗಣಿಗಾರಿಕೆಯಿಂದಾಗಿ ಪರಿಸರಕ್ಕೆ ಮಾರಕವಾಗಿದೆ ಮತ್ತು ಖಾಸಗಿ ಕಂಪನಿಗಳು ಕಾರ್ಮಿಕರನ್ನು ಅಮಾನವೀಯವಾಗಿ ಶೋಷಿಸುತ್ತಿದ್ದದ್ದು. ಆದ್ದರಿಂದ ಸರ್ಕಾರವೇ ನೇರವಾಗಿ ಕಲ್ಲಿದ್ದಲು ನಿಕ್ಷೇಪಗಳ ಗಣಿಗಾರಿಕೆ ಮಾಡಬೇಕು ಎಂಬುದು ಅಂದಿನ ಘೋಷಿತ ಉದ್ದೇಶವಾಗಿತ್ತು. ಈ ಉದ್ದೇಶಕ್ಕಾಗಿ ಕೋಲ್ ಮೈನ್ಸ್ ಅಥಾರಿಟಿ ಲಿಮಿಟೆಡ್ ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಲಾಯಿತು. ಮುಂದೆ ಇದೇ ಕೋಲ್ ಇಂಡಿಯಾ ಲಿಮಿಟೆಡ್ ಎಂಬ ಸಾರ್ವಜನಿಕ ಉದ್ಯಮವಾಗಿ ರೂಪು ತಳೆದಿದೆ.

90ರ ದಶಕದಲ್ಲಿ ಖಾಸಗೀಕರಣ, ಉದಾರೀಕರಣದ ನೀತಿಗಳು ಚಾಲನೆ ಪಡೆದುಕೊಂಡ ಪರ್ವದಲ್ಲಿ ಉನ್ನತ ತಂತ್ರಜ್ಞಾನದ ಬಳಕೆ, ಕಾರ್ಯದಕ್ಷತೆ, ಹೆಚ್ಚಿನ ಬಂಡವಾಳದ ಹೂಡಿಕೆ ಇವೇ ಮೊದಲಾದ ನೆಪಗಳನ್ನು ಮುಂದೊಡ್ಡಿ ಆಳುವ ಸರ್ಕಾರಗಳು ಸಾರ್ವಜನಿಕ ಸಂಪನ್ಮೂಲಗಳನ್ನು ಖಾಸಗಿ ಕಂಪನಿಗಳ ಒಡಲಿಗೆ ಹಾಕುವ ಪುಣ್ಯದ ಕಾರ್ಯದಲ್ಲಿ ತೊಡಗಿಸಿಕೊಂಡವು. ನಿರ್ದಿಷ್ಟವಾಗಿ 1993ರಿಂದೀಚೆಗೆ ಕಲ್ಲಿದ್ದಲು ನಿಕ್ಷೇಪಗಳನ್ನು ಖಾಸಗಿ ಕಂಪನಿಗಳಿಗೆ ಹಂಚಿಕೆ ಮಾಡುವ ಪ್ರಕ್ರಿಯೆ ಆರಂಭವಾಯಿತು.

ಅಂದಿನಿಂದ ಇಂದಿನವರೆಗೆ ಅಧಿಕಾರಕ್ಕೆ ಬಂದ ವಾಜಪೇಯಿ ಸರ್ಕಾರ, ಮನಮೋಹನ್ ಸಿಂಗ್ ಸರ್ಕಾರದಿಂದ ಹಿಡಿದು ಇಂದಿನ ಮೋದಿ ಸರ್ಕಾರದವರೆಗೆ ಎಲ್ಲರೂ ಇದೇ ನೀತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಮಧ್ಯಪ್ರದೇಶ, ಛತ್ತೀಸ್‌ಗಢ, ಜಾರ್ಖಂಡ್, ಬಿಹಾರ ಮತ್ತು ಉತ್ತರಪ್ರದೇಶ ರಾಜ್ಯಗಳನ್ನು ಒಳಗೊಂಡ ಸುಮಾರು 200 ಚದರ ಕಿಮೀ ಭೂಪ್ರದೇಶದಲ್ಲಿ ಈ ಕಲ್ಲಿದ್ದಲು ನಿಕ್ಷೇಪಗಳು ಹರಡಿಕೊಂಡಿವೆ. ಈ ಪ್ರದೇಶದಲ್ಲಿ 15 ಸಾವಿರ ಮೆಗಾ ವ್ಯಾಟ್ ಸಾಮರ್ಥ್ಯದ ಉಷ್ಣ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ ಕೋಲ್ ಕ್ಯಾಪಿಟಲ್ ಆಫ್ ಇಂಡಿಯಾ ಎಂದು ಕರೆಯಲಾಗುವ ಧನಬಾದ್‌ನಿಂದ ದೇಶದ ಮೂಲೆಮೂಲೆಗಳಲ್ಲಿರುವ ವಿವಿಧ ಕೈಗಾರಿಕೆಗಳಿಗೆ ರೈಲುಗಳ ಮೂಲಕ ಕಲ್ಲಿದ್ದಲು ರವಾನೆಯಾಗುತ್ತಲೇ ಇದೆ.

ಕಲ್ಲಿದ್ದಲು ನಿಕ್ಷೇಪದ ಗುತ್ತಿಗೆ ಹಿಡಿದ ಕಂಪನಿಗಳೇ ಬೇರೊಂದು ಮುಸುಕಿನಲ್ಲಿ ಥರ್ಮಲ್ ಪವರ್ ಉತ್ಪಾದನೆಯ ಗುತ್ತಿಗೆ ಹಿಡಿಯುವುದು, ಇಂಥಾ ಕಂಪನಿಗಳಲ್ಲಿ ರಾಜಕಾರಣಿಗಳು ಹಾಗೂ ಅಧಿಕಾರಶಾಹಿಗಳು ಬೇನಾಮಿ ಹೆಸರಿನಲ್ಲಿ ಪಾಲುದಾರಿಕೆ ಹೊಂದಿರುವುದು ಮಾಮೂಲಿ ಸಂಗತಿಯಾಗಿಬಿಟ್ಟಿದೆ. ಈ ವಿದ್ಯಮಾನ ಕೇವಲ ಕಲ್ಲಿದ್ದಲಿಗೆ ಮಾತ್ರ ಸೀಮಿತವಾಗಿಲ್ಲ, ಈ ಭರತ ಭೂಮಿಯಲ್ಲಿ ಲಭ್ಯವಿರುವ ಎಲ್ಲ ನೈಸರ್ಗಿಕ ಸಂಪನ್ಮೂಲಗಳ ವಿಷಯದಲ್ಲೂ ಹೀಗೇ ಆಗುತ್ತಿದೆ.

2012ರ ಮಾರ್ಚ್ 22 ರಂದು ಸಿಎಜಿ ವರದಿಯ ಸ್ಫೋಟಕ ಸುದ್ದಿಯೊಂದು ಭಾರತದಾದ್ಯಂ ಭಾರೀ ಸಂಚಲನ ಮೂಡಿಸಿತ್ತು. ಕಲ್ಲಿದ್ದಲು ಗಣಿಗ ಹರಾಜು ಪ್ರಕ್ರಿಯೆ ನಡೆಸದೆ ಮನಸೋ ಇಚ್ಛೆ ಹಂ ಮಾಡಿದ್ದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ 10.7 ಲ ಕೋಟಿ ರೂಪಾಯಿಗಳ ನಷ್ಟವಾಗಿದೆಯೆಂದು ಸಿಎಜಿ ವರದಿಯನ್ನು ಉಲ್ಲೇಖಿಸಿ ಎಲ್ಲಾ ಮಾಧ್ಯಮಗಳು ಭಾರೀ ಸುದ್ದಿ ಮಾಡಿದವು. ಕೋಲ್‌ಗೇಟ್ ಹಗರಣ ಎಂಬ ಆಕರ್ಷಕ ಹೆಸರನ್ನೂ ನೀಡಿದವು.

ಅಂದಿನಿಂದ ಇಂದಿನವರೆಗೆ ಈ ಕೋಲ್‌ಗೇಟ್ ಹಗರಣ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಮತ್ತು ವೈಫಲ್ಯಗಳಿಗೆ ಒಂದು ಕೈಗನ್ನಡಿಯಂತೆ ಪ್ರಚಾರ ಪಡೆದುಕೊಂಡಿದೆ. ಹಾಗೆ ನೋಡಿದರೆ ಈಗಿನ ಸರ ಇಷ್ಟೊಂದು ಬಹುಮತದಿಂದ ಆರಿಸಿ ಬರುವಲ್ಲಿ ಕೋಲ್‌ಗೇಟ್ ಹಗರಣದ ಪಾತ್ರವೂ ಇದೆ. ಹೀಗೆ ಸಮಕಾಲೀನ ರಾಜಕೀಯ ಮತ್ತು ಆರ್ಥಿಕತೆಗಳ ಮೇಲೆ ಭಾರೀ ಪರಿಣಾಮ ಬೀರುತ್ತಿರುವ ಇಂಥಾ ಹಗರಣದ ಬಗ್ಗೆ ಸುಪ್ರೀಂಕೋರ್ಟ್ ಐತಿಹಾಸಿಕ ತೀರ್ಪು ನೀಡಿ 214 ನಿಕ್ಷೇಪಗಳ ಹಂಚಿಕೆ ಪ್ರಕ್ರಿಯೆಯನ್ನು ರದ್ದುಪಡಿಸಿದೆ. ಆದರೆ ಮೋದಿ ಸರ್ಕಾರವನ್ನು ಗದ್ದುಗೆಗೇರಿಸಿ ಪುನೀತವಾಗಿರುವ ಭಾರತದ ಕಾರ್ಪೋರೇಟ್ ಮಾಧ್ಯಮಗಳು ಇಂಥಾ ಪ್ರಮುಖ ಸುದ್ದಿಯತ್ತ ಗಮನ ಹರಿಸದಿರುವುದು ಆಶ್ಚರ್ಯದ ಸಂಗತಿಯೇನಲ್ಲ.

ವಿರೋಧ ಪಕ್ಷದ ಸ್ಥಾನದಲ್ಲಿರುವ ಪಕ್ಷಗಳನ್ನೂ ಒಳಗೊಂಡು ಈ ದೇಶದ ಯಾವುದೇ ಪಕ್ಷ ಈ ವಿಷಯವನ್ನು ಪ್ರಮುಖ ಅಜೆಂಡಾವಾಗಿ ಸಾರ್ವಜ ಚರ್ಚೆಗೆ ತರದಿದ್ದುದು ಮಾತ್ರ ನಮ್ಮ ಪ್ರಜಾಪ್ರಭು ದುಸ್ಥಿತಿಗೆ ಹಿಡಿದ ಕನ್ನಡಿ.

ದೇಶದ ಪರಮೋಚ್ಚ ತನಿಖಾ ಸಂಸ್ಥೆಯಾಗಿರು ಸಿಬಿಐ ಈ ವಿಷಯದಲ್ಲಿ ಏನೋ ಕಡಿದು ಕಟ್ಟೆ ಹಾಕಿಬಿಟ್ಟಿದೆ ಎಂದು ನಾವು ಭಾವಿಸುವಂತಿಲ್ಲ. ಯಾಕೆಂದರೆ ಕಾರ್ಪೋರೇಟ್ ಕುಳಗಳನ್ನು ಹಾಗೂ ಆಯಕಟ್ಟಿನ ರಾಜಕಾರಣಿಗಳನ್ನು ರಕ್ಷಿಸಲು ಸಿಬಿಐ ಸಾಕಷ್ಟು ತಿಪ್ಪರಲಾಗ ಹಾಕಿದೆ. ಆದರೂ ಮುಚ್ಚಿಹಾಕಲಾಗದ ಸತ್ಯಗಳಷ್ಟೇ ಈಗ ಹೊರಬಿದ್ದಿರುವುದು.

ಕೆಲ ಉದಾಹರಣೆ ನೋಡೋಣ.

ಕುಮಾರ ಮಂಗಳಂ ಬಿರ್ಲಾ ಎಂದರೆ ಈ ದೇಶದಲ್ಲಿ ದೊಡ್ಡ ಹೆಸರು. ಈ ಕಲ್ಲಿದ್ದಲು ಹಗರಣದಲ್ಲಿ ಬಿರ್ಲಾನನ್ನೂ ಒಳಗೊಂಡು ಅಂಥ

ಕಲ್ಲಿದ್ದಲಿಗಿಂತಾ ಕಡೆಯಾದವರು...

"ಗಣಿಗಾರಿಕೆ ಈ ದೇಶದ ಆದಿವಾಸಿಗಳ ಬದುಕನ್ನು ಸರ್ವನಾಶ ಮಾಡುತ್ತಿದೆ. ಅಧಿಕಾರಾರೂಢ ಸರ್ಕಾರದ ಸದಸ್ಯನಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ರಾಜ್ಯ ಸರ್ಕಾರಗಳು ಹಾಗೂ ಕೇಂದ್ರ ಸರ್ಕಾರಗಳು ಏನೇ ಹೇಳಿಕೊಂಡರೂ ಆದಿವಾಸಿ ಪ್ರದೇಶಗಳು ನೀತಿ ನಿರೂಪಕರ ಪಾಲಿಗೆ ಕೇವಲ ಖನಿಜಭರಿತ ಪ್ರದೇಶಗಳಾಗಿ ಕಾಣುತ್ತಿವೆ. ಬಾಕ್ಸೈಟ್ ಅದಿರಿನ ಬಗ್ಗೆ ಕಬ್ಬಿಣದ ಅದಿರಿನ ಬಗ್ಗೆ ಕಲ್ಲಿದ್ದಲಿನ ಬಗ್ಗೆ ನಾವು ಹೆಚ್ಚು ಕಾಳಜಿ ವಹಿಸುತ್ತಿದ್ದೇವೆಯೇ ವಿನಹ ಅಲ್ಲಿ ವಾಸಿಸುತ್ತಿರುವ ಜನರ ಜೀವನ ನಮ್ಮ ಪರಿಗಣನೆಯಲ್ಲೇ ಇರುವುದಿಲ್ಲ." ಕೇಂದ್ರದ ಮಾಜಿ ಮಂತ್ರಿಯಾಗಿದ್ದ ಜೈರಾಮ್ ರಮೇಶ್ ಆರ್ಥಿಕ ಸಮಾವೇಶವೊಂದರಲ್ಲಿ ಆಡಿದ ಮಾತುಗಳಿವು.

ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಒಬ್ಬ ಮಂತ್ರಿ ಈ ಮಾತುಗಳನ್ನು ಆಡಲು ಸ್ಪಷ್ಟ ಕಾರಣಗಳಿದ್ದವು. ಖನಿಜ ಸಂಪನ್ಮೂಲಗಳು ಹೇರಳವಾಗಿರುವ ಛತ್ತೀಸ್‌ಗಢ, ಬಿಹಾರ, ಜಾರ್ಖಂಡ್, ಮಧ್ಯಪ್ರದೇಶ ಮುಂತಾದ ರಾಜ್ಯಗಳ ಸರ್ಕಾರಗಳು ಹಾಗೂ ಕೇಂದ್ರ ಸರ್ಕಾರ ಇದುವರೆಗೆ ಸುಮಾರು 1,50,000 ಕೋಟಿ ಮೌಲ್ಯದ ಯೋಜನಾ ಒಪ್ಪಂದಗಳಿಗೆ ಸಹಿ ಹಾಕಿದ್ದಾವೆ. ಕಲ್ಲಿದ್ದಲು ಗಣಿಗಾರಿಕೆ ಕೂಡ ಇದರಲ್ಲಿ ಒಂದು.

ಕಲ್ಲಿದ್ದಲು ನಿಕ್ಷೇಪಗಳು ಸಿರಿವಂತ ಕಂಪನಿಗಳಿಗೆ ಸ್ವರ್ಗವನ್ನು ಸೃಷ್ಟಿಸುತ್ತಿದ್ದರೆ, ಈ ನಿಕ್ಷೇಪಗಳನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡಿರುವ ಮಧ್ಯ ಭಾರತದ ಭೂಪ್ರದೇಶದಲ್ಲಿ ವಾಸಿಸುತ್ತಿರುವ ನತದೃಷ್ಟ ಆದಿವಾಸಿಗಳ ಪಾಲಿಗೆ ಈ ಕಲ್ಲಿದ್ದಲೇ ಒಂದು ಶಾಪವಾಗಿದೆ. ಯಾಕೆಂದರೆ ನಾನಾ ಹೆಸರಿನ ಯೋಜನೆಗಳು ಆದಿವಾಸಿಗಳ ಬದುಕನ್ನು ನರಕ ಮಾಡಿಬಿಟ್ಟಿವೆ.

ಪರಂಪರಾನುಗತವಾಗಿ ಉಳುಮೆ ಮಾಡುತ್ತಿದ್ದ ಅವರ ಭೂಮಿಗಳನ್ನು ಕಸಿಯಲಾಗಿದೆ. ಪ್ರತಿ ಕುಟುಂಬಕ್ಕೂ ಸರ್ಕಾರಿ ನೌಕರಿ, ವಾಸಯೋಗ್ಯ ಮನೆ, ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಆಸ್ಪತ್ರೆ ಸೌಲಭ್ಯ ಎಲ್ಲ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟು ಆದಿವಾಸಿಗಳನ್ನು ಎತ್ತಂಗಡಿ ಮಾಡಲಾಗಿದೆ.

ಕುಡಿಯುವ ನೀರಿನ ಮೂಲಗಳಾದ ನದಿ ಹೊಳೆಗಳಿಗೆ ರಾಸಾಯನಿಕ ಮಿಶ್ರಿತ ಗಲೀಜು ನೀರು ಹರಿಸಲಾಗಿದೆ. ಅವರ ಪಾರಂಪರಿಕ ಭೂಮಿಗಳನ್ನು ಕಸಿದುಕೊಳ್ಳಲಾಗಿದೆ. ಇದೆಲ್ಲಾ ನಡೆದಿರುವುದು ರಾಷ್ಟ್ರದ ವಿದ್ಯುತ್‌ಶಕ್ತಿ ಭದ್ರತೆಯ ಹೆಸರಿನಲ್ಲಿ.

ಪರಿಣಾಮವಾಗಿ ಆದಿವಾಸಿಗಳು ಈ ವ್ಯವಸ್ಥೆಯ ವಿರುದ್ಧ ಆಯುಧ ಹಿಡಿದು ಹೋರಾಡಬೇಕಾದ ಸನ್ನಿವೇಶ ನಿರ್ಮಾಣವಾಗಿದೆ.

ಬಿಜೆಪಿಗೆ ಎಷ್ಟು ನಾಲಗೆ

ಕೇಂದ್ರದ ಗದ್ದುಗೆಯಲ್ಲಿರುವ ಬಿಜೆಪಿಯ ಕಾನೂ ಮಂತ್ರಿ 'ಸುಪ್ರೀಂಕೋರ್ಟ್ ತೀರ್ಪು ತಮ್ಮ ಸರ್ಕಾ ನಿಲುವಿಗೆ ಅನುಗುಣವಾಗಿಯೇ ಇದೆ. ಕಲ್ಲಿದ್ದ ಹಂಚಿಕೆಯಲ್ಲಿ ಪಾರದರ್ಶಕತೆ ತರಬೇಕೆಂಬುದೇ ನ ನೀತಿ' ಎಂದು ಎಲುಬಿಲ್ಲದ ನಾಲಗೆಗೆ ಕೆಲಸ ಕೊಟ್ಟಿದ್ದಾ ಆದರೆ ವಾಸ್ತವಾಂಶಗಳೇ ಬೇರೆ.

ಇತ್ತೀಚೆಗೆ ಮೋದಿ ನೇತೃತ್ವದ ಕೇಂದ್ರ ಸರ್ಕಾ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ ಮನವಿಯ ಪ್ರಕಾರ ಪ್ರಮು 46 ನಿಕ್ಷೇಪಗಳ ಹಂಚಿಕೆಯನ್ನು ಮುಂದುವರೆಸಬೇ ಎಂಬುದಾಗಿತ್ತು.

ಆದರೆ ಸುಪ್ರೀಂಕೋರ್ಟ್ ಈ ಬೇಡಿಕೆಯನ್ನು ಮಾ ಮಾಡಿಲ್ಲ.

ಸರ್ಕಾರಿ ಸ್ವಾಮ್ಯದ ಸ್ಟೀಲ್ ಅಥಾರಿಟಿ ಆ ಇಂಡಿಯಾ ಮತ್ತು ನ್ಯಾಷನಲ್ ಥರ್ಮಲ್ ಪವ ಕಾರ್ಪೋರೇಷನ್‌ಗೆ ಹಂಚಿಕೆ ಮಾಡಿದ್ದ ಎರ ನಿಕ್ಷೇಪಗಳಲ್ಲದೆ ಸಾಸನ್ ಪವರ್ ಲಿಮಿಟೆಡ್ ಕಂಪ ಹಂಚಿಕೆ ಮಾಡಿದ್ದ ಎರಡು ನಿಕ್ಷೇಪಗಳು - ಹೀಗೆ ಒ ನಾಲ್ಕು ನಿಕ್ಷೇಪಗಳನ್ನು ಹೊರತುಪಡಿಸಿ ಮೋದಿ ಸರ್ಕಾ ಬೇಡಿಕೆಯಿಟ್ಟಿದ್ದ ಉಳಿದ 42 ನಿಕ್ಷೇಪಗಳ ಹಂಚಿಕೆಯ ರದ್ದುಪಡಿಸಿದೆ. ಆದರೆ ಈ ಕೂಡಲೇ ಗಣಿಗಾ ಸ್ಥಗಿತಗೊಳಿಸುವುದು ಕಾರ್ಯಸಾಧುವಲ್ಲ ಎಂ ಕಾರಣದಿಂದ ಮುಂದಿನ ಆರು ತಿಂಗಳ ಕಾಲ ಮಾ ಗಣಿಗಾರಿಕೆ ನಡೆಸಲು ಷರತ್ತುಬದ್ಧ ಕಾಲಾವಕಾಶ ನೀಡಿ

ಈ ಅವಧಿಯಲ್ಲಿ ಪ್ರತಿ ಟನ್‌ಗೆ 295 ರೂ. ಗಳ ರಾಜಧನವನ್ನು ಪಾವತಿಸಬೇಕು. ಈ ಅವಧಿಯಲ್ಲಿ ಕೇ ಸರ್ಕಾರ ಕಲ್ಲಿದ್ದಲು ಗಣಿಗಳ ಹಂಚಿಕೆ ಮಾಡಲು ಸ್ಪರ್ಧಾ ಹರಾಜು ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳಬೇಕು. ಪ್ರಕ್ರಿಯೆ ಸಂಪೂರ್ಣ ಪಾರದರ್ಶಕವಾಗಿರಬೇಕು ಎಂ ತಾಕೀತು ಮಾಡಿದೆ.

ಎಲುಬಿಲ್ಲದ ನಾಲಗೆಗಳನ್ನು ನಿಯಂತ್ರಿಸುವುದು ಕ ಕಷ್ಟ!!

...ಾಕ್ ಡೈಮಂಡ್ ಲೂಟಿಕೋರರು

...ದ್ದಲು ಮತ್ತು ಡೈಮಂಡ್‌ಗಳಲ್ಲಿರುವ ಮೂಲವಸ್ತು ಒಂದೇ. ಅದು ಕಾರ್ಬನ್. ಅದಕ್ಕಾಗಿ ಕಲ್ಲಿದ್ದಲಿಗೆ ...ಡೈಮಂಡ್ ಎಂಬ ಹೆಸರು ಬಂದಿದೆ. ಸುಪ್ರೀಂಕೋರ್ಟ್ ವಿಚಾರಣೆಯಿಂದ ಹೊರಬಿದ್ದ ಬ್ಲಾಕ್ ಡೈಮಂಡ್ ...ರ್‌ಗಳಲ್ಲಿ ಪ್ರಮುಖ ಕಂಪನಿಗಳು ಹೀಗಿವೆ.



- ಟಾಟಾ ಗ್ರೂಪ್ ಆಫ್ ಕಂಪನೀಸ್
- ಜಿಂದಾಲ್ ಸ್ಟೀಲ್ ಅಂಡ್ ಪವರ್ ಲಿಮಿಟೆಡ್
- ಎಲೆಕ್ಟ್ರೋ ಸ್ಟೀಲ್ ಕ್ಯಾಸ್ಟಿಂಗ್ಸ್ ಲಿಮಿಟೆಡ್
- ಅನಿಲ್ ಅಗರ್‌ವಾಲ್ ಗ್ರೂಪ್ ಕಂಪನಿಗಳು
- ಜೈಸ್ವಾಲ್ ನೆಕೊ
- ನಾಗಪುರ ಮೂಲದ ಅಭಿಜಿತ್ ಸಮೂಹ
- ಆದಿತ್ಯ ಬಿರ್ಲಾ ಸಮೂಹದ ಕಂಪನಿಗಳು
- ಎಸ್ಸಾರ್ ಗ್ರೂಪ್ ಪವರ್ ವೆಂಚರ್ಸ್
- ಅದಾನಿ ಸಮೂಹ
- ...). ಆರ್ಸೆಲರ್ ಮಿತ್ತಲ್ ಇಂಡಿಯಾ
- ಲ್ಯಾಂಕೋ ಗ್ರೂಪ್ ... ಈ ಪಟ್ಟಿ ಹೀಗೇ ಮುಂದುವರೆಯುತ್ತದೆ.

...ಪಟ್ಟಿಯನ್ನು ಕಳೆದ ಚುನಾವಣೆಯಲ್ಲಿ ನರೇಂದ್ರ ಮೋದಿಯನ್ನು ಪ್ರಧಾನಿ ಪಟ್ಟಕ್ಕೆ ತರಬೇಕೆಂದು ಶತಾಯಗತಾಯ ...ಸಿದ ಕಾರ್ಪೊರೇಟ್ ಕುಳಗಳ ಪಟ್ಟಿ ಎಂದು ಓದಿಕೊಂಡರೆ ವ್ಯತ್ಯಾಸವೇನೂ ಆಗುವುದಿಲ್ಲ. ಇದಕ್ಕೇನಂತೀರಿ?

...ದೊಡ್ಡ ದೊಡ್ಡ ಹೆಸರುಗಳಿವೆ. ಬಿರ್ಲಾ ...ದ ಹಿಂಡಾಲ್ಕೊ ಕಂಪನಿಗೆ ಕಲ್ಲಿದ್ದಲು ನಿಕ್ಷೇಪ ...ಯಲ್ಲಿ ನಡೆದಿದ್ದ ಅವ್ಯವಹಾರಗಳ ಬಗ್ಗೆ ತನಿಖೆ ...ತ್ತಿದ್ದ ಸಿಬಿಐ ಕಳೆದ ಆಗಸ್ಟ್ 28ರಂದು ವಿಶೇಷ ...ರ್ಟ್‌ನಲ್ಲಿ ಅಂತಿಮ ವರದಿ ಸಲ್ಲಿಸಿ ಬಿರ್ಲಾ ...ದ ಪ್ರಕರಣವನ್ನು ಮುಕ್ತಾಯ ಮಾಡಬೇಕೆಂದು ... ಮಾಡಿದೆ. ಅದಕ್ಕೆ ಸಿಬಿಐ ಕೊಟ್ಟಿರುವ ... ಸ್ಕ್ರೀನಿಂಗ್ ಕಮಿಟಿಯ ಸಭೆಯ ...ಸ್ಟ್ ಪುಸ್ತಕ ಕಳೆದುಹೋಗಿದೆ ...ದು! ಸಿಬಿಐನ ಕರಾಮತ್ತು ಅಲ್ಲಿಗೇ ...ದಿಲ್ಲ. ಓದಲು ಸಾಧ್ಯವಾಗದಷ್ಟು ...ಯಾಗಿರುವ ದಾಖಲಾತಿಗಳನ್ನು ...ರ್ಟ್‌ಗೆ ಸಲ್ಲಿಸಿತು. ಅಷ್ಟು ಮಾತ್ರವಲ್ಲ, ... ದಾಖಲೆಗಳ ಸ್ಥಾನದಲ್ಲಿ ಖಾಲಿ ...ಳಿದ್ದವು!!


...ನ್ನು ಕಾರ್ಪೊರೇಟ್ ಧಣಿಗಳೇನೂ ...ನೆ ಕೂತಿರಲಿಲ್ಲ. ಖಾಸಗಿ ಗಣಿದಾರರ ...ತ (ಪ್ರೈವೇಟ್ ಮೈನರ್ಸ್ ...ಸಿಯೇಷನ್) ನುರಿತ ವಕೀಲರನ್ನು ...ಸಿ ಈ ಹಂಚಿಕೆಯನ್ನು ...ರ್ಥಿಸಿಕೊಳ್ಳುವ ವ್ಯರ್ಥ ಪ್ರಯತ್ನ ...ತ್ತು. ಅವರ ವಾದವೇನೆಂದರೆ "ಕಲ್ಲಿದ್ದಲು ...ಕೆಯನ್ನು ರದ್ದುಪಡಿಸುವುದರಿಂದ ...ಾಗುವ ಅನಾನುಕೂಲ ಪರಿಸ್ಥಿತಿಯನ್ನು ...ರಿಸುವ ಸಾಮರ್ಥ್ಯ ಸರ್ಕಾರಿ ಸ್ವಾಮ್ಯದ ಕೋಲ್ ...ಯಾ ಲಿಮಿಟೆಡ್ ಸಂಸ್ಥೆಗಿಲ್ಲ" ಎಂಬುದು. ...ದ್ದಲು ನಿಕ್ಷೇಪಗಳ ಹಂಚಿಕೆಯನ್ನು ...ಪಡಿಸುವುದರಿಂದ ಹೂಡಿಕೆದಾರರ ವಿಶ್ವಾಸಕ್ಕೆ ...ಯಾಗುತ್ತದೆ" ಎಂಬುದು ಅದರ ಮತ್ತೊಂದು ... "28000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ...ತ ಬೀಳುತ್ತದೆ; 4.4 ಲಕ್ಷ ಕೋಟಿ ರಾಯಲ್ಟಿ ...ರ ತೆರಿಗೆಗಳ ಸಂಗ್ರಹದ ಮೇಲೆ ದುಷ್ಪರಿಣಾಮ ...ತ್ತದೆ. ಆದ್ದರಿಂದ ಈ ಹಂಚಿಕೆಯನ್ನು ...ಮುವರೆಸಬೇಕೆಂಬುದು ಈ ಕಾರ್ಪೊರೇಟ್ ...ಳ ವಾದ. ಸುಪ್ರೀಂಕೋರ್ಟ್ ಈ ಎಲ್ಲ ಸವಕಲು ...ಗಳನ್ನು ತಳ್ಳಿಹಾಕಿ ಕೋಲ್ ಇಂಡಿಯಾ ಸಂಸ್ಥೆಯ ...ಮರ್ಥ್ಯದ ಪ್ರಶ್ನೆ ಈ ಪ್ರಕರಣದಲ್ಲಿ ಒಂದು ...ಷಯವೇ ಅಲ್ಲ ಎಂದು ಖಂಡತುಂಡವಾಗಿ ಹೇಳಿದೆ.

...004ರಲ್ಲಿ ಪ್ರಧಾನಿ ಮನಮೋಹನ್ ಸಿಂಗ್ ...ರ ವಹಿಸಿಕೊಂಡ ತರುವಾಯ ಕಲ್ಲಿದ್ದಲು ...ಗಳನ್ನು ಪಾರದರ್ಶಕವಾಗಿ ಬಹಿರಂಗ ಸ್ಪರ್ಧಾತ್ಮಕ ...ಜು ಪ್ರಕ್ರಿಯೆಯ ಮೂಲಕ ಮಾಡಬೇಕೆಂದು ...ಸ್ಸು ಮಾಡಿದ್ದರು. ಆದರೆ ಈ ಮಾತಿಗೆ ಯಾರೂ ...ಕೊಡಲಿಲ್ಲ. ಕಲ್ಲಿದ್ದಲು ಖಾತೆಗಳನ್ನು ಹೊಂದಿದ್ದ ...ಗಳಿಂದ ಹಿಡಿದು ಅಧಿಕಾರಿಗಳವರೆಗೆ ಎಲ್ಲರೂ ...ದರ್ಶಕತೆಯ ಪ್ರಸ್ತಾಪವನ್ನು ವಿರೋಧಿಸಿದ್ದರು.

...ಗಾಗಿ ರಾಷ್ಟ್ರೀಯ ಕಲ್ಲಿದ್ದಲು ನೀತಿಗೆ ತಿದ್ದುಪಡಿ ... ಹಂಚಿಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ...ಕೆಂದು ಉದ್ದೇಶಿಸಿದ್ದ ಕಡತ ಇಂದಿಗೂ ಗಣಿ ...ಲೆ, ಕಲ್ಲಿದ್ದಲು ಇಲಾಖೆ, ಕಾನೂನು ಇಲಾಖೆ ...ಾದ ಕಚೇರಿಗಳಲ್ಲಿ ಸುತ್ತಾಡುತ್ತಲೇ ಇದೆ. ...ರ್ಗೆಸ್ ಎಂಪಿ ಹಾಗೂ ಸ್ವತಃ ಈ ಹಂಚಿಕೆ ...ಯ ಫಲಾನುಭವಿಯಾಗಿರುವ ನವೀನ್ ...ಲ್ ಈ ರೀತಿಯ ಪರವಾಗಿ ಬಹಿರಂಗ

ಕಾಳಗಕ್ಕೇ ಇಳಿದು ಸಿಎಜಿ ಇತ್ಯಾದಿಗಳನ್ನು ಜರೆದಿದ್ದ. ಆತನ ಪ್ರಕಾರ "1993ರಿಂದ ಭಾರತ ಸರ್ಕಾರ ಅಳವಡಿಸಿಕೊಂಡಿರುವ ಕಲ್ಲಿದ್ದಲು ನೀತಿ ಇಡೀ ಪ್ರಪಂಚದಲ್ಲೇ ಅತ್ಯುತ್ತಮವಾದುದು". ನಮ್ಮ ದೇಶದ ದುಸ್ಥಿತಿ ಕಳ್ಳರನ್ನು ಕಾವಲಿಗಿಟ್ಟಂತಾಗಿದೆ.

ಅಂತಿಮವಾಗಿ ಸಿಎಜಿ ವರದಿ 2012ರ ಆಗಸ್ಟ್



27ರಂದು ಪಾರ್ಲಿಮೆಂಟಿನಲ್ಲಿ ಮಂಡನೆಯಾಯ್ತು. ಸಾಕಷ್ಟು ವಾದವಿವಾದಗಳ ನಂತರ ಸಮಿತಿಯೊಂದನ್ನು ರಚಿಸಿ ಕೋಲ್‌ಗೇಟ್ ಹಗರಣದಿಂದ ಬೊಕ್ಕಸಕ್ಕಾದ ನಷ್ಟ ಸಿಎಜಿ ವರದಿ ಹೇಳಿದಂತೆ 10.7 ಲಕ್ಷ ಕೋಟಿಗಳಲ್ಲವೆಂದು, ಅದು 1.86 ಲಕ್ಷ ಕೋಟಿ ಎಂದು ಇತ್ಯರ್ಥವಾಯಿತು.

ಆದೇನೇ ಇದ್ದರೂ ಈ ಹಗರಣದ ಫಲಾನುಭವಿಗಳಲ್ಲಿ ಖಾಸಗಿ ಕಂಪನಿಗಳು ಮಾತ್ರವಲ್ಲದೆ ರಾಜಕಾರಣಿಗಳು, ಸಂಸದರೂ ಇದ್ದಾರೆ. ಕಾಂಗ್ರೆಸ್, ಬಿಜೆಪಿ, ಡಿಎಂಕೆ, ಎನ್‌ಸಿಪಿ ಮುಂತಾಗಿ ಪಕ್ಷಾತೀತವಾಗಿ ಎಲ್ಲರೂ ಇದ್ದಾರೆ. ಕಾಂಗ್ರೆಸ್ ನಾಗಪುರ ಎಂಪಿ ವಿಜಯ್ ದಾರ್ಡಾ, ಆತನ ಸಹೋದರ ಮಹಾರಾಷ್ಟ್ರದ ಶಿಕ್ಷಣ ಮಂತ್ರಿಯಾಗಿದ್ದ ರಾಜೇಂದ್ರ ದಾರ್ಡಾ, ಬಿಜೆಪಿ ಎಂಪಿ ಹಾಗೂ ಬಿಜೆಪಿಯ ಮಾಜಿ ಅಧ್ಯಕ್ಷ ನಿತಿನ್ ಗಡ್ಕರಿಯ ಆಪ್ತ ಸ್ನೇಹಿತ ಅಜಯ್ ಸಂಚೇತಿ , ಕುರುಕ್ಷೇತ್ರದ ಕಾಂಗ್ರೆಸ್ ಎಂಪಿ ನವೀನ್ ಜಿಂದಾಲ್ ಮತ್ತು ಆತನ ಭಾವಮೈದುನ, ಆಹಾರ ಸಂಸ್ಕರಣೆಯ ಕೇಂದ್ರ ಮಂತ್ರಿ ಸುಬೋಧ್ ಕಾಂತ್ ಸಹಾಯ್, ಕಲ್ಲಿದ್ದಲು ಸಚಿವರಾಗಿದ್ದ ಶ್ರೀಪ್ರಕಾಶ್ ಜೈಸ್ವಾಲ್, ಸಂತೋಷ್ ಬಗ್ರೋಡಿಯಾ, ಡಿಎಂಕೆ ಯ ಮಂತ್ರಿ ಜಗತ್‌ರಕ್ಷಕನ್- ಹೀಗೇ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.


ಈ ಕಲ್ಲಿದ್ದಲು ನಿಕ್ಷೇಪಗಳ ಗುತ್ತಿಗೆ ಪಡೆದ ಬಹುಪಾಲು ಕಂಪನಿಗಳು ವಿದ್ಯುತ್, ಉಕ್ಕು, ಸಿಮೆಂಟ್‌ನಂತಹ ಯಾವುದೇ ಕೈಗಾರಿಕೆಗಳನ್ನು ಹೊಂದಿಲ್ಲ. ಅವರು ಕಲ್ಲಿದ್ದಲನ್ನು ಮೂರುಕಾಸಿನ ಬೆಲೆಗೆ ತೆಗೆದುಕೊಂಡು ಮಾರುಕಟ್ಟೆ ಬೆಲೆಗೆ ಮಾರಿ ಸಾವಿರಾರು ಕೋಟಿ ಲೂಟಿ ಮಾಡಿದರು.

ಹೀಗೆ ರಾಜಕಾರಣಿಗಳಿಗೂ ಕಂಪನಿಗಳಿಗೂ ಅವಿನಾಭಾವ ಸಂಬಂಧ ಇದ್ದುದರ ಪರಿಣಾಮವಾಗಿ ಸಿಬಿಐ ತನ್ನ ತನಿಖೆಯ ವರದಿಯನ್ನು ಸರ್ಕಾರದೊಂದಿಗೆ ಹಂಚಿಕೊಂಡಿತು. ಈ ಬೆಳವಣಿಗೆಗಳನ್ನು ಗಮನಿಸಿದ ಕೋರ್ಟ್ "ಸರ್ಕಾರದ ಹಸ್ತಕ್ಷೇಪದಿಂದ ತನಿಖಾ ವರದಿಯ ಹೃದಯಭಾಗವನ್ನೇ ಬದಲಾಯಿಸಲಾಗಿದೆ" ಎಂದು ವ್ಯಾಖ್ಯಾನಿಸಿತ್ತು, ಮಾತ್ರವಲ್ಲದೆ ಸಿಬಿಐನ ಪ್ರತಿನಿಧಿಗಳನ್ನು "ಪಂಜರದ ಗಿಳಿ"ಗಳೆಂದು ಮೂದಲಿಸಿತ್ತು.

ಇಷ್ಟೆಲ್ಲಾ ಪ್ರಯತ್ನಗಳ ಹೊರತಾಗಿಯೂ ಇದನ್ನು ಮುಚ್ಚಿಹಾಕಲು ಈ ಕಳ್ಳರಕೂಟಕ್ಕೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಸುಪ್ರೀಂಕೋರ್ಟಿನ ಸಕಾರಾತ್ಮಕ ತೀರ್ಪು ಹೊರಬೀಳುವಂತಾಯ್ತು. ಈ ತೀರ್ಪಿನ ಒಂದು ಪ್ರಮುಖ ಅಂಶವೇನೆಂದರೆ ಹೀಗೆ ಲೂಟಿ ಮಾಡಿದ ಕಂಪನಿಗಳು ಪ್ರತಿ ಟನ್‌ಗೆ 295 ರೂಪಾಯಿಗಳಂತೆ ದಂಡ ಪಾವತಿಸಬೇಕಾಗಿದೆ. ಅದರ ಪ್ರಕಾರ ಈಗ ಜಿಂದಾಲ್ ಕಂಪನಿ ಸುಮಾರು 3.000 ಕೋಟಿಗಳಷ್ಟು ದಂಡ ತೆರಬೇಕಾಗಿದೆ. ಬಿರ್ಲಾ ಸಮೂಹ ಸುಮಾರು 600 ಕೋಟಿಗಳಷ್ಟು ತೆರಬೇಕಾಗಿದೆ. ಟಾಟಾಗಳು, ಮಿತ್ತಲ್‌ಗಳು, ಅಂಬಾನಿ, ಅದಾನಿಗಳು ಪಾವತಿಸಬೇಕಿರುವ ದಂಡದ ಮೊತ್ತ ಹತ್ತಾರು ಸಾವಿರ ಕೋಟಿ ದಾಟುತ್ತದೆ.

ಈ ತೀರ್ಪಿನಂತೆ ಕೇಂದ್ರ ಸರ್ಕಾರ 2015ರ ಏಪ್ರಿಲ್ ನಂತರ ಕಲ್ಲಿದ್ದಲು ಹರಾಜು ಪ್ರಕ್ರಿಯೆಗೆ ಪಾರದರ್ಶಕ ಮತ್ತು ಸ್ಪರ್ಧಾತ್ಮಕ ನೀತಿಗಳನ್ನು ರೂಪಿಸಿ ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಗೆ ಕ್ರಮ ತೆಗೆದುಕೊಳ್ಳಬೇಕು. ಈಗ ಚೆಂಡು ಮೋದಿ ಸರ್ಕಾರದ ಅಂಗಳದಲ್ಲಿದೆ. ಅದು ಯಾವರೀತಿಯ ಪ್ರಕ್ರಿಯೆಯನ್ನು ಅಳವಡಿಸುತ್ತದೆ ಎಂಬುದು ಈಗಾಗಲೇ ಗುಜರಾತ್ ಮಾದರಿಯಲ್ಲಿ ನಿರ್ವಿವಾದಿತವಾಗಿ ಸಾಬೀತಾಗಿದೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ



ಒಂದು ಮನವಿ

ಡಾ. ಯು.ಆರ್.ಅನಂತಮೂರ್ತಿಯವರು ನಮ್ಮನ್ನಗಲಿದ್ದಾರೆ. ಅವರ ಚಿಂತನೆ, ಸಾಹಿತ್ಯ, ಹೋರಾಟಗಳ ಬಗ್ಗೆ ಹಲವರು ಬರೆದಿದ್ದಾರೆ.

ಆದರೆ ಅವರು ಸಾಹಿತ್ಯೇತರವಾಗಿ ಸಾಮುದಾಯಿಕ ವಿಷಯಗಳ ಬಗ್ಗೆ, ಸ್ಥಳೀಯ ಹೋರಾಟಗಳ ಬಗ್ಗೆ ಸಹಾಯ ಮಾಡಿದ ವಿವರಗಳು ಬಹುತೇಕರಿಗೆ ಗೊತ್ತಿಲ್ಲ.

ಈ ದೃಷ್ಟಿಯಿಂದ, ಅನಂತಮೂರ್ತಿಯವರು ಕೈಜೋಡಿಸಿದ ದಾಖಲೆಗಳು ಯಾರಲ್ಲಾದರೂ ಇದ್ದರೆ ಅದನ್ನು ಒಟ್ಟುಗೂಡಿಸಿ ಪ್ರಕಟಿಸುವುದು ಉಚಿತ. ಅವರ ಸಾಮಾಜಿಕ ಕಾಳಜಿಯ ಈ ಆಯಾಮವನ್ನು ಪ್ರಕಟಿಸುವ ಜವಾಬ್ದಾರಿಯಿಂದ ಈ ಮನವಿ.

ಆದ್ದರಿಂದ ಈ ರೀತಿಯ ಅನಂತಮೂರ್ತಿಯವರ ಪತ್ರ ಇನ್ನಿತರೇ ದಾಖಲೆಗಳಿದ್ದರೆ, ಅದರ ಫೋಟೋ ಪ್ರತಿ ಸಹಿತ ಪುಟ್ಟ ಟಿಪ್ಪಣಿಯೊಂದನ್ನು ಈ ಕೆಳಕಂಡ ವಿಳಾಸಕ್ಕೆ ಕಳಿಸಿಕೊಟ್ಟರೆ/ಮೈಲ್ ಮಾಡಿದರೆ ಅನುಕೂಲವಾಗುತ್ತದೆ.

ವಿಳಾಸ: ಕೆ.ಪಿ.ಸುರೇಶ, ನಂ 22, 1ನೇ ಕ್ರಾಸ್,
ಅಂಜನಾದ್ರಿ ಲೇಔಟ್, ಕೋಣನಕುಂಟೆ, ಬೆಂಗಳೂರು-62
ಫೋನ್: 09538226543
ಇಮೇಲ್: kpsuresha@gmail.com

'ಬಸವಕೇಂದ್ರ' ಹಗರಣ

6ನೇ ಪುಟದಿಂದ

ಮಾಡುವುದು ಅಷ್ಟು ಸುಲಭವಾಗಿರಲಿಲ್ಲ. ಇತ್ತ ಬ್ಯಾಂಕ್‌ನವರು ಸಾಲ ಮರುಪಾವತಿ ಮಾಡುವಂತೆ ಮೇಲಿಂದ ಮೇಲೆ ಮಠದ ಮೇಲೆ ಒತ್ತಡ ಹಾಕುತ್ತಲೇ ಇದ್ದರು.

ಅದೇ ಹೊತ್ತಿಗೆ ಸರ್ಕಾರದ ಅವಧಿಯೂ ಮುಗಿಯುತ್ತಾ ಬಂದಿದ್ದರಿಂದ ಏನೇ ಅಡೆತಡೆಗಳು ಬಂದರೂ ಬಸವಕೇಂದ್ರದ ಡೀಲ್ ಮುಗಿಸಿ ಎಲೆಕ್ಷನ್‌ನಲ್ಲಿ ಶರಣರ ಕೃಪಾಶೀರ್ವಾದವನ್ನು ಪರ್ಮನೆಂಟ್ ಮಾಡಿಕೊಳ್ಳುವ ಇರಾದೆಗೆ ಬಿದ್ದ ಶೆಟ್ಟರ್ 22.10.2012ರಂದು ಕಾನೂನು ಸಲಹೆಯನ್ನೂ ಮೀರಿ 29.19 ಕೋಟಿಯ ಠೇವಣಿಯನ್ನು ಮುರುಘಾ ಮಠದ ಶಿವಮೂರ್ತಿ ಶರಣರ ಹೆಸರಿಗೆ, ಮುಖ್ಯವಾಗಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಶರಣರ ಖಾತೆಗೆ ಜಮೆಯಾಗುವಂತೆ ನೀಡಿದ್ದರು. ಕೇವಲ ಜಾತಿಪ್ರೀತಿಗೆ ಶೆಟ್ಟರ್‌ನಂತಹ ವ್ಯಾಪಾರಸ್ಥ ಬುದ್ಧಿಯ ಆಸಾಮಿ ಈ ಪರಿ ರಿಸ್ಕ್ ತೆಗೆದುಕೊಳ್ಳಲಾರನು ಎನ್ನುವ ಸೂಕ್ಷ್ಮತೆ ತಿಳಿದಿದ್ದವರು ಡೀಲ್‌ನಿಂದ ಶೆಟ್ಟರ್‌ಗಾದ ಲಾಭದ ಬಗ್ಗೆ ಕೋಟಿಗಟ್ಟಲೆ ಅಂಕಿಅಂಶಗಳನ್ನೂ ನೀಡುವುದುಂಟು. ಅದೇನೆ ಇರಲಿ, ಶೆಟ್ಟರ್ ತಮ್ಮ ಕೊನೇ ಅಂಕಣದಲ್ಲಿ ಸರ್ಕಾರದ ದಿಕ್ಕುತಪ್ಪಿಸಿದ್ದರು ಎನ್ನುವುದಂತೂ ಸತ್ಯ!

ಮುರುಘಾ ಶರಣರ 'ರೇವತಿ' ನಕ್ಷತ್ರ!

2013ರಲ್ಲಿ ಮುರುಘಾ ಮಠಕ್ಕೆ 'ದಿಢೀರನೆ' ಸಿಇಒ ಆಗಿ ನೇಮಕವಾಗಿದ್ದ ರೇವತಿ ಎಂಬ ಹೆಂಗಸೇ ಇಡೀ ಡೀಲ್‌ನ ಮಾಸ್ಟರ್ ಮೈಂಡ್ ಎಂದು ಹೇಳಲಾಗುತ್ತಿದೆ. ಶೆಟ್ಟರ್ ಸರ್ಕಾರದವರೆಗೂ ಸುದ್ದಿ ಹೊಯ್ದು ದೊಡ್ಡ ಮಟ್ಟದಲ್ಲಿ 'ನಿಧಿ' ಹರಿದುಬರುವಂತೆ ಮಾಡಿದ್ದೇ ಈ ರೇವತಿ ಅನ್ನೋದನ್ನು ಸ್ವತಃ ಮುರುಘಾ ಶರಣರೇ ಪರೋಕ್ಷವಾಗಿ ಹೇಳಿಕೊಂಡಿದ್ದುಂಟು. 2013ರಲ್ಲಿ ಇನ್ಫೋಸಿಸ್ ನಾರಾಯಣಮೂರ್ತಿಗೆ ಬಿಕರಿಯಾಗಿದ್ದ ಬಸವಶ್ರೀ ಪ್ರಶಸ್ತಿಯನ್ನು ಪ್ರದಾನ ಮಾಡುವ ಸಮಾರಂಭದಲ್ಲಿ ಇದೇ ರೇವತಿ ಕಂಗೊಳಿಸುತ್ತಿದ್ದಳು. ಆಗ ಮುರುಘಾ ಶರಣರು ತಮ್ಮ ಆಶೀರ್ವಚನದಲ್ಲಿ 'ರೇವತಿಯವರಿಂದ ಮಠದ ಸಾಲ ತೀರಿತು, ಈಗ ಮಠಕ್ಕೆ ನಿಜವಾದ ಸ್ವಾತಂತ್ರ ಸಿಕ್ಕಿದೆ, ಇದೆಲ್ಲಾ ಆದದ್ದು ರೇವತಿಯವರ ಪರಿಶ್ರಮದಿಂದ' ಎಂದುಬಿಟ್ಟಿದ್ದರು. ಕೇಳಿಸಿಕೊಂಡ ಭಕ್ತಾದಿಗಳು ಕೊಂಚ ಮಟ್ಟಿಗೆ ಕಂಗಾಲಾದರೂ ಅಷ್ಟರಲ್ಲಾಗಲೆ ಹರಿದಾಡುತ್ತಿದ್ದ ಶರಣರ 'ರೇವತಿ' ನಕ್ಷತ್ರ ಪ್ರಸಂಗದ ಊಹಾಪೋಹಗಳನ್ನು ಕೇಳಿಸಿಕೊಂಡ ನಂತರ ಚೇತರಿಸಿಕೊಂಡಿದ್ದರು!

ಶಿವಮೂರ್ತಿ ಶರಣರು ಮತ್ತು ಕೆಐಎಡಿಬಿ ನಡುವೆ ನಡೆದ ರೆಜಿಸ್ಟ್ರೇಷನ್ ಪ್ರಸಂಗ ರೇವತಿಯ ಮಧ್ಯಸ್ಥಿಕೆಯ ಚಾಕಚಕ್ಯತೆಯನ್ನು ತೆರೆದಿಡುತ್ತದೆ. 25.10.2012ರಂದು ಚಿತ್ರದುರ್ಗದ ಮಠದಲ್ಲಿ ದಸರೆಯ ಸಂಭ್ರಮವಿತ್ತು. ಸಂಪ್ರದಾಯದಂತೆ ಅವತ್ತು ಶರಣರು (ಶೂನ್ಯಪೀಠ) ಸಿಂಹಾಸನಾರೂಢರಾಗುವ ಅದ್ದೂರಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆದರೆ ಅದೇ ದಿನವೇ ಬೆಂಗಳೂರಿನಲ್ಲಿ ಬಸವಕೇಂದ್ರದ ಆಸ್ತಿಯನ್ನು ಶರಣರು ಕೆಐಎಡಿಬಿಗೆ ರಿಜಿಸ್ಟರ್ ಮಾಡಿಕೊಡಬೇಕಿತ್ತು. ಮಧ್ಯಾಹ್ನ 12 ಗಂಟೆಗೆಲ್ಲ ಸಿಂಹಾಸನಾರೂಢರಾಗುವ ಕಾರ್ಯಕ್ರಮವನ್ನು ತರಾತುರಿಯಲ್ಲಿ ಮುಗಿಸಿ ಒಂದೇ ಉಸಿರಿನಲ್ಲಿ ಶರಣರನ್ನು ಚಿತ್ರದುರ್ಗದಿಂದ ಬೆಂಗಳೂರಿಗೆ ಹಾರಿಸಿಕೊಂಡು ಬಂದ ರೇವತಿ ಪೇಪರ್‌ಗೆ ಸೈನ್ ಹಾಕಿಸಿ ಅದೇ ಹೆಲಿಕಾಪ್ಟರ್‌ನಲ್ಲಿ ಸಂಜೆವೇಳೆಗೆ ದುರ್ಗಕ್ಕೆ ಕರೆತಂದು ಎಂದಿನ ಕಾರ್ಯಕ್ರಮಗಳಲ್ಲಿ ತಲ್ಲೀನಳಾಗಿಸಿದ್ದಳು.

ಅಷ್ಟಕ್ಕೂ ಈ ರೇವತಿಯದ್ದೇ ಒಂದು ರೋಚಕ ವೃತ್ತಾಂತವಿದೆ. ಬಸವರಾಜನ್ ಮಠದ ಆವರಣದಿಂದ ತೊಲಗಿದ ಸಮಯದಿಂದಲೂ ಆ ಸ್ಥಾನಕ್ಕೆ ಹಂತಹಂತವಾಗಿ ಏರುತ್ತಾ ಬಂದವಳು ಈಕೆ. ಅದೇ ಮಹತ್ವಾಕಾಂಕ್ಷೆಯಿಂದ ಮಠವನ್ನು ಸಾಲದ ಸುಳಿಯಿಂದ ಮೇಲೆತ್ತಲು ಸರ್ಕಾರದ ಮಟ್ಟದಲ್ಲಿ ಓಡಾಡಿದ್ದಳು. ಇಂತಹ ರೇವತಿ ಶರಣರಿಗೂ ಬಲು 'ಆಪ್ತೆ'ಯೇ ಆಗಿದ್ದಂತವಳು. ಆದರೆ 2013ರ ಏಪ್ರಿಲ್‌ನಲ್ಲಿ ಅದೇನು ನಡೆಯಿತೊ ಬೆಂಗಳೂರಿನ ಸಂಜಯನಗರ ಪೊಲೀಸ್ ಠಾಣೆಯಲ್ಲಿ ಮುರುಘಾ ಶರಣರ ವಿರುದ್ಧ ಹಲ್ಲೆ ದೂರು ನೀಡಿದ್ದಳು. ಆಗ ಮಠವೇ ನಡುಗಿ ಶರಣರ ನೆರವಿಗೆ ಯಡ್ಡಿ, ಶಂಕರ್ ಬಿದರಿ ಧಾವಿಸಿ ಬಂದಿದ್ದರು. ಅವರಿಬ್ಬರ ಮಧ್ಯಸ್ಥಿಕೆಯ ಪರಿಣಾಮವಾಗಿ ರೇವತಿಗೆ ಮಠದ ಸಿಇಒ (ಚೀಫ್ ಎಕ್ಸಿಕ್ಯೂಟಿವ್ ಆಫೀಸರ್) ಪಟ್ಟ ನೀಡಬೇಕು ಅದಕ್ಕೆ ಪ್ರತಿಯಾಗಿ ಆಕೆ ಶರಣರ ಮೇಲಿನ ಕೇಸ್ ವಾಪಾಸ್ ಪಡೆಯಬೇಕೆಂಬ ಒಪ್ಪಂದ ಏರ್ಪಟ್ಟಿತ್ತು. ಅದರ ಪರಿಣಾಮವಾಗೇ ಆಕೆ ದಿಢೀರ್ ಸಿಇಒ ಆದದ್ದು.

ರೇವತಿಯ ರೀ-ಎಂಟ್ರಿಯ ನಂತರ ಮಠದ ಭಾಗವಾದಳು. ಇದಕ್ಕೂ ಮುನ್ನ ಅಟ್ಟೇಹಾರಿಯಂತಿದ್ದ ರೇವತಿ ಇವತ್ತು ಬೆಂಗಳೂರಿನ ದುಬಾರಿ ಏರಿಯಾ ಡಾಲರ್ಸ್ ಕಾಲೋನಿಯಲ್ಲಿ ಸ್ವಂತ ಬಂಗಲೆಗೆ ಒಡತಿಯಾಗುತ್ತಾಳೆಂದರೆ, ಶರಣರು ಬೆಂಗಳೂರಿಗೆ ದಯಮಾಡಿದಾಗಲೆಲ್ಲ ಆ ಬಂಗಲೆಗೆ ಭೇಟಿ ಕೊಡುತ್ತಾರೆಂದರೆ ರೇವತಿ ನಕ್ಷತ್ರದ ಮಹಿಮೆಯನ್ನು ಓದುಗರು ಗ್ರಹಿಸಬಹುದು.

• ಟಿ.ಎನ್.ಷಣ್ಮುಖ





ಸೊರಗಿದ ಬಿಗ್‌ಬಾಸ್, ಕಾಡುವ ರಮೇಶ್

ಝೀ ಕನ್ನಡ ವಾಹಿನಿಯಲ್ಲಿ ನಟ ರಮೇಶ್ ನಡೆಸಿಕೊಡುವ ವೀಕೆಂಡ್ ವಿತ್ ರಮೇಶ್ ಮತ್ತು ಈ ಟೀವಿಯಲ್ಲಿ ಕಾಮಿಡಿ ಗಣೇಶ್‌ನ ಸೂಪರ್ ಮಿನಿಟ್ಸ್ ಎಂಬೆರಡು ಕಾರ್ಯಕ್ರಮಗಳು ಪರದೆಗೆ ಬರುತ್ತಿದ್ದಂತೆಯೇ ಜನ ಸುವರ್ಣ ಟೀವಿಯನ್ನು ಬದಲಾಯಿಸುತ್ತಾರೆ. 'ಬಿಗ್‌ಬಾಸ್' ಸೀಝನ್-2 ಕತೆ ಮುಗಿದುಹೋಗಿದೆ!

ಸುದೀಪ್‌ನ ವರ್ಚಸ್ಸು, ಕೋಟಿ ಕೋಟಿಯ ಜಾಹಿರಾತು, ಕರ್ನಾಟಕದ ಉದ್ದಗಲಕ್ಕೂ ಫ್ಲೆಕ್ಸ್ ಹೋರ್ಡಿಂಗ್ಸ್, ವಾರಕ್ಕೊಂದು ಸಿನಿಮಾ ಮುಖ, ಹಗಲಿರುಳೆನ್ನದೆ ಪುನರಪಿ ಪ್ರಸಾರ, ಏನೆಲ್ಲಾ ಗಿಮ್ಮಿಕ್ಕು; ಇತ್ಯಾದಿಗಳ್ಯಾವುದು ಬಿಗ್‌ಬಾಸ್ ಎಂಬ ಬಿಗ್ ಬಜೆಟ್ ರಿಯಾಲಿಟಿಯನ್ನು ಗೆಲ್ಲಿಸುತ್ತಿಲ್ಲ, ನೋಡಿದ್ದೇ ನೋಡಿದಂತೆ, ಮಾಡಿದ್ದೇ ಮಾಡಿದಂತೆ, ಅದೇ ಯಥಾವತ್ತು ವರಸೆಗಳು, ಅದೇ ಹಳೇ ಮುಖಗಳು, ಹೊಸತೆಂಬುದೇ ಇಲ್ಲವಾದ ಮೇಲೆ ಜನ ತಾನೇ ಎಷ್ಟು ಅಂತ ನೋಡುತ್ತಾರೆ? ಯಾಕೆ ನೋಡುತ್ತಾರೆ?

ಕಳೆದೊಂದು ತಿಂಗಳಿನಿಂದ ಮಿಕ್ಕೆಲ್ಲ ಕಾರ್ಯಕ್ರಮಗಳನ್ನೂ ಮೀರಿ ಎತ್ತರಕ್ಕೇರಿದ್ದ ಬಿಗ್‌ಬಾಸ್‌ನ ಟಿಆರ್‌ಪಿ ಇದ್ದಕ್ಕಿದ್ದಂತೆ ಹಳ್ಳ ಹಿಡಿಯುತ್ತಿದೆ. ಕೋಟಿ ಕೋಟಿ ಸುರಿದು ಸುದೀಪ್ ಬಿಗ್‌ಬಾಸ್- ಸೀಝನ್ 2 ಆರಂಭಿಸಿದ ಸುವರ್ಣ ವಾಹಿನಿಯ ಮಾಲೀಕರ ಲೆಕ್ಕಾಚಾರವೆಲ್ಲ ತಲೆಕೆಳಗಾಗಿದೆ. ಝೀ ಕನ್ನಡ ಟೀವಿಯಲ್ಲಿ ನಟ ರಮೇಶ್ ನಡೆಸಿಕೊಡುವ ವೀಕೆಂಡ್ ವಿತ್ ರಮೇಶ್ ಮತ್ತು ಈ ಟೀವಿಯಲ್ಲಿ ಕಾಮಿಡಿ ಗಣೇಶ್‌ನ ಸೂಪರ್ ಮಿನಿಟ್ಸ್ ಕಾರ್ಯಕ್ರಮಗಳ ಮುಂದೆ ಬಿಗ್‌ಬಾಸ್ ಪೇಲವ ನಗೆ ಬೀರುತ್ತಿದೆ.

ಅದೇ ನಾರಿ!

ಬಿಗ್‌ಬಾಸ್-ಸೀಯನ್ 2 ನ ವಿನ್ನರ್ ಯಾರಾಗಬಹುದೆಂಬ ಬಗ್ಗೆಯಾಗಲಿ, ಯಾರು ಈ ವಾರ ಹೊರಬೀಳುತ್ತಾರೆಂಬ ಕುರಿತಾಗಲಿ, ಮುಂದೆ ಯಾರು ಒಳಬರುತ್ತಾರೆಂಬ ಬಗ್ಗೆಯಾಗಲಿ; ಯಾರಿಗೂ ಕುತೂಹಲ ಉಳಿದಿಲ್ಲ, ಬಿಗ್‌ಬಾಸ್ ಮನೆಯ ಯಾವ ಸೆಲಿಬ್ರಿಟಿಯೂ ಪ್ರೇಕ್ಷಕರನ್ನು ಕಾಡುವುದಿಲ್ಲ, ಅಲ್ಲಿನ ಯಾವ ಟಾಸ್ಕ್ ಕೂಡ ಮನಮುಟ್ಟುವುದಿಲ್ಲ, ಅದೇ ಸುದೀಪ್‌ನ ಮಾಮೂಲಿ ಶೈಲಿ. ವಾರಕ್ಕೊಮ್ಮೆ ಬರುವ ಸಿನಿಮಾ ಅತಿಥಿಗಳು, ಅದೇ ನೀತು, ಅದೇ ದೀಪಿಕಾ ಕಾಮಯ್ಯ ಅದೇ ಸೃಜನ್ ಲೋಕೇಶ್‌ನ ಯಥಾವತ್ತು ಮಜಾಕು, ಅನುಪಮಾ ಭಟ್ ಎಂಬ ಅದೇ ಪೋರಿ, ಸಂತೋಷ್ ಎಂಬ ಹಳೇ ಹೋರಿ, ನಡುವೆ ಶ್ವೇತಾ ಚೆಂಗಪ್ಪ ಎಂಬ ಮದನಾರಿ...!

ಇದು ಬಿಟ್ಟರೆ ನೋಡುವಂಥ ಬೇರೆ ಏನಾದರೂ ಬಿಗ್‌ಬಾಸ್‌ನಲ್ಲಿದೆಯೆ? ಬಿಗ್‌ಬಾಸ್ ಸೀಝನ್-1 ಅಷ್ಟೆಲ್ಲಾ ವಿವಾದಗಳ ನಡುವೆಯೂ ಜನರ ಮನಸ್ಸು ಗೆದ್ದಿತ್ತು, ಅದರಲ್ಲಿ ಪಕ್ಕಾ ಜೋಕರ್‌ಗಳಾಗಿ ಬ್ರಹ್ಮಾಂಡ ಪಿಂಡ ಮತ್ತು ಕಾಳಿಸ್ವಾಮಿಯಂಥ ಕೋಡಂಗಿಗಳಿದ್ದರು. ನರ್ಸ್ ಜಯಲಕ್ಷ್ಮಿಯಂಥ ಬೆಂಕಿಯುಂಡೆಯನ್ನೂ ಕಾಣಬಹುದಿತ್ತು, ಚಂದ್ರಿಕಾ ಮೈಮಾಟ, ಅರುಣ್‌ಸಾಗರ್ ಪ್ರತಿಭೆ, ನಿಖಿತಾ ತುಕ್ರಲ್ ಎಂಬ ಚೆಂದುಳ್ಳಿ ಚೆಲುವೆ, ವಿಜಯ್ ರಾಘವೇಂದ್ರನಂಥ ಸ್ಟಾರ್; ಹೀಗೆ ಭಿನ್ನವಿಭಿನ್ನ ವ್ಯಕ್ತಿತ್ವಗಳ ಘರ್ಷಣೆಯಿಂದಾಗಿಯೇ ಸೀಝನ್-1 ಟೀವಿ ಪ್ರೇಕ್ಷಕರನ್ನು ಹಿಡಿದಿಟ್ಟಿತ್ತು, ರಾಘವೇಂದ್ರ ಹುಣಸೂರು ಎಂಬ ಪ್ರತಿಭಾವಂತನ ಕೈಚಳಕದಿಂದಾಗಿಯೇ ಬ್ರಹ್ಮಾಂಡ ಗುರೂಜಿ, ಚಂದ್ರಿಕಾ, ಅರುಣ್‌ಸಾಗರ್ ಮುಂತಾದವರೆಲ್ಲ ಎಷ್ಟೋ ದಿನಗಳಾದರೂ ಜನ ಮರೆಯದ ಪಾತ್ರಗಳಾಗಿಯೇ ಉಳಿದುಬಿಟ್ಟರು.

ಆದರೆ ಸೀಝನ್-2 ಹುಟ್ಟಿಸಿದ ನಿರೀಕ್ಷೆಯಾದರೂ ಎಂಥಾದ್ದು, ಬ್ರಹ್ಮಾಂಡ ಗುರೂಜಿಗೆ ಬದಲಾಗಿ ಈ ಬಾರಿ ಚಳವಳಿ ನಾಯಕ ವಾಟಾಳ್ ನಾಗರಾಜ್ ಇರುತ್ತಾರೆಂಬ ನಿರೀಕ್ಷೆ ಹುಸಿಯಾಯಿತು. 'ಮಾಜಿ' ಡಾನ್ ಮುತ್ತಪ್ಪ ರೈ ಕಾಣಿಸಿಕೊಳ್ಳುವುದೂ ಸುಳ್ಳಾಯಿತು. ರಾಧಿಕಾ ಕುಮಾರಸ್ವಾಮಿ ಬರುವುದು ಹೆಚ್ಚೂಕಮ್ಮಿ ನಿಕ್ಕಿಯಾಗಿತ್ತು, ನಟಿ ಶ್ರುತಿ ಕೊನೇತನಕ ಬಂದೇಬರುತ್ತಾರೆಂಬಂತೆ ಪುಕಾರಿತ್ತು, ಶಿವರಾಜ್‌ಕುಮಾರ್, ಶರಣ್, ಬಿಜೆಪಿಯ ಕಮಂಗಿ ರೇಣುಕಾಚಾರ್ಯ, ರಮ್ಯಾ; ಹೀಗೆ ಏನೆಲ್ಲಾ ವಿಶಿಷ್ಟ ವಿಲಕ್ಷಣ ಸೆಲಿಬ್ರಿಟಿಗಳನ್ನು ಜನ ನಿರೀಕ್ಷಿಸಿದ್ದರೋ ಅಂಥ ಯಾವುದೇ ವ್ಯಕ್ತಿತ್ವವೂ ಈ ಬಾರಿ ಕಾಣಿಸಲಿಲ್ಲ, ಅಷ್ಟಕ್ಕೂ ನಟ ಜಗ್ಗೇಶ್ ಎಂಥಾ ತಿರುಗೇಟು ಕೊಟ್ಟರೆಂದರೆ; "ನಾವೇ ಕಾಗೆ ಹಾರಿಸೋರು; ಅದನ್ನು ಬಿಟ್ಟು ನಾವೇ ಕಾಗೆಗಳಾಗೋದು ಎಲ್ಲಾದರೂ ಉಂಟೆ...?" ಎಂದದ್ದು ಇಡೀ ಬಿಗ್‌ಬಾಸ್‌ನ ಸೃಷ್ಟಿಕರ್ತರಿಗೇ ಮರ್ಮಕ್ಕೆ ಪೆಟ್ಟುಕೊಟ್ಟಂತಿತ್ತು.

ನಿರುದ್ಯೋಗಿಗಳ ಹಿಂಡು

ಇಷ್ಟಾದ ಮೇಲಾದರೂ ಎಂಡೆಮಾಲ್ ಏಜೆಂಟರು ಬುದ್ಧಿ ಕಲಿಯಬೇಕಿತ್ತಲ್ಲವೆ? ಕನಿಷ್ಠ ಸುವರ್ಣ ವಾಹಿನಿಯವರಿಗಾದರೂ ತಲೆ ಓಡಬೇಕಿತ್ತು, ಆಯ್ಕೆಯಾದವರಾದರೂ ಎಂಥವರು? ಮದುವೆಯಾಗುತ್ತೇನೆಂದು ಹುಡುಗಿಗೆ



ವೀಕೆಂಡ್ ವಿತ್ ರಮೇಶ್ ಮನಮುಟ್ಟುವುದು ಏಕೆ?

ಯಾವ ಶನಿವಾರ ಮತ್ತು ಭಾನುವಾರ ರಾತ್ರಿ ಬಿಗ್‌ಬಾಸ್‌ನಲ್ಲಿ ಸುದೀಪ್ ಷೋ ರಂಗೇರುತ್ತೋ ಅದೇ ಹೊತ್ತಿಗೆ 'ಝೀ ಕನ್ನಡ' ವಾಹಿನಿಯಲ್ಲಿ ಮೂಡುವುದು ವೀಕೆಂಡ್ ವಿತ್ ರಮೇಶ್. ನಟ ರಮೇಶ್ ಅರವಿಂದ್ ನಡೆಸಿ ಕೊಡುವ ಈ ಕಾರ್ಯಕ್ರಮದ ತಿರುಳೇ ವಾಲ್ ಆಫ್ ಫೇಮ್. ಅಂದರೆ ಖ್ಯಾತ ವ್ಯಕ್ತಿಗಳ ಜೀವನಗಾಥೆ. ಇಂಥ ಕಾರ್ಯಕ್ರಮಗಳು ಈತನಕ ಲೆಕ್ಕವಿಲ್ಲದಷ್ಟು ಚಾನಲ್‌ಗಳಲ್ಲಿ ಬಂದಾಗಿದೆ. ಜನಕ್ಕೆ ಈ ಬಗ್ಗೆ ವಿಶೇಷ ಕುತೂಹಲಗಳಿಲ್ಲ ನಿಜ.

ಆದರೆ ವೀಕೆಂಡ್ ವಿತ್ ರಮೇಶ್ ಹಾಗಲ್ಲ, ಯಾರೋ ಖ್ಯಾತ ನಟನೊಬ್ಬನನ್ನು ಕರೆಸಿ ಆತನಿಗೇ ಗೊತ್ತಿಲ್ಲದ ಆತನ ಬದುಕಿನ ಪುಟಗಳನ್ನು ತೆರೆದಿಡುವುದು. ಪುನೀತ್ ಬಗ್ಗೆ ಜನಕ್ಕೆ ಗೊತ್ತಿಲ್ಲದ ಸಂಗತಿಗಳಿಲ್ಲ ನಿಜ. ಆದರೆ ಮದ್ರಾಸಿನ ಆಸ್ಪತ್ರೆಯೊಂದರಲ್ಲಿ ತಾಯಿ ಪಾರ್ವತಮ್ಮ ಮಗುವಿಗೆ ಜನ್ಮ ಕೊಟ್ಟಿದ್ದಾಗಲಿ, ಪುನೀತ್ ಹೆರಿಗೆಯ ಹೊತ್ತಿಗೆ ಅಪ್ಪ ರಾಜ್ ಯಾವುದೋ ಚಿತ್ರದ ಶೂಟಿಂಗ್‌ನಲ್ಲಿ ಬಿಜಿಯಾಗಿದ್ದಾಗಲಿ, ಪಾರ್ವತಮ್ಮನವರನ್ನು ಆ ಹೊತ್ತಿಗೆ ಆರೈಕೆ ಮಾಡಿದ್ದೇ ನಿರ್ದೇಶಕ ಭಗವಾನ್ ಮತ್ತವರ ಪತ್ನಿ ಎಂಬುದಾಗಲಿ ಯಾರಿಗೆ ಗೊತ್ತಿರುತ್ತೆ?

ನಟ ರಮೇಶ್ ಕಟ್ಟಿಕೊಡುವ ವಿಷಾದವೇ ಅಂಥಾದ್ದು, ರವಿಚಂದ್ರನ್ ಯಾವತ್ತಿಗೂ ತನ್ನ ಪತ್ನಿಯನ್ನು ಜೊತೆ ಕರೆತಂದವರಲ್ಲ, ಆದರೆ ರಮೇಶ್ ಮಾತಿಗೆ ಬೆಲೆ ಕೊಟ್ಟು ತನ್ನ ಪತ್ನಿ ಈ ಕಾರ್ಯಕ್ರಮಕ್ಕೆ ಬಂದಿದ್ದಾರೆಂದಾಗ ಎಂಥವರಿಗೂ ಖುಷಿನಿಸುತ್ತದೆ. ತನ್ನ ಬದುಕಲ್ಲಿ ಪತ್ನಿ ಮತ್ತು ಮಕ್ಕಳನ್ನು ತಾನು ಅಷ್ಟು ಚೆನ್ನಾಗಿಡಲಿಕ್ಕಾಗಲಿಲ್ಲ ಎಂದು ಟೀವಿ ಕ್ಯಾಮೆರಾಗಳೆದುರು ರವಿಚಂದ್ರನ್ ಆತ್ಮನಿವೇದನೆ ಮಾಡಿಕೊಂಡಿದ್ದಕ್ಕೆ ಅವರ ಪತ್ನಿ ಕಣ್ಣೀರಿಡುತ್ತಾರೆ. ನಟ ಉಪೇಂದ್ರ ತನ್ನ ತಂದೆ ಮಕ್ಕಳಾದ ತಮ್ಮನ್ನು ಸಾಕಲು ಪಟ್ಟಪಾಡು ಹೇಳಿಕೊಂಡದ್ದು, ಒಪ್ಪೊತ್ತು ಊಟಕ್ಕಾಗಿ ತಾನು ಹೆಣಗಾಡಿದ್ದು, ಯಾವುದೋ ದೇವಸ್ಥಾನದ ಪ್ರಸಾದಕ್ಕಾಗಿ ಪರದಾಡಿದ್ದು ಹೇಳಿಕೊಂಡಾಗಲೂ ಅವರಿಗರಿವಿಲ್ಲದೆಯೇ ಕಣ್ಣುಗಳು ನೀರಾಗುತ್ತವೆ.

ಪತ್ನಿ ಪ್ರಿಯಾಂಕಾ ಜೊತೆಗಿನ ತನ್ನ ಸಂಬಂಧದ ಬಗ್ಗೆಯೂ ಅಷ್ಟೆ. ಈ ಕುರಿತ ಎಲ್ಲಾ ಗಾಸಿಪ್‌ಗಳಿಗೂ ಉಪ್ಪಿ ಮನಬಿಚ್ಚಿ ಉತ್ತರ ಕೊಡುತ್ತಾರೆ. ತನ್ನೊಳಗಿದ್ದ ನಾನು ಎಂಬ ದುರಹಂಕಾರಿ ರಾಕ್ಷಸನನ್ನು ಸಂಹರಿಸಲೆಂದೇ ಕಾಳಿಕಾಮಾತೆಯಾಗಿ ಬಂಗಾಳದಿಂದ ಬಂದವಳೇ ಪತ್ನಿ ಪ್ರಿಯಾಂಕಾ ಎಂಬ ಉಪ್ಪಿಯ ಆತ್ಮವಿಮರ್ಶೆ ವೀಕ್ಷಕನನ್ನು ಕಾಡುತ್ತದೆ.

ನಟ ಅರ್ಜುನ್ ಸರ್ಜಾ ದಿವಾಳಿಯಾದದ್ದು, ಅಂಥಾ ದುರ್ಗತಿಯಲ್ಲಿ ಅವರ ತಾಯಿ ಮತ್ತು ಪತ್ನಿ ಆಶಾರಾಣಿ ತಮ್ಮೆಲ್ಲಾ ಆಸ್ತಿ ಮಾರಿ ಧೈರ್ಯ ತುಂಬಿದ್ದು, ಆ ದುಡ್ಡಲ್ಲೇ ಸರ್ಜಾ ಮತ್ತೆ ಎದ್ದು ನಿಂತದ್ದು, ಅದನ್ನೆಲ್ಲ ನೆನೆದು ಕಣ್ಣೀರುಗರೆದದ್ದು, ಪಬ್ಲಿಕ್ ಟೀವಿಯ ಹೆಡ್ ರಂಗನಾಥ್‌ರ ಮತ್ತೊಂದು ಮುಖವನ್ನು ರಮೇಶ್ ತೆರೆದಿಟ್ಟದ್ದು, ಕೇವಲ ಸಿನಿಮಾ ನಟರಷ್ಟೇ ಅಲ್ಲದೆ ವಿವಿಧ ಕ್ಷೇತ್ರಗಳ ಸಾಧಕರನ್ನೂ ಕರೆಸಿ ರಮೇಶ್ ನಡೆಸಿಕೊಡುವ ಕಾರ್ಯಕ್ರಮ ನಿಜಕ್ಕೂ ಇತ್ತೀಚಿನ ದಿನಗಳಲ್ಲಿ ಬಂದ ವಿಶಿಷ್ಟ ಕಾರ್ಯಕ್ರಮವೆ.

ಅತಿಥಿಗೇ ಗೊತ್ತಿಲ್ಲದಂತೆ ಆತನ ಬದುಕಿನ ಅಜ್ಞಾತ ಸಂಗತಿಗಳನ್ನು ತೆರೆದಿಡುವುದು, ಈ ಬಗ್ಗೆ ಸಂಬಂಧಪಟ್ಟವರನ್ನೇ ವೇದಿಕೆಗೆ ಕರೆತರುವುದು ಎಲ್ಲೋ ಅಡಗಿದ್ದ ವೀಡಿಯೋ, ಫೋಟೋ, ದಾಖಲೆಗಳನ್ನು ಸಂಗ್ರಹಿ... ವೀಕ್ಷಕರೆದುರು ಬಿಚ್ಚಿಡುವುದು ನಿಜಕ್ಕೂ ಕುತೂಹಲಕಾರಿಯೇ. ಆಪ್ತವೆನಿಸು... ರಮೇಶ್ ವ್ಯಕ್ತಿತ್ವದ ಜೊತೆಗೇ ಅವರು ನಡೆಸಿಕೊಡುವ ರೀತಿ, ಸೌಜನ್ಯ ವಿಷಯ ಸಂಗ್ರಹಗಳೆಲ್ಲವೂ ವೀಕ್ಷಕನ ಮನ ಮುಟ್ಟುತ್ತದೆ ಮತ್ತು ವಿಷಾದ... ಮೋಡ ಕವಿಸುತ್ತದೆ.

ಈ ಹಿಂದೆ ಬೇರೆಬೇರೆ ಭಾಷೆಗಳ ಚಾನಲ್ಲುಗಳಲ್ಲಿ ಇಂಥದ್ದು ಷೋಗಳಿದ್ದವಾದರೂ ಕನ್ನಡದ ಮಟ್ಟಿಗೆ ಇದು ಫ್ರೆಷ್ ಆಗಿ ಕಾಣುವುದು ರಾಘವೇಂದ್ರ ಹುಣಸೂರರ ತಲೆಗಾರಿಕೆ ಮತ್ತು ಶ್ರಮದಿಂದಾಗಿ. ಬಿಗ್‌ಬಾಸ್ ಸೀಝನ್-1 ರ ರೂವಾರಿಯಾಗಿದ್ದ ರಾಘವೇಂದ್ರ ಹುಣಸೂರು ಇಲ್ಲೂ ಅದೇ ವೈಶಿಷ್ಟ್ಯತೆಯನ್ನು ಮೆರೆಯುತ್ತಾರೆ. ಕಾರ್ಯಕ್ರಮದ ರೂಪುರೇಷೆಯಿಂ... ಹಿಡಿದು ವಿಷಯದ ಆಯ್ಕೆಯಲ್ಲೂ ಅವರ ಪರಿಶ್ರಮ ಎದ್ದು ಕಾಣುತ್ತ... ಬಿಗ್‌ಬಾಸ್‌ನ ಯಥಾವತ್ತು ಪಾತ್ರಗಳ ತಥಾಕಥಿತ ವರಸೆಗಳನ್ನು ನೋ... ಬೇಸತ್ತ ಟೀವಿ ವೀಕ್ಷಕರಿಗೆ ನಟ ರಮೇಶ್ ಅರವಿಂದ್ ಬೇರೆಯದ... ಲೋಕವೊಂದನ್ನು ತೆರೆದಿಡುವ ರೀತಿಯೇ ಆಪ್ತವಾಗಿದೆಯಾದ್ದರಿಂ... ಟಿಆರ್‌ಪಿಯಲ್ಲಿ ಸಹಜವಾಗೇ ವೀಕೆಂಡ್ ಬಿಗ್‌ಬಾಸ್ ಅನ್ನು ಹಿಂದಿಕ್ಕಿದೆ.

ಮಿಕ್ಕಂತೆ ಟೀವಿ ವೀಕ್ಷಕರನ್ನು ರಂಜಿಸುವ ಮತ್ತೊಂದು ಕಾರ್ಯಕ್ರಮವೆಂದ... ಅದು ಗಣೇಶ್ ನಡೆಸಿಕೊಡುವ ಸೂಪರ್ ಮಿನಿಟ್ಸ್. ಇವೆರಡನ್ನೂ ನೋಡಿಯಾದರೂ ಬಿಗ್‌ಬಾಸ್ ಪಾಠ ಕಲಿಯುತ್ತಿಲ್ಲ ಎಂದರೆ ಅದು ಯಾರ ತಪ್ಪು?

ಬಿಗ್‌ಬಾಸ್ ಮನೆಯಲ್ಲಿ ಕನ್ನಡಿಗರೂ ಇಲ್ಲ, ಮನುಷ್ಯರೂ ಅಲ್ಲ!

ಸದ್ಯದ ಬಿಗ್‌ಬಾಸ್ ಷೋ ಅನ್ನು ಯಾರಾದರೂ ಕನ್ನಡದ ಕಾರ್ಯಕ್ರಮವೆಂದು ಭಾವಿಸಿಕೊಂಡರೆ ಅವರಿಗಿಂತ ಮೂರ್ಖ ರಿಲ್ಲ!


ದೀಪಿಕಾ ಕಾಮಯ್ಯ


ಸುಧೀಂದ್ರ ಕಂಚಿ ತೋಟ

ಕನ್ನಡ ಮಾತಾಡುವುದನ್ನು ತನ್ನ ಪ್ರತಿ ಎಪಿಸೋಡಿನಲ್ಲೂ ಸುದೀಪ್ ಪದೇಪದೇ ಎಚ್ಚರಿಸುವುದು, ಕನ್ನಡ ಸರಿಯಾಗಿ ಮಾತಾಡಿಲ್ಲ ಎಂದು ಸಂತೋಷ್‌ಗೆ ಬಿಗ್‌ಬಾಸ್ ವಿಶೇಷ ಶಿಕ್ಷೆ ನೀಡಿದ್ದು, ದೀಪಿಕಾ ಕಾಮಯ್ಯಗೆ ಕನ್ನಡ ಕಲಿಸಲೆಂದೇ ಡೈರೆಕ್ಟರ್ ಗುರುಪ್ರಸಾದ್‌ಗೆ ವಿಶೇಷ ಜವಾಬ್ದಾರಿ ವಹಿಸಿದ್ದು, ನೆಟ್ಟಗೆ ಕನ್ನಡ ಮಾತಾಡುವಂತೆ ಖುದ್ದು ಬಿಗ್‌ಬಾಸ್ ಲೆಕ್ಕವಿಲ್ಲದಷ್ಟು ಎಚ್ಚರಿಕೆ ನೀಡುವುದು, ಇದೆಲ್ಲ ಏನನ್ನು ಸೂಚಿಸುತ್ತದೆ?

ವಿಕಟ ಹೇಗಿದೆಯೆಂದರೆ ಯಾರೆಷ್ಟೇ ಭೊಬ್ಬೆಯಿಟ್ಟರೂ ಬಿಂಕದ ನಾರಿ ದೀಪಿಕಾ ಕಾಮಯ್ಯಳ ಬಾಯಲ್ಲಿ ಕ್ರಿಯಾಪದ ಬಿಟ್ಟರೆ ಅಪ್ಪಿತಪ್ಪಿಯೂ ಕನ್ನಡ ಬರುವುದಿಲ್ಲ, ತನ್ನನ್ನು ಕನ್ನಡ ಶಿಕ್ಷಕಿಯ ಮಗಳು ಎಂದು ನಾಚಿಕೆಯಿಲ್ಲದೆ ಹೇಳಿಕೊಳ್ಳುವ ದೀಪಿಕಾಗೆ ಕನ್ನಡವೇ ಗೊತ್ತಿಲ್ಲ, ತಿಂಗಳೊಂದಕ್ಕೆ ತನ್ನ ಕಾಸ್ಮೆಟಿಕ್ಸ್, ಬ್ಯೂಟಿ ಪಾರ್ಲರ್, ಹೆಲ್ತ್‌ಸ್ಪಾ, ನ್ಯೂಟ್ರಿಷನ್ ಇತ್ಯಾದಿಗೆಂದೇ ಒಂದೂವರೆ ಲಕ್ಷ ರೂಪಾಯಿ ಖರ್ಚಾಗುತ್ತದೆ ಎನ್ನುವ ದೀಪಿಕಾಗೆ ತಾನು ಆಕೆಯ ಬಾಯ್‌ಫ್ರೆಂಡ್ ಆಗದೇ ಇರುವುದೇ ಪುಣ್ಯ ಎಂದು ಸೃಜನ್ ಕೆಣಕುವುದಾಗಲಿ, ಸೌಂದರ್ಯ ಮತ್ತು ತೋರಿಕೆಗೆಂದೇ ಈ ಪಾಟಿ ಖರ್ಚು ಮಾಡುವ ನಿನಗೆ ಮನುಷ್ಯತ್ವವೇ ಇಲ್ಲವಾ? ಎಂದು ಕಿಚಾಯಿಸಿದ್ದಾಗಲಿ ಮನ ತಟ್ಟುವುದೇ ಇಲ್ಲ.

ವಿಪರ್ಯಾಸವೆಂದರೆ ಅನುಪಮಾ ಭಟ್, ಗುರುಪ್ರಸಾದ್, ಬುಲೆಟ್ ಪ್ರಕಾಶ್ ಮತ್ತು ಸೃಜನ್ ಲೋಕೇಶ್ ಹೊರತಾಗಿ ಬೇರೆ ಯಾವ ಬಿಗ್‌ಬಾಸ್ ಸ್ಪರ್ಧಿಯೂ ಕನ್ನಡಿಗರಲ್ಲ, ನೆಟ್ಟಗೆ ಕನ್ನಡ ಗೊತ್ತಿಲ್ಲ, ಸಂತೋಷ್ ಮತ್ತು ಆದಿ ಲೋಕೇಶ್ ಮೂಲತಃ ಮಲೆಯಾಳಿಗಳಾದರೆ, ಅಕುಲ್ ಬಾಲಾಜಿ, ರೋಹಿತ್ ಮನೆ ಭಾಷೆ ತೆಲುಗು, ಓದಿದ್ದು ಕಾನ್ವೆಂಟು. ಲಯೇಂದ್ರರ ಬಾಯಿಂದ ಕನ್ನಡ ಹೊರಬಿದ್ದರೆ ಅದು ಸ್ಲಮ್ಮಿನ ತಮಿಳಿನಂತಿರುತ್ತದೆ. ಮಯೂರ್ ಪಟೇಲ್, ಶ್ವೇತಾ ಚಂಗಪ್ಪರಿಗೆ ಕನ್ನಡ ಗೊತ್ತಿದ್ದರೂ ಇಂಗ್ಲಿಷ್‌ನಲ್ಲಿ ಮಾತಾಡುವುದೇ ಹೆಚ್ಚು ಪ್ರೀತಿ. ಮಾತಿನಲ್ಲಾಗಲಿ, ವರ್ತನೆಯಲ್ಲಾಗಲಿ, ವ್ಯಕ್ತಿತ್ವದಿಂದಾಗಲಿ ಬಿಗ್‌ಬಾಸ್ ಮನೆಯವರು ಕನ್ನಡಿಗರಾಗಿ ಕಾಣುವುದಿರಲಿ ಕನಿಷ್ಠ ಮನುಷ್ಯರಾಗಿಯೂ ಕಾಣದೇ ಇರುವುದೇ ಅದು ಜನರನ್ನು ತಲುಪದೇ ಇರುವುದಕ್ಕೆ ಮುಖ್ಯ ಕಾರಣಗಳಲ್ಲೊಂದು.



ವಿವಾದದಲ್ಲೇ ಸುದ್ದಿಯಾಗಿ ತನ್ನ ಸಿನಿಮಾ ಹಾಳು ಮಾಡಿಕೊಂಡು ನಿರುದ್ಯೋಗಿಯಾಗಿದ್ದ ...ೇಶ್, ಯಾವುದೋ ಹೆಸರಿಲ್ಲದ ಚಿತ್ರವೊಂದಕ್ಕೆ ಆಗಿದ್ದನೆಂದು ಹೇಳಿಕೊಳ್ಳುವ ಅನಾಮಿಕ ... ಅತ್ತ ಆರಕ್ಕೂ ಏರದೆ ಇತ್ತ ಮೂರಕ್ಕೂ ... ತನ್ನ ಅಸ್ತಿತ್ವಕ್ಕಾಗಿ ಹೆಣಗಾಡುವುದರಲ್ಲೇ ...ುವ ಸೃಜನ್ ಲೋಕೇಶ್, ಯಾವುದೋ ಟೀವಿ ...ಯಲ್ಲಿ ಪಾತ್ರ ವಹಿಸಿದ್ದಾಳೆಂದು ನಂಬಿಸಲ್ಪಟ್ಟ ...ಗಪ್ಪ, ದರ್ಶನ್‌ನ ಚಿಂಗಾರಿ ಎಂಬ ಏಕಮೇವಾ ...ತ್ರದ ಹೀರೋಯಿನ್ನಾಗಿದ್ದ ದೀಪಿಕಾ ಕಾಮಯ್ಯ ...ಕರ್ ಅನುಪಮಾ ಭಟ್ ಎಂಬ ಎಳಸು, ... ಜಾಕಿ ಎಂದುಕೊಂಡೇ ಎಂಟ್ರಿ ಪಡೆದ ...ಇನ್ನಾರೋ ಅನಿತಾ ಭಟ್- ಹೀಗೆ ಕೆಲಸವಿಲ್ಲದೆ, ...ಲ್ಲದೆ ಮೂಲೆಗುಂಪಾಗಿದ್ದ ಶೋಕಾಲ್ಡ್ ...ನ್ನೆಲ್ಲ ಹಿಡಿದುತಂದು ಬಿಗ್‌ಬಾಸ್ ಮನೆಯಲ್ಲಿ ...ಾಯ್ತು. ಇನ್ನು ಜೋಕರ್ ಪಟ್ಟಿಯಲ್ಲಿ ಪ್ರವೇಶ ...ಯೇಂದ್ರ ನೋಡಲಷ್ಟೇ ಕೋಡಂಗಿ ಬಿಟ್ಟರೆ ...ೈಕ ಐಡೆಂಟಿಟಿಯಿದ್ದದ್ದು ಸಾಧು ಕೋಕಿಲ ...ುದು ಮಾತ್ರ!

ಹೊರತಾಗಿ ಅಷ್ಟಿಷ್ಟು ಗಮನ ಸೆಳೆದ ... ಪಟೇಲ್ ಯಾವುದೋ ಕಾಲಕ್ಕೆ ಹೀರೋ ...ತ. ಸದ್ಯ ಚಲಾವಣೆಯಲ್ಲಿಲ್ಲದ ನಾಣ್ಯವೆ. ಹೇಳ ...ಸಿನಿಮಾದಲ್ಲಿ ಬೇಕಾಬಿಟ್ಟಿ ಹೀರೋಗಳಾಗಿಯೋ, ...ರಿಯಲ್ಲುಗಳಲ್ಲಿ ಅಷ್ಟಿಷ್ಟು ಮಿಂಚಿದರೆಂದೋ ... ಪಟ್ಟಿಗೆ ಸೇರಿದ್ದ ಬಿಗ್‌ಬಾಸ್ ಪಾತ್ರಧಾರಿಗಳ ...ಕ್ಕಿದ್ದ ಮತ್ತೊಂದು ಭಾವನೆಯೆಂದರೆ ಇವರೆಲ್ಲ ... ಸುದೀಪ್ ಮತ್ತು ದರ್ಶನ್ ಕೂಟದ ಸಕ್ರಿಯ ...ೀ. ರಾಜ್ ಫ್ಯಾಮಿಲಿ ವಿರುದ್ಧ ಕತ್ತಿ ಮಸೆಯಲು ...ಮತ್ತು ದರ್ಶನ್ ಸೇರಿಕೊಂಡು ಸ್ಥಾಪಿಸಿದ್ದ ಸಿನಿಮಾ ...ದ್ದಾರೆಂಬ ಒಂದೇ ಕಾರಣಕ್ಕೆ ಆದಿ, ಸೃಜನ್, ...ರ್, ಸಂತೋಷ್ ಇತ್ಯಾದಿಗಳನ್ನೆಲ್ಲ ಜನ ...ತ್ತಾರೆಂಬ ಗ್ಯಾರಂಟಿಯೇನು?

ಹೆಸರಷ್ಟೇ ಕಾಮಯ್ಯ!

...ಗಿ ಶುರುವಿನಲ್ಲೇ ಬಿಗ್‌ಬಾಸ್ ಬಗೆಗಿದ್ದ ನಿರೀಕ್ಷೆ ... ಮೊದಮೊದಲು ಸುದೀಪ್ ಕಾರಣಕ್ಕಾಗಿ ...ದ್ದ ಪ್ರೇಕ್ಷಕರಿಗೆ ನಾಲ್ಕನೇ ವಾರದ ಹೊತ್ತಿಗೆ ...ಹೊಡೆಯಲಾರಂಭಿಸಿತು. ಏನೂ ಮಾತಾಡದೆ, ...ವೈಶಿಷ್ಟ್ಯವೂ ಇಲ್ಲದೆ ಆಗಷ್ಟೇ ನಿದ್ದೆಯೆಂದೆದ್ದು ...ಂತೆ ಕಾಣುತ್ತಿದ್ದ ಆದಿ ಲೋಕೇಶ್ ಪಕ್ಕಾ ಡ್ರಗ್ ...ತೆ ಕಂಡುಬಂದರೆ ಬೀಜದ ಹೋರಿಯೆಂದೇ ...ಡೆದಿದ್ದ ಸಂತೋಷ್ ಕೀ ಕೊಟ್ಟ ಯಂತ್ರದಂತೆ ...ಿದ್ದ, ಮೂಳೆ ಚಕ್ಕಳ ಬಿಟ್ಟುಕೊಂಡು ಆದನ್ನೇ ...ಜ್ ಎಂದು ನಂಬಿಸಲು ಹೆಣಗಾಡುತ್ತಿದ್ದವಳು ...ಮಯ್ಯ, ಹೆಸರಷ್ಟೇ ಕಾಮಯ್ಯ ಎಂಬುದನ್ನು ...ಪಿಕಾ ನೋಡುವುದಕ್ಕೂ ಅನ್ಯಾಯ!

ಇಂಥಾದ್ದರಲ್ಲಿ ತನ್ನ ವಿಭಿನ್ನ ವ್ಯಕ್ತಿತ್ವ ಮತ್ತು ಭರಪೂರ ಗ್ಲಾಮರ್‌ನಿಂದಾಗಿ ಮಿಂಚಿದ್ದು ಶ್ವೇತಾ ಚಂಗಪ್ಪ ಮಾತ್ರ. ವೈಶಿಷ್ಟ್ಯ ಮತ್ತು ವ್ಯಕ್ತಿತ್ವದಿಂದಾಗಿ ಈಕೆಯಷ್ಟೇ ಗಮನ ಸೆಳೆಯುತ್ತಿದ್ದದ್ದು ಸೃಜನ ಲೋಕೇಶ್. ಆದರೆ ಬಿಗ್‌ಬಾಸ್ ಮೊದಲ ಆವೃತ್ತಿಯ ಸ್ಪರ್ಧಿಗಳಿಗೆ ಹೋಲಿಸಿದರೆ ಇವರ್‍ಯಾರೂ ಅವರ ಅರ್ಧಕ್ಕೂ ನಿಲ್ಲುತ್ತಿರಲಿಲ್ಲ, ಜೋಕರ್ ಲಯೇಂದ್ರ ಪೆದ್ದುಪೆದ್ದಾಗಿ ಆಡುವುದನ್ನೇ ಹಾಸ್ಯವೆಂದು ಪರಿಗಣಿಸಲು ಪ್ರೇಕ್ಷಕನಿಗಾಗಲಿಲ್ಲ, ಅನುಪಮಾ ಭಟ್ ಎಂಬ ಟೀವಿ ಪೋರಿಯನ್ನು ಯಾವ ಕಾರಣಕ್ಕೆ ಇಟ್ಟುಕೊಂಡಿದ್ದಾರೆಂಬುದೇ ಯಾರಿಗೂ ಅರ್ಥವಾಗಲಿಲ್ಲ, ಸಂತೋಷ್, ರೋಹಿತ್, ಆದಿ, ನೀತು ಯಾರೂ ವಿಶೇಷ ಗಮನ ಸೆಳೆಯಲಿಲ್ಲ, ಇದೆಲ್ಲವನ್ನೂ ನಿವಾರಿಸಲೆಂದೇ ಹರ್ಷಿಕಾ ಪೂಣಚ್ಚ ಎಂಬ ಗೊಂಬೆಯನ್ನು ಕರೆತಂದರೆ ಅದೂ ಬರಕತ್ತಾಗಲಿಲ್ಲ.

ಈ ಮಧ್ಯೆ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳಲೆಂದೇ ಶುರುವಾದದ್ದು ನೀತು-ಆದಿ ಪ್ರಣಯ ಪ್ರಸಂಗ! ಕ್ಯಾಮೆರಾಗಳಿವೆ ಎಂಬುದನ್ನೂ ಲೆಕ್ಕಿಸದೆ ಚಕ್ಕಂದ ಆಡುವುದು, ಪದೇಪದೇ ತಬ್ಬಿಕೊಳ್ಳುವುದು, ಮುತ್ತಿಕ್ಕುವುದನ್ನು ಜನ ನಂಬುವಂತಿರಲಿಲ್ಲ, ಅದೂ ಕೂಡ ಮೊದಲೇ ಹೆಣೆದ ಸ್ಕ್ರಿಪ್ಟಿಗೆ ಪಾತ್ರಧಾರಿಗಳ ಸಂಭಾವನೆಯ ನಟನೆಯಂತಿತ್ತೇ ಹೊರತು ನಿಜ ವರ್ತನೆಯಂತೆ ಕಾಣುತ್ತಿರಲಿಲ್ಲ, ಇನ್ನೇನು



ನೀತು-ಆದಿ ರೋಮ್ಯಾನ್ಸ್ ಬಿಸಿ ಆರಿತೆನ್ನುವಾಗಲೇ ಮತ್ತೊಂದು ಡ್ಯುಯೆಟ್ ಹರಿಬಿಟ್ಟರು. ಅದು ದೀಪಿಕಾ-ಸಂತೋಷ್ ಅಫೇರ್. ಅದು ಎಷ್ಟೊಂದು ಹಾಸ್ಯಾಸ್ಪದವಾಗಿತ್ತೆಂದರೆ ತೆರೆ ಮೇಲೆ ಅವರಿಬ್ಬರನ್ನೂ ಕಂಡಿದ್ದೇ ತಡ ಹೀಗೀಗೆ ಆಗುತ್ತೆ ಎಂದು ವೀಕ್ಷಕ ರಿಮೋಟ್ ಕೈಗೆತ್ತಿಕೊಳ್ಳುತ್ತಿದ್ದ!



ಕಂಚಿ ತೋಟ

ಇನ್ನು ಬಿಗ್‌ಬಾಸ್ ಸೆಲಿಬ್ರಿಟಿಗಳಿಗೆ ಒಡ್ಡುವ ಟಾಸ್ಕ್‌ಗಳಾದರೂ ಎಂಥಾದ್ದು? ಅದೇ ಮಾಮೂಲಿನ ಕುಸ್ತಿ, ಎಲೆಕ್ಷನ್ ನಾಟಕ, OLX ಮಾರಿಬಿಡಿ ಆಟ. ಇತ್ಯಾದಿಗಳಾವುದೂ ವಿಶೇಷ ಗಮನ ಸೆಳೆಯಲಿಲ್ಲ, ವಾರಕ್ಕೊಮ್ಮೆ ತನಗೆ ಬೇಕುಬೇಕಾದವರನ್ನಷ್ಟೇ ಕರೆದು ಸುದೀಪ್ ನಡೆಸಿಕೊಡುವ ಷೋ ಕೂಡ ಹಿಂದ್ಯಾವತ್ತೋ ಯಾರೋ ಟೀವಿ ಆ್ಯಂಕರ್ ಸಿನಿಮಾ ನಟರನ್ನು ಕರೆಸಿ ಮಾಡಿದ ಮಾಮೂಲಿ ಟಾಕ್ ಷೋದಂತೆಯೇ ಇತ್ತು. ಸಚಿವೆಯಾಗಿ ಉಮಾಶ್ರೀ ಬಂದು ಕುಣಿದದ್ದು, ನಟಿ ತಾರಾ ಮಗನನ್ನು ನೆನೆಸಿಕೊಂಡು ಕಣ್ಣೀರಿಟ್ಟಿದ್ದು, ನಿರ್ದೇಶಕ ಎಸ್. ನಾರಾಯಣ್ ಬೊಗಳೆ ಬಿಟ್ಟದ್ದು ಯಾವುದೂ ಅನಿರೀಕ್ಷಿತವೆನಿಸಲಿಲ್ಲ.

ಅಷ್ಟಕ್ಕೂ ಸುವರ್ಣ ಟೀವಿ ಬಿಗ್‌ಬಾಸ್‌ಗೆಂದೇ ಸುರಿದದ್ದು ಬರೋಬ್ಬರಿ 30 ಕೋಟಿ. ಕರ್ನಾಟಕದ ಎಲ್ಲಾ ದಿನಪತ್ರಿಕೆಗಳ ಮುಖಪುಟದ ಜಾಹಿರಾತು, ವಿವಿಧ ಲೋಕಲ್ ಚಾನಲ್ಲುಗಳಲ್ಲಿ ಈ ಬಗ್ಗೆ ವಿಶೇಷ ಪ್ರೋಗ್ರಾಂ ಹೆಸರಲ್ಲಿ ಜಾಹಿರಾತು, ಕರ್ನಾಟಕದ ಅಸಂಖ್ಯಾತ ಮೊಬೈಲುಗಳಿಗೆ ಮೆಸೇಜುಗಳು; ಹೀಗೆ ಬಂಡವಾಳದ ಬಹುಪಾಲನ್ನು ಸುದೀಪ್ ಸಂಭಾವನೆ ಮತ್ತು ಜಾಹಿರಾತಿಗೆಂದೇ ಮೀಸಲಿಟ್ಟ ಸುವರ್ಣ ಟೀವಿ ಇದರ ಕ್ರಿಯೇಟೀವ್ ಹೆಡ್ ಆಗಿ ಮಾಡಿದ್ದಾದರೂ ಯಾರನ್ನ?

ಅವನು ಸುಧೀಂದ್ರ ಕಂಚಿ ತೋಟ! ಹೇಳಿಕೇಳಿ ಹುಟ್ಟಾ ಆರೆಸ್ಸೆಸ್ ಕೇಡರ್ ಮತ್ತು ಮುತ್ತಪ್ಪ ರೈನ ಪಕ್ಕಾ ಬಂಟ. ಈತನಕ ಆತನ ಏಕೈಕ ಸಾಧನೆಯೆಂದರೆ ಒಂದಷ್ಟು ದಿನಗಳ ಕಾಲ ರೈ ದುಡ್ಡಲ್ಲೇ ಹುಟ್ಟಿಕೊಂಡಿದ್ದ 'ಗರ್ವ' ಎಂಬ ವಾರಪತ್ರಿಕೆಗೆ ಆತ ಸಂಪಾದಕನಾಗಿದ್ದದ್ದು ಮತ್ತು ಕೇವಲ ಕೇಸರಿ ವರದಿಗಳನ್ನೇ ಪ್ರಕಟಿಸಿ ಆ ಪತ್ರಿಕೆಯನ್ನು ಮುಚ್ಚಿ ಹಾಕಿದ್ದು!

ಸೀಝುನ್-1 ಗೆ ಕ್ರಿಯೇಟಿವ್ ಹೆಡ್ ಆಗಿದ್ದ ರಾಘವೇಂದ್ರ ಹುಣಸೂರು ಚಾಣಾಕ್ಷನಲ್ಲದೆ ಹೋದವರೂ ಪ್ರತಿಭಾವಂತನಾಗಿದ್ದ. ಸಿನಿಮಾ ಸೆಲೆಬ್ರಿಟಿಗಳಿಂಗಲೇ ಪ್ರೋಗ್ರಾಮ ಕ್ಲಿಕ್ ಆಗಲ್ಲ ಅದಕ್ಕೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮವಿದ್ದರೇನೇ ಜನರ ಗಮನ ಸೆಳೆಯುತ್ತೆ ಎಂಬ ಕನಿಷ್ಠ ಪ್ರಜ್ಞೆಯಾದರೂ ಇತ್ತು, ಸಿನಿಮಾ ವ್ಯಕ್ತಿತ್ವಗಳಲ್ಲದೆ ಬ್ರಹ್ಮಾಂಡ, ಕಾಳಿಸ್ವಾಮಿ, ನರ್ಸ್ ಜಯಲಕ್ಷ್ಮಿಯಂಥವರಿಂದಾಗಿ ಅದರ ಬಗ್ಗೆ ಜನಕ್ಕೆ ವಿಲಕ್ಷಣ ಕುತೂಹಲವಿತ್ತು, ಸುದೀಪ್ ಆಗಷ್ಟೇ 'ಈಗ' ಎಂಬ ತೆಲುಗು ಚಿತ್ರದಲ್ಲಿ ಗಮನ ಸೆಳೆದಿದ್ದರಿಂದಾಗಿ ಕರ್ನಾಟಕದ ಪರಭಾಷಿಕರಲ್ಲೂ ಆಸಕ್ತಿ ಕೆರಳಿತ್ತು, ಇಷ್ಟಾಗಿಯೂ ಬಿಗ್‌ಬಾಸ್ ಸೀಝುನ್-1 ಲಾಭ ಗಳಿಸುವ ಬದಲು 20 ಕೋಟಿಯಷ್ಟು ನಷ್ಟ ಅನುಭವಿಸಬೇಕಾಯಿತು.

ಇದು ಗೊತ್ತಿದ್ದೂ ಸುವರ್ಣ ಟೀವಿ 30 ಕೋಟಿಯ ಬಂಡವಾಳ ಹೂಡಿದ್ದು ಮತ್ತದೇ ಸುದೀಪ್ ಮತ್ತು ಸುಧೀಂದ್ರ ಕಂಚಿ ತೋಟನನ್ನು ನಂಬಿ. ಸೀಝುನ್-1ನ ಚಂದ್ರಿಕಾ ಸಮಕ್ಕೆ ತೂಗಬಲ್ಲ ಮತ್ತೊಬ್ಬ ಹೆಣ್ಣು ದಿಕ್ಕಿರಲಿಲ್ಲ ಎಂದೇ ಇಟ್ಟುಕೊಳ್ಳೋಣ. ಕನಿಷ್ಠ ಮತ್ತೊಬ್ಬ ಬ್ರಾಹ್ಮಣ ಪಿಂಡ, ನರ್ಸಮ್ಮ, ನಿಖಿತಾ, ಅರುಣ್ ಸಾಗರ್, ವಿಜಯ್ ರಾಘವೇಂದ್ರರಂಥವರಿಗೆ ಕರ್ನಾಟಕದಲ್ಲಿ ಗತಿಯಿಲ್ಲವೆ? ಕೇವಲ ಟೀವಿ ನಟರು ಮತ್ತು ಚಲಾವಣೆ ಕಳೆಕೊಂಡ ಸಿನಿಮಾ ಸೆಲಿಬ್ರಿಟಿಗಳಷ್ಟೇ ಸಿಕ್ಕರೆ? ವಾಟಾಳ್ ಬರಲಿಲ್ಲ ಅಂದರೆ ಜಗ್ಗೇಶ್ ಒಪ್ಪಲಿಲ್ಲವೆಂದರೆ ಅದಕ್ಕೆ ಪರ್ಯಾಯ ಆಯ್ಕೆಗಳಿಲ್ಲವೆ? ರೇಣುಕಾಚಾರ್ಯ ಒಬ್ಬನೇ ಮನರಂಜನೆಯ ಸರಕಾ ಅಥವಾ ಜನರ ಆಸಕ್ತಿಗೆ ಕಾರಣವಾಗುವ ಬೇರೆ ಯಾವ ವ್ಯಕ್ತಿತ್ವವೂ ಕರ್ನಾಟಕದಲ್ಲಿಲ್ಲವೆ?

ಕೋಟಿ ಕೋಟಿ ಸುರಿದೂ ಕಾಮನ್‌ಸೆನ್ಸ್ ಇಲ್ಲದೆ ಹೋದರೆ ಏನಾಗುತ್ತೋ ಅದೇ ಬಿಗ್‌ಬಾಸ್ ಎರಡನೇ ಆವೃತ್ತಿಗಾಗಿದೆ. ಬೇರೆಲ್ಲ ಕನ್ನಡದ ಟೀವಿ ಷೋಗಳನ್ನೂ ಮೀರಿಸಿದ್ದ ಟಿಆರ್‌ಪಿ ಬರುಬರುತ್ತ ಪಾತಾಳ ಕಚ್ಚುತ್ತಿದೆ. ಯಾವ ಗಿಮ್ಮಿಕ್ಕೂ ವೀಕ್ಷಕನಿಗೆ ರುಚಿಸುತ್ತಿಲ್ಲ. ಸುದೀಪ್ ಬಿಟ್ಟರೆ ಬೇರೆ ಗತಿಯಿಲ್ಲ, ಯಾರೋ ಜ್ಯೋತಿಷಿಯೊಬ್ಬನನ್ನು ವೈಲ್ಡ್ ಕಾರ್ಡ್ ಎಂಟ್ರಿ ಕೊಟ್ಟು ಬಿಗ್‌ಬಾಸ್ ಮನೆಗೆ ತುರುಕಿದ್ದು ಒಂದೇ ದಿನಕ್ಕೂ ಬರಕತ್ತಾಗಲಿಲ್ಲ, ರೇಡಿಯೋ ಜಾಕಿ ರೋಹಿತ್‌ನೇ ವಿನ್ನರ್ ಆಗುತ್ತಾನೆಂದು ಆತನ ಭವಿಷ್ಯವಾಣಿಯೂ ನಿಜವಾಗಲಿಲ್ಲ. ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ಸೃಜನ್ ಲೋಕೇಶ್ ಬಿಟ್ಟರೆ ಬೇರೆ ಯಾರಿಗೂ ವಿನ್ನರ್ ಪಟ್ಟವಿಲ್ಲ ಎಂಬ ಕುತೂಹಲ ಕೂಡ ಉಳಿಯಲಿಲ್ಲ.


ಒಂದು ಬಿಗ್ ಬಜೆಟ್ ಕನ್ನಡ ಚಿತ್ರವನ್ನೂ ಮೀರಿ ಮೂವತ್ತು... ಬಿಗ್ ಬಜೆಟ್ ಹಿಂದಿ, ತಮಿಳು ಚಿತ್ರದ ಬಂಡವಾಳ ಹೂಡಿಯೂ ಸುವರ್ಣ ಟೀವಿ ಬರಬಹುದಾದ ಈ ಬಾರಿ ನಷ್ಟದ ಮೊತ್ತ ಎಷ್ಟಿದ್ದೀತು?

ಹಾಕಿದ ಮೂವತ್ತು ಕೋಟಿ ಗಿಟ್ಟುವುದಿರಲಿ ಅದರ ಜೊತೆ ಇನ್ನೆಷ್ಟು ಕೋಟಿಗೆ ಬಿಗ್‌ಬಾಸ್ ಹಡಗು ಮುಳುಗುತ್ತೋ ಗೊತ್ತಿಲ್ಲ!

■ ರಾ. ಸೋಮನಾಥ್

> ವ್ಯಕ್ತಿಯೊಬ್ಬ ಎಷ್ಟೇ ದೊಡ್ಡವನಾಗಿದ್ದಿರಲಿ ಅಥವಾ ಸಂತನೇ ಆಗಿದ್ದಿರಲಿ ಮಾಂಸಮಜ್ಜೆಗಳಿಂದ ಕೂಡಿದ ಆತನಿಗೆ ಮಾನವ ಸಹಜ ದೌರ್ಬಲ್ಯಗಳಿಂದ ಶಾಶ್ವತ ಮುಕ್ತಿ ಪಡೆಯಲು ಸಾಧ್ಯವಾಗಿಲ್ಲ. ಇದನ್ನು ನಾವು ಮರೆಯದಿರೋಣ. ಮಹಾಪುರುಷರು ಕೂಡಾ ಪರಿಸರದ ಕೂಸುಗಳೇ. ಇದು ಗೋಡೆ ಮೇಲಿನ ಬರಹವಾಗಿದ್ದರೂ ನಾವದನ್ನು ನೋಡುವುದಿಲ್ಲ.
>
> *- ಇತಿಹಾಸ ವಿದ್ವಾಂಸ ಡಾ॥ ಪಿ.ಶರಣ್, ೧೯೭೭ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ದತ್ತಿ ಉಪನ್ಯಾಸ ಮಾಲಿಕೆಯ ಸಂದರ್ಭದಲ್ಲಿ.*

ರಾಮಕಥಾ, ಗೋಪ್ರೇಮ, ಸಂಸ್ಕೃತಿ ರಕ್ಷಣೆ ಮತ್ತು ಅಸಲಿಯತ್ತು



ಹೊಸನಗರ ರಾಮಚಂದ್ರಾಪುರ ಮಠದ ಹವ್ಯಕ ಸ್ವಾಮಿ ರಾಘವೇಶ್ವರ ಭಾರತಿ ವಿರುದ್ಧ ಹವ್ಯಕ ಸಮುದಾಯದವರೇ ಆದ ಗಾಯಕಿ ಪ್ರೇಮಲತಾ ದಾಖಲಿಸಿರುವ ಲೈಂಗಿಕ ದೌರ್ಜನ್ಯ ಪ್ರಕರಣದ ವಿಷಯ ಸದ್ಯ ಇಡೀ ರಾಜ್ಯದಲ್ಲಿ ಚರ್ಚೆಯಾಗುತ್ತಿದೆ. ಬಿಡದಿಯ ನಿತ್ಯಾನಂದ ಸ್ವಾಮಿಯ ಕಾಮಕೇಳಿಗಳ ಹಗರಣದ ಬೆನ್ನಲ್ಲೇ ಬಂದಿರುವ ಈ ಪ್ರಕರಣ ರಾಜ್ಯದ ಜನತೆಯನ್ನು ಬೆಚ್ಚಿಬೀಳಿಸಿದೆ. ಪ್ರೇಮಲತಾ ತನ್ನ ವಿರುದ್ಧ ದೂರು ದಾಖಲಿಸಲಿರುವ ವಿಚಾರವನ್ನು ಅದು ಹೇಗೋ ತಿಳಿದುಕೊಂಡ ರಾಘವೇಶ್ವರರು ತನ್ನ ಭಕ್ತರ ಮೂಲಕ ಪ್ರೇಮಲತಾ ಮತ್ತಾಕೆಯ ಪತಿ ದಿವಾಕರ ಶಾಸ್ತ್ರಿ ವಿರುದ್ಧ ಬ್ಲ್ಯಾಕ್‌ಮೇಲ್ ಪ್ರಕರಣ ದಾಖಲಿಸಿದ್ದಾರೆ. ಎವೆ ಮುಚ್ಚುವಷ್ಟರಲ್ಲಿ ದಂಪತಿಯ ಬಂಧನವೂ ಆಗಿದೆ.

ಬ್ಲ್ಯಾಕ್‌ಮೇಲ್ ಆರೋಪಿಗಳನ್ನು ತಕ್ಷಣ ಬಂಧಿಸುವ ಕಾನೂನು ವ್ಯವಸ್ಥೆ ಲೈಂಗಿಕ ದೌರ್ಜನ್ಯದ ಆರೋಪಿಯನ್ನು ಮುಟ್ಟದಿರುವುದು ವಿಪರ್ಯಾಸವಷ್ಟೇ ಅಲ್ಲ ನ್ಯಾಯದ ಅಣಕವೂ ಆಗಿದೆ. ಸಂವಿಧಾನದ ಅನುಸಾರ ಪ್ರಜಾಸತ್ತಾತ್ಮಕವಾಗಿ ಆಳಲ್ಪಡುತ್ತಿರುವ ಭಾರತದ ಕಾನೂನುಗಳು ಬಡವ, ಬಲ್ಲಿದನೆಂಬ ತಾರತಮ್ಯ ಮಾಡದೆ ಭಾರತದ ನೆಲದಲ್ಲಿರುವ ಎಲ್ಲರಿಗೂ ಸಮಾನವಾಗಿ ಅನ್ವಯವಾಗಬೇಕೆನ್ನುವುದು ಸಾಮಾನ್ಯ ತಿಳಿವಳಿಕೆ. ಹೀಗಿರುವಾಗ ಕೆಲವರಿಗೆ ರಿಯಾಯಿತಿ ದೊರೆಯುತ್ತದೆಂದರೆ ಅವರೇನು ಆಕಾಶದಲ್ಲಿರುವವರೇ ಅಥವಾ 'ವಿಶೇಷ ಕಾನೂನು ವಲಯ'ದಲ್ಲಿರುವವರೇ? ಬಂಧಿಸಲು ಬಂದ ಪೊಲೀಸರಿಗೆ ಸ್ವಾಮಿ "ಚಾತುರ್ಮಾಸ್ಯ ಮುಗಿದನಂತರ ಮರುದಿನವೇ ತಾನೇ ಸ್ವತಃ ನ್ಯಾಯಾಲಯದ ಎದುರು ಹಾಜರಾಗುವೆ"ನೆಂದು ಬರೆದುಕೊಟ್ಟರಂತೆ. ಕಾನೂನಿನಲ್ಲಿ ಚಾತುರ್ಮಾಸ್ಯ ರಿಟ್ರೀಟ್, ರಮ್ಜಾನ್ ಉಪವಾಸ ಎಂದೆಲ್ಲ ಪರಿಗಣಿಸುವ ಪರಿಪಾಠ ಇದೆಯೇ? ಇಂತಹ ಸಂದರ್ಭಗಳಲ್ಲಿ ಬಂಧನದಿಂದ ರಿಯಾಯಿತಿ ನೀಡುವ ವಿಶೇಷ ಕಾನೂನು ಯಾವುದಾದರೂ ಇದೆಯೇ? "ನ್ಯಾಯಾಲಯದ ಎದುರು ಹಾಜರಾಗುವೆ", "ಜೈಲಿಗೆ ಹೋಗುವುದು ಭೂಷಣ" ಎಂದೆಲ್ಲ ಹೇಳಿದ ವ್ಯಕ್ತಿ ಇದೀಗ ಹಾಜರಾಗದೆ ವಕೀಲರ ಮೂಲಕ ಬಂಧನದ ದಿನವನ್ನು ಮುಂದೆ ಹಾಕಿಸುತ್ತಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ, 'ಅಪಪ್ರಚಾರ', 'ಮಠದ ಮೇಲೆ ಆಕ್ರಮಣ', 'ವ್ಯವಸ್ಥಿತ ಷಡ್ಯಂತ್ರ' ಎಂಬಿತ್ಯಾದಿ ಹೇಳಿಕೆಗಳು ಥೇಟ್ ರಾಜಕಾರಣಿಗಳ ಆತ್ಮಘಾತುಕ ಹೇಳಿಕೆಗಳ ಹಾಗಿವೆ. ಲೋಕಾಪವಾದಕ್ಕಿಂತಲೂ ಮರಣವೇ ಲೇಸು ಎಂಬ ನಮ್ಮ ಹಿರಿಯರ ಸುಭಾಷಿತ ಎಲ್ಲಿ, ಸ್ವಾಮಿ ಬಾಯಿಂದ ಉದುರಿದ 'ಮಾನ ತೆಗೆಯಲು ಪ್ರಯತ್ನಿಸಿದ್ದಾರೆ. ಇನ್ನು ಪ್ರಾಣ ಒಂದಿದೆ' ಎಂಬ ಅಣಿಮುತ್ತುಗಳೆಲ್ಲಿ? ವ್ರತಾರೂಢ ಸ್ವಾಮಿಯ ಈ ಮಾತುಗಳಿಗೆ ಕೇಳುಗರೇ ತಲೆತಗ್ಗಿಸುವಂತಾಗಿದೆ. ಇವೆಲ್ಲದರ ಮಧ್ಯೆ ರಾಮ ಕಥೆಯ ಕೇಳಿ, ಕುಣಿದಾಡಿ ಕೃತಾರ್ಥರಾದಂಥ ಹವ್ಯಕರ ವಿವಿಧ ಗುಂಪುಗಳು 'ಅಗ್ನಿಪರೀಕ್ಷೆ'ಗೆ ಆಗ್ರಹಿಸುವುದನ್ನು ಬಿಟ್ಟು ಸ್ವಾಮಿಯನ್ನು ಬಂಧಿಸಬಾರದೆಂದು ಹೇಳುತ್ತಿರುವುದಂತೂ ಬಹಳ ವಿಚಿತ್ರವಾಗಿದೆಯಲ್ಲವೇ.

ರಾಘವೇಶ್ವರರು 1999ರಲ್ಲಿ 36ನೆ ಪೀಠಾಧಿಪತಿಯಾಗಿ ಪಟ್ಟಕ್ಕೇರಿದವರು. ಕೆಲವು ವರ್ಷಗಳ ಬಳಿಕ ಮಠದ ಹಸಿವು ಏರಿದಾಗ ಪ್ರತಿ ಮನೆಯಿಂದ ವಂತಿಗೆ ಸಂಗ್ರಹಿಸುವ ಭಾರಿ ದೊಡ್ಡ ಅಭಿಯಾನ ಪ್ರಾರಂಭವಾಯಿತು. ಗುರ್ಕಾರರ ಮತ್ತು ಭಕ್ತರ ಮನೆಮನೆಗೆ ತೆರಳಿ ಮೊಕ್ಕಾಂ ಹೂಡಿದ ಸ್ವಾಮಿ, ಬೆರಳುಜ್ಜಿದಾಗ ನಾದ ಹೊರಡಿಸುವ ಗಂಟೆಯಂತಹ ಮಠದ ಕೆಲವು ಸೊತ್ತುಗಳನ್ನು ಜಾದೂಗಾರನ ಮಾದರಿಯಲ್ಲಿ ಪ್ರದರ್ಶಿಸಿದಾಗ ಜನ - ಅದರಲ್ಲೂ ವಿಶೇಷವಾಗಿ ಮಹಿಳೆಯರು - ಮಂತ್ರಮುಗ್ಧರಾದುದು ಸುಳ್ಳಲ್ಲ. ತರುವಾಯ ಗೋಕರ್ಣ ದೇವಸ್ಥಾನ ಮಠದ ವಶಕ್ಕೆ ಬಂತು. ಅಮೃತಮಹಲ್, ಎಕರೆಗಟ್ಟಲೆ ಭೂಮಿ ಇನ್ನೂ ಏನೇನೋ ಸಿಕ್ಕಿತು. ಹೊಸ ಹೊಸ ಸೇವೆಗಳು ಹುಟ್ಟಿಕೊಂಡು ಅವುಗಳಿಗೆ ದುಬಾರಿ ಶುಲ್ಕ ವಿಧಿಸುವ ಪರಿಪಾಠ ಆರಂಭವಾಯಿತು. ಅದೇನೋ ಹನುಮಂತನ ವಿಗ್ರಹ ಸ್ಥಾಪಿಸುವ ಯೋಜನೆ ಶುರುವಾಗಿ ಅದರ ಉದ್ಘಾಟನೆಗೆ ವೈಯ್ಯಾರಿ ನಟಿ ಮಲ್ಲಿಕಾ ಶೆರಾವತಳನ್ನು ಕರೆಸಲಾಯಿತು. ಯಾಕೆ, ಹೇಗೆ ಮುಂತಾದ ಪ್ರಶ್ನೆಗಳೆಲ್ಲ ಉತ್ತರವಿಲ್ಲದೆ ಬಿದ್ದಿವೆ.

ಹೀಗೆ ಮುಂದುವರಿಯುತ್ತಾ ಒಂದು ದಿನ 'ಏಕಾಂತ ದರ್ಶನ' ಎಂಬ ಹೊಸ ವಿದ್ಯಮಾನವೊಂದು ಉದ್ಭವಿಸಿತು. ಯಾವತ್ತು 'ಏಕಾಂತ ದರ್ಶನ' ಶುರುವಾಯಿತೋ ಅಂದೇ ಭಕ್ತರು ಎಚ್ಚೆತ್ತುಕೊಂಡಿದ್ದರೆ ಇಷ್ಟೆಲ್ಲ ಅನಾಹುತಗಳಾಗುತ್ತಿರಲಿಲ್ಲವೇನೋ. ಶಾಸ್ತ್ರಿ ಕುಟುಂಬದವರು ಆರೆಸ್ಸೆಸ್‌ಗೆ ತಮ್ಮ ಬದುಕನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡವರು. ದಿವಾಕರ ಶಾಸ್ತ್ರಿಯ ಇನ್ನೊಬ್ಬ ಅಣ್ಣ ಕೃಷ್ಣ ಶಾಸ್ತ್ರಿ ಆರೆಸ್ಸೆಸ್‌ನ ಅಂಗಸಂಸ್ಥೆಯಾದ ಸಂಸ್ಕಾರ ಭಾರತಿಯ ಮುಖ್ಯಸ್ಥರು. ಮೂಲಗಳ ಪ್ರಕಾರ ಪ್ರೇಮಲತಾ ಮೇಲಾದ ಲೈಂಗಿಕ ದೌರ್ಜನ್ಯದ ಮಾಹಿತಿ ಸಿಕ್ಕಾಕ್ಷಣ ಕೃಷ್ಣ ಶಾಸ್ತ್ರಿ ಮತ್ತು ಆರೆಸ್ಸೆಸ್‌ನ ಸಹ ಬೌದ್ಧಿಕ್ ಪ್ರಮುಖ್ ದತ್ತಾತ್ರೇಯ ಹೊಸಬಾಳೆ ಇಬ್ಬರೂ ಸ್ವಾಮಿಯನ್ನು ಭೇಟಿಯಾಗಿ ಪೀಠತ್ಯಾಗ ಮಾಡುವಂತೆ ಒತ್ತಾಯಿಸಿದ್ದಾರೆ. ಆದರೂ ಸ್ವಾಮಿ ಜಪ್ಪಯ್ಯ ಎಂದಿಲ್ಲ ಅಂದರೆ ಆರೆಸ್ಸೆಸ್ ಒಳಗೆ ಸ್ವಾಮಿ ಪರ, ವಿರೋಧಿ ಎಂಬ ಎರಡು ಬಣಗಳಾಗಿರುವುದು ಸ್ಪಷ್ಟವಿದೆ.

ಆತ್ಮಹತ್ಯೆ ಮಾಡಿಕೊಂಡ ಶ್ಯಾಮಪ್ರಸಾದ್ ಒಡಕಲ್ಲು ಹೆಂಚಿನ ಮನೆಯಲ್ಲಿದ್ದುಕೊಂಡು ತನ್ನ ಸಂಪಾದನೆ, ಜೀವಿತಾವಧಿಯನ್ನೆಲ್ಲ ಸಂಘಕ್ಕೆ ಮುಡಿಪಾಗಿಟ್ಟವರು. ಊರಲ್ಲಿ ಎಲ್ಲರಿಗೂ ಬೇಕಾದವರು. ಇಂತಹ ವ್ಯಕ್ತಿಯ ಅಂತ್ಯಸಂಸ್ಕಾರಕ್ಕೆ ಸಮಾಜ ಬಾಂಧವರು ಬಹಿಷ್ಕಾರ ಹಾಕಿರುವುದನ್ನು ಅತ್ಯಂತ ಅಮಾನವೀಯ ವರ್ತನೆ ಎಂದೇ ಕರೆಯಬೇಕಾಗುತ್ತದೆ. ಆತನ ಅಂತ್ಯಕ್ರಿಯೆಗೆ ಆರೆಸ್ಸೆಸ್‌ನ ಯಾವೊಬ್ಬ ಮುಖಂಡನೂ ಬರದಿರುವುದನ್ನು ಹವ್ಯಕರೆಲ್ಲರೂ ಗಮನಿಸಬೇಕು. ಶ್ಯಾಮಪ್ರಸಾದ್ ಆತ್ಮಹತ್ಯೆ ಮಾಡಿಕೊಳ್ಳಲು ಹಲವಾರು ದಿನಗಳಿಂದ ಬರುತ್ತಿದ್ದ ಜೀವಬೆದರಿಕೆ ಕರೆಗಳೇ ಕಾರಣ. ಲಭ್ಯ ಮಾಹಿತಿಗಳ ಪ್ರಕಾರ ಕೊನೆಯ ಕರೆ ಇಬ್ಬರು ಸ್ಥಳೀಯ ಹಿರಿಯ ಆರೆಸ್ಸೆಸ್ ಪದಾಧಿಕಾರಿಗಳಿಂದ ಬಂದಿದ್ದು, ಇದನ್ನು ಮತ್ತು ಇದಕ್ಕೆ ಮುಂಚಿನ ಕರೆಗಳ ವಿಷಯವನ್ನು ಶ್ಯಾಮ ಪ್ರಸಾದ್ ತನ್ನ ಡೈರಿಯಲ್ಲಿ ದಾಖಲಿಸಿದ್ದರು. ಆ ಕರೆಗಳಲ್ಲಿ 'ಕೇಸು ಹಿಂತೆಗೆದುಕೊಳ್ಳಬೇಕು, ಅಣ್ಣ ಅತ್ತಿಗೆ ವಿರುದ್ಧ ಹೇಳಿಕೆ ಕೊಡಬೇಕು, ಸ್ವಾಮಿ ಕಾಲಿಗೆ ಬಿದ್ದು ಕ್ಷಮೆ ಕೋರಬೇಕು ಇಲ್ಲವಾದರೆ...' ಎಂಬರ್ಥದ ಮಾತುಗಳಿದ್ದವು ಎನ್ನಲಾಗಿದೆ. ಆರೆಸ್ಸೆಸ್‌ನ ನಿಷ್ಠಾವಂತ ಅನುಯಾಯಿಯಾಗಿದ್ದ ಶ್ಯಾಮ ಪ್ರಸಾದ್‌ಗೆ ಸಂಘದ ಈ ವರ್ತನೆಯಿಂದ ತೀವ್ರ ಆಘಾತ ಆಗಿರುವುದರಲ್ಲಿ ಸಂಶಯವಿಲ್ಲ. ಕೊನೆಗಾತ ಗುಂಡು ಹಾರಿಸಿಕೊಂಡು ಸಾಯಲು ಮುಂದಾದರು ಎಂದರೆ ಇದು (1) ಆತನ ಅಣ್ಣ ಅತ್ತಿಗೆಗೆ ಅನ್ಯಾಯ ಆಗಿರುವುದು ನಿಜವೆಂಬುದನ್ನೂ (2) ಕೇಸು ಹಿಂತೆಗೆದುಕೊಳ್ಳಲಾರದಷ್ಟು ಪ್ರಬಲವಾಗಿರುವುದನ್ನೂ ತೋರಿಸುವುದಿಲ್ಲವೇ?

ಹವ್ಯಕ ಕುಟುಂಬವೊಂದರಲ್ಲಿ ಜನಿಸಿದವನಾದ ನನಗೆ ಈ ಸಂದರ್ಭದಲ್ಲಿ ನನ್ನ ಒಂದೆರಡು ಅನಿಸಿಕೆಗಳನ್ನು ಹಂಚಿಕೊಳ್ಳಬೇಕೆಂದು ತೋರುತ್ತಿದೆ. ನನ್ನಜ್ಜನಿಗೆ ಆರೆಸ್ಸೆಸ್‌ಅನ್ನು ಕಂಡರಾಗುತ್ತಿರಲಿಲ್ಲ. ನಾನು ಚಿಕ್ಕವನಾಗಿದ್ದಾಗ ಅಜ್ಜ ಆರೆಸ್ಸೆಸ್‌ಅನ್ನು ತಿರಸ್ಕಾರಯುತವಾಗಿ 'ಅರೆಸೀಸ' ಎಂದು ಲೇವಡಿ ಮಾಡುತ್ತಿದ್ದುದು ನನಗಿನ್ನೂ ಚೆನ್ನಾಗಿ ನೆನಪಿದೆ. ಅಜ್ಜನಿಗೆ ಗೊತ್ತಿತ್ತು, ಆರೆಸ್ಸೆಸ್ ಎಂದೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ ಮಾತ್ರವಲ್ಲ, ಅದು ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಬ್ರಿಟಿಷ್ ಸೈನ್ಯಕ್ಕೆ ಭಾರತೀಯರನ್ನು ಭರ್ತಿ ಮಾಡಿಕೊಟ್ಟಂಥ ಮತ್ತು ಗಾಂಧೀಜಿಯನ್ನು ಹತ್ಯೆಗೈದು ಸಿಹಿ ಹಂಚಿಕೊಂಡು ಸಂಭ್ರಮಿಸಿದಂಥ ಸಂಘಟನೆ (ಇತ್ತೀಚೆಗೆ ಸಾಹಿತಿ ಅನಂತಮೂರ್ತಿ ತೀರಿಕೊಂಡಾಗಲೂ ಪಟಾಕಿ ಸಿಡಿಸಿ, ಸಿಹಿ ಸವಿದು ಖುಷಿಪಟ್ಟವರು ಇವರೇ) ಎಂದು. ಆರೆಸ್ಸೆಸ್ ಬಗ್ಗೆ ಮೃದು ಧೋರಣೆ ತಾಳಿದ್ದ ಸರ್ದಾರ್ ಪಟೇಲರು, ಗಾಂಧೀಜಿ ಕೊಲೆಯಾದಾಗ ಆರೆಸ್ಸೆಸ್‌ಅನ್ನು ನಿಷೇಧಿಸುವಂಥ ಕಠಿಣ ಕ್ರಮ ಕೈಗೊಳ್ಳುವಲ್ಲಿ ಹಿಂಜರಿದಿರಲಿಲ್ಲ. ಸೆಪ್ಟೆಂಬರ್ 11, 1948ರಂದು ಸರಸಂಘಚಾಲಕ ಗುರು ಗೋಲ್ವಲ್ಕರ್‌ಗೆ ಬರೆದ ಪತ್ರವೊಂದರಲ್ಲಿ ಸರ್ದಾರ್ ಹೇಳಿದರು, "....ಭಾಷಣಗಳೆಲ್ಲವೂ ಕೋಮು ವಿಷದಿಂದ ಕೂಡಿವೆ. ಹಿಂದೂಗಳಲ್ಲಿ ಹುಮ್ಮಸ್ಸು ಮೂಡಿಸಿ ಆತ್ಮರಕ್ಷಣೆಗಾಗಿ ಅವರನ್ನು ಸಂಘಟಿಸುವುದಕ್ಕೋಸ್ಕರ ವಿಷ ಹರಡುವ ಅವಶ್ಯಕತೆಯಿರಲಿಲ್ಲ. ಆ ನಂಜಿನ ಅಂತಿಮ ಪರಿಣಾಮಕ್ಕೆ ಗಾಂಧೀಜಿಯ ಅಮೂಲ್ಯ ಜೀವ ಬಲಿಯಾದುದನ್ನು ದೇಶ ಅನುಭವಿಸಬೇಕಾಯಿತು. ಸರಕಾರಕ್ಕಾಗಲಿ ಜನರಿಗಾಗಲಿ ಆರೆಸ್ಸೆಸ್ ಬಗ್ಗೆ ಎಳ್ಳಷ್ಟೂ ಅನುಕಂಪ ಉಳಿದಿಲ್ಲ. ವಾಸ್ತವದಲ್ಲಿ ಪ್ರತಿರೋಧ ಬೆಳೆದಿದೆ. ಗಾಂಧೀಜಿ ಸಾವಿಗೀಡಾಗು... ಆರೆಸ್ಸೆಸ್ ಮಂದಿ ಆನಂದತುಂದಿಲರಾಗಿ ಸಿಹಿ ಹಂಚಿದು... ಪರಿಣಾಮವಾಗಿ ಪ್ರತಿರೋಧ ಇನ್ನಷ್ಟು ತೀವ್ರಗೊಂಡಿತು..." ಇಲ್ಲಿ ನಾವೆಲ್ಲರೂ ಯೋಚಿಸಬೇಕಾದ ವಿಚಾರವೊಂದಿ... ಅದೇನೆಂದರೆ 1948ರ ಆರೆಸ್ಸೆಸ್‌ಗೂ 2014ರ ಆರೆಸ್ಸೆಸ್‌ಗ... ವ್ಯತ್ಯಾಸವೇನಾದರೂ ಇದೆಯೇ?

ಆರೆಸ್ಸೆಸ್‌ನ ಸಾರ್ವಜನಿಕ ಮುಖ

ರಾಷ್ಟ್ರೀಯ ಸ್ವಯಂಸೇವಕ ಸಂಘ ಅದ... ಜಾಹೀರಾತುಗಳು ಹೇಳುವಂತೆ ಪ್ರಾಕೃತಿಕ ವಿಕೋಪ... ಸಂದರ್ಭದಲ್ಲಿ ಸ್ವಯಂಸೇವಕರ ಮೂಲಕ ಸಂತ್ರಸ್ತರಿಗೆ ನೆರ... ನೀಡುವ ಒಂದು ಸಂಸ್ಥೆ. ಆರೆಸ್ಸೆಸ್ ಒಂದು ಬೃಹತ್... ಸಂಘಟನೆಯಾಗಿದ್ದು ಅದರ ನೆರಳಲ್ಲಿ ಸಂಸ್ಕಾರ ಭಾರ... ಸಂಸ್ಕೃತ ಭಾರತಿ, ವಿದ್ಯಾ ಭಾರತಿ, ಸೇವಾ ಭಾರತಿ, ಪ್ರ... ಭಾರತಿ, ವನವಾಸಿ ಕಲ್ಯಾಣ ಆಶ್ರಮ, ಅಖಿಲ ಭಾರತೀ... ಸಾಹಿತ್ಯ ಪರಿಷತ್, ರಾಷ್ಟ್ರೋತ್ಥಾನ ಸಾಹಿತ್ಯ, ಸ್ವಾ... ವಿವೇಕಾನಂದ ವೈದ್ಯಕೀಯ ಮಿಷನ್, ವಿವೇಕಾನಂದ ಕೇಂ... ವಿಶ್ವ ಹಿಂದೂ ಪರಿಷತ್ತು, ಬಜರಂಗ ದಳ ಮುಂತಾ... ನೂರಾರು ಉಪಸಂಘಟನೆಗಳಿವೆ. ಇವೆಲ್ಲವೂ ವಿವಿ... ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾ... ಭಾಗವಹಿಸುತ್ತಿವೆ.

ಗೋಲ್ವಲ್ಕರ್‌ರ 'ಹಿಂದೂ ರಾಷ್ಟ್ರ' ಕನಸನ್ನು ನನಸಾಗಿಸ... ಪಣ ತೊಟ್ಟಿರುವ ಆರೆಸ್ಸೆಸ್ ಅದಕ್ಕೆ ಕಾವಿಧಾರಿಗಳನ... ಯಥೇಚ್ಛವಾಗಿ ಬಳಸುತ್ತದೆ. ಕೆಲವು ವರ್ಷಗಳ ಕೆ... ಆರೆಸ್ಸೆಸ್ ವತಿಯಿಂದ ನಡೆದ ಗೋಲ್ವಲ್ಕ... ಶತಮಾನೋತ್ಸವದಲ್ಲಿ ರವಿಶಂಕರ್, ಮಾ... ಅಮೃತಾನಂದಮಯಿ, ಬಾಬಾ ರಾಮದೇವ ಮುಂತ... ಅನೇಕ ಸ್ವಾಮಿಗಳು ಭಾಗವಹಿಸಿದ್ದರು. ಆರೆಸ್ಸೆಸ... ಸಹಬೌದ್ಧಿಕ್ ಪ್ರಮುಖ್ ಆಗಿರುವ ದತ್ತಾತ್ರೇಯ ಹೊಸಬ... ಪ್ರಕಾರ ಸ್ವಾಮಿಗಳಿಂದಾಗಿ ಈ ದೇಶದಲ್ಲಿ ಅಧ್ಯಾ... ಚಳವಳಿಯೊಂದು ನಡೆಯುತ್ತಿದೆ. ಇದರ ಮೊದಲ ಅಲೆ... 90ರ ದಶಕದಲ್ಲಿ ನಡೆದ ಅಯೋಧ್ಯಾ ಚಳವಳಿ. ಪ್ರಸಕ್ತವ... ಎರಡನೆ ಅಲೆ ಜಾರಿಯಲ್ಲಿದ್ದು ಅದರಲ್ಲಿ ಯೋ... ಆಯುರ್ವೇದ ಮತ್ತು ಧಾರ್ಮಿಕ ಗ್ರಂಥಗಳ... ಬಳಸಲಾಗುತ್ತಿದೆ. ಆರೆಸ್ಸೆಸ್ ಸ್ಥಾಪಿಸಿರುವ ಗ್ಲೋಬ... ಫೌಂಡೇಷನ್ ಫಾರ್ ಸಿವಿಲಿಸೇಷನಲ್ ಹಾರ್ಮನಿ ಎ... ಸಂಸ್ಥೆಯೊಂದು ಸ್ವಾಮಿಗಳನ್ನು ಬಳಸಿಕೊಂಡು ಸುದ... ಕ್ರಿಯೆ, ಪ್ರಾಣಾಯಾಮ, ಯೋಗ, ಪ್ರವಚನ ಇತ್ಯಾದಿ... ಮೂಲಕ ಹಿಂದೂತ್ವ ಸಿದ್ಧಾಂತವನ್ನು ಇನ್ನಷ್ಟು ವಿಸ್ತರಿಸ... ಕಾರ್ಯವನ್ನು ಮಾಡುತ್ತಿದೆ. ಈ ಸಂಸ್ಥೆಯ ಸದಸ್ಯ... ದೊಡ್ಡ ದೊಡ್ಡ ಉದ್ಯಮಿಗಳು, ಮಾಧ್ಯಮ ದೊರೆಗ... ರಾಜಕಾರಣಿಗಳು ಮೊದಲಾದವರಿದ್ದಾರೆ. ರಾಮಕ... ಗೋಪ್ರೇಮ ಇತ್ಯಾದಿ ಕಾರ್ಯಕ್ರಮಗಳು ಇದರದೇ ಒ... ಭಾಗ. ಇವೆಲ್ಲದರ ಅಂತಿಮ ಗುರಿ ಭಾರತೀ... ಸಮಾಜವನ್ನು ಧ್ರುವೀಕರಿಸಿ ಅದನ್ನು ವೈದಿಕರ ಆಳ್ವಿಕೆ... 'ಹಿಂದೂ ರಾಷ್ಟ್ರ'ವನ್ನಾಗಿ ಪರಿವರ್ತಿಸುವುದಾಗಿದೆ.

ಕರ್ನಾಟಕದಲ್ಲಿ ರಾಘವೇಶ್ವರ ಸ್ವಾಮಿ ರಾಮ... ನಿರೂಪಕ ಆಗಿದ್ದರೆ ಗುಜರಾತಿನಲ್ಲಿ ಅದನ್ನು ನಡೆಸುತ್ತಿರು... ಮೊರಾರಿ ಬಾಪು ಎಂಬ ಸ್ವಾಮಿ. ಈತನ ಕಾರ್ಯಕ್ರಮ... ಜನಸಾಗರವೇ ಹರಿದುಬರುತ್ತದೆ ಎನ್ನಲಾಗಿದೆ. "ರಾಮ... ಕೇವಲ ಭಾರತಕ್ಕೆ ಸೀಮಿತಗೊಳಿಸಬಾರದು. ಅ... ಬ್ರಹ್ಮಾಂಡಕ್ಕೆ ಸೇರಿದವನು" ಎಂದು ರಾಮಜಪ ಮಾಡು... ಗುಜರಾತಿನ 'ಅಭಿವೃದ್ಧಿ'ಯನ್ನೂ ಹೊಗಳುವ ಮೊ... ಬಾಪು ಮತ್ತು ಇನ್ನೋರ್ವ ಪ್ರಮುಖ್ ಸ್ವಾಮಿ ಇಬ... ನರೇಂದ್ರ ಮೋದಿಯ ಪರಮಾಪ್ತರು. ಗುಜರಾತಿನ ಡ... ಜಿಲ್ಲೆಯಲ್ಲಿ ಶಬರಿ ಕುಂಭ ನಡೆಸಿ ಆದಿವಾಸಿಗ... ಮರುಮತಾಂತರ ಮಾಡಿದ್ದ ಮೊರಾರಿ ಬಾಪು... ಮುಖ್ಯಮಂತ್ರಿ ಮೋದಿಯಿಂದ ಭಾರಿ ಪ್ರೋತ್ಸಾಹ ... ಬೆಂಬಲ ಎರಡೂ ದೊರೆತಿವೆ. ಗುಜರಾತ್ ಮಾದರಿ... ಇತರ ರಾಜ್ಯಗಳೂ ಅಭಿವೃದ್ಧಿ ಆಗಬೇಕೆನ್ನುವ ಮೊ... ಬಾಪುವಿನ ಪ್ರಕಾರ ಹೆಚ್ಚೆಚ್ಚು ವಿಮಾನ ನಿಲ್ದಾಣ... ಅಭಿವೃದ್ಧಿಯ ಸೂಚಕ. ಶಿಕ್ಷಣದಲ್ಲಿ ಗುರು... ಪರಂಪರೆಯನ್ನು ಪುನರುಜ್ಜೀವಿತಗೊಳಿಸಬೇಕೆಂಬುದು... ಮನದಾಳದ ಬಯಕೆ. ಇದು ಆರೆಸ್ಸೆಸ್‌ನ ಬಯಕೆ... ಆಗಿದೆ ಎಂಬುದಕ್ಕೆ ಇತ್ತೀಚೆಗೆ ಶಿಕ್ಷಕರ ದಿನವನ್ನು ... ಉತ್ಸವವೆಂದು ಕರೆದುದೇ ಸಾಕ್ಷಿ. ಇಂದು ಲೈ... ದೌರ್ಜನ್ಯದ ಆರೋಪದಲ್ಲಿ ಸೆರೆಮನೆಯ... ಎಣಿಸುತ್ತಿರುವ ಮತ್ತೋರ್ವ ಸ್ವಾಮಿ ಆಸಾರಾಂ ಬಾಪು... ಅಂದು ಆಗಾಗ ಭೇಟಿಯಾಗುತ್ತಿದ್ದ ವ್ಯಕ್ತಿಗಳ ಪಟ್ಟಿ... ನರೇಂದ್ರ ಮೋದಿ, ಮೋಹನ ಭಾಗವತ್ ಮೊದ... ಅನೇಕ ಗಣ್ಯಾತಿಗಣ್ಯ ಆರೆಸ್ಸೆಸ್ಸಿಗರ ಹೆಸರೂಗಳೂ ಸ...

ಸಾಧು, ಸಂತರೆಂದರೆ ಸರ್ವಸಂಗ ಪರಿತ್ಯಾಗಿಗಳು, ... ಮತ ನೋಡದೆ ಸಕಲ ಮನುಷ್ಯಕುಲದ ಒಳಿ... ಚಿಂತಿಸುವವರು ಎನ್ನಲಾಗುತ್ತದೆ. ಮಾನವೀ... ಇರುವವರೆಲ್ಲರೂ 2002ರ ಗುಜರಾತ್ ಮಾರಣಹೋ... ಸಂತಾಪ ವ್ಯಕ್ತಪಡಿಸಿರುವಾಗ ಈ ಮೊರಾರಿ ಬಾಪು, ಆ... ಬಾಪು, ಪ್ರಮುಖ್ ಮತ್ತಿತರ ಹಿಂದೂ ಸ್ವಾಮಿ...

ದರೂ ಘಟಿಸಿಟಿಕ್ ಅಂದವರಲ್ಲ, ಪರೋಕ್ಷವಾಗಿ
ಧರ್ಮೀಯರ ವಿರುದ್ಧ ಅಸಹನೆಯ ಭಾವನೆ
ಸುತ್ತಾ ಜನರ ಮನಸ್ಸನ್ನು ಇನ್ನಷ್ಟು
ತಗೊಳಿಸುವವರನ್ನು ಸ್ವಾಮಿ ಎನ್ನಬಹುದೇ?

ರೆಸ್ಸೆಸ್‌ನ ಇನ್ನೊಂದು ಮುಖ

ಸ್ಸೆಸ್‌ಗೆ ಇನ್ನೊಂದು ಉಗ್ರ ಮುಖವಿರುವುದು ಹೆಚ್ಚಿನವರಿಗೆ ತಿಳಿದಿಲ್ಲವೆನಿಸುತ್ತದೆ. ಆರೆಸ್ಸೆಸ್‌ನ ಚ್ಚ ಗುರು ಗೋಲ್ವಲ್ಕರ್‌ಗೆ ನರಹಂತಕ ಹಿಟ್ಲರ್‌ನ ಯೆ ಆದರ್ಶ ಆಗಿತ್ತು. ಗೋಲ್ವಲ್ಕರ್ ಏನು ರು? "ಜರ್ಮನಿ ತನ್ನ ಸ್ವಂತ ಜನಾಂಗ ಹಾಗೂ ಪರಿಶುದ್ಧತೆಯನ್ನು ಕಾಪಾಡುವುದಕ್ಕೋಸ್ಕರ ಒಳಗಿದ್ದ ಸೆಮಿಟಿಕ್ ಜನಾಂಗಗಳಾದ ದಿಗಳನ್ನು ಖಾಲಿ ಮಾಡಿ ಇಡೀ ವಿಶ್ವಕ್ಕೆ ಆಘಾತ . ಇಲ್ಲಿ ವ್ಯಕ್ತವಾಗಿರುವುದು ಅತ್ಯುನ್ನತ ಮಟ್ಟದ ಗರ್ವ...... ಹಿಂದೂಸ್ತಾನದಲ್ಲಿರುವ ನಾವು ಈ ಪಾಠವನ್ನು ಕಲಿತು ಅದರ ಲಾಭ ಕೊಳ್ಳಬೇಕು....... ಹಿಂದುಸ್ತಾನದಲ್ಲಿರುವ ಯ ಜನಾಂಗಗಳು (ಕ್ರೈಸ್ತರು, ಮುಸಲ್ಮಾನರು) ಹಿಂದೂ ಸಂಸ್ಕೃತಿ ಮತ್ತು ಭಾಷೆಯನ್ನು ಸಿಕೊಳ್ಳಬೇಕು, ಹಿಂದೂ ಧರ್ಮಕ್ಕೆ ಗೌರವ ಅದನ್ನು ಭಯಭಕ್ತಿಯಿಂದ ಕಾಣಬೇಕು, ಜನಾಂಗವನ್ನು ಹಾಗೂ ಹಿಂದೂ ರಾಷ್ಟ್ರದ ಯನ್ನು ವೈಭವೀಕರಿಸುವುದರ ಹೊರತು ಬೇರಾವ ನ್ನೂ ಮನದೊಳಕ್ಕೆ ಬಿಟ್ಟುಕೊಳ್ಳಬಾರದು ಮತ್ತು ಪ್ರತ್ಯೇಕ ಅಸ್ತಿತ್ವವನ್ನು ತ್ಯಜಿಸಿ ಹಿಂದೂ ದೊಳಕ್ಕೆ ಸೇರಿಕೊಳ್ಳಬೇಕು. ಇಲ್ಲಾ ಯಾವುದಕ್ಕೂ ದೆ, ಯಾವುದೇ ಸವಲತ್ತುಗಳಿಗೂ, ವಿಶೇಷ ಗಳಿಗೂ ಅರ್ಹರಾಗದೆ, ನಾಗರಿಕ ಹಕ್ಕುಗಳನ್ನು ಕೇಳದೆ ಹಿಂದೂ ರಾಷ್ಟ್ರಕ್ಕೆ ಪೂರ್ತಿ ಅಧೀನರಾಗ ಳಗಿರಬಹುದು......"

ಸ್ಸೆಸ್‌ನ ಚಟುವಟಿಕೆಗಳಲ್ಲಿ ಆದಿವಾಸಿಗಳ ತಾಂತರ, ಅಲ್ಪಸಂಖ್ಯಾತರ ಮೇಲೆ ದಾಳಿ, ಗಲಭೆ, ಬಾಂಬ್ ಸ್ಫೋಟಗಳಂಥವೂ ಸೇರಿವೆ. ಮೇಲಿಂದ ಮೇಲೆ ಸಂಭವಿಸಿರುವ ಕೋಮು ಆರೆಸ್ಸೆಸ್‌ನ ಬೆಳವಣಿಗೆಯೂ ಏಕಕಾಲಕ್ಕೆ ದನ್ನು ಗಮನಿಸಬಹುದು. ತನಿಖಾ ಆಯೋಗಗಳ ಸ್ಪಷ್ಟವಾಗಿ ತಿಳಿಸುವಂತೆ 1969ರ ಗುಜರಾತ್, ಮತ್ತು ಜಲಗಾಂವ್, 1971ರ ತಲಚೇರಿ, ಜಮ್ಶೆದ್‌ಪುರ, 1982ರ ಕನ್ಯಾಕುಮಾರಿ, ಭಾಗಲ್‌ಪುರ ಗಲಭೆಗಳು, 1992ರ ಬಾಬರಿ ಧ್ವಂಸ ಎಲ್ಲದರಲ್ಲಿಯೂ ಆರೆಸ್ಸೆಸ್ ಪ್ರಮುಖ ಹಿಸಿದೆ.

ಘಪರಿವಾರದ ಯುವ ಕಾರ್ಯಕರ್ತರಿಗೆ ಬಳಕೆ, ಬಾಂಬ್ ತಯಾರಿ ಮತ್ತು ಸ್ಫೋಟ ಲ್ಲಿ ಭಾರತದ ವಿವಿಧೆಡೆಗಳಲ್ಲಿ ವ್ಯವಸ್ಥಿತ ತರಬೇತಿ ಗುತ್ತಿದೆ. 2001-2002ರ ಔರಂಗಾಬಾದ್ ಬಾಂಬ್ ಸ್ಫೋಟಗಳು, 2003ರ ಪರ್ಭಣಿ, ಪೂರ್ಣಾ ಮತ್ತು ಜಾಲ್ನಾ, 2006 - 2007ರ ಡ್, 2007ರ ವಾರ್ಧಾದ ಪಾರ್ಸೆಲ್ ಬಾಂಬ್, ಥಾಣೆ, ವಾಶಿ, ತೆಂಕಾಸಿ, ಕಾನ್‌ಪುರ, ಕಣ್ಣೂರು, ಹುಬ್ಬಳ್ಳಿ ಜಿಲ್ಲಾ ನ್ಯಾಯಾಲಯ ಸ್ಫೋಟಗಳು, ಾಂವ್, ಮೋದಸಾ, ಸಂಝೌತಾ ಎಕ್ಸ್‌ಪ್ರೆಸ್, ದರ್ಗಾ, ಹೈದರಾಬಾದ್ ಮಕ್ಕಾ ಮಸೀದಿ ಸ್ಫೋಟಗಳು, 2009ರ ಘಟ್ಟಾವಳಿ ಬಾಂಬು ಮುಂತಾದುವೆಲ್ಲ ಆರೆಸ್ಸೆಸ್‌ನ 'ಸಾಧನೆ'ಗಳು. ಹುಸಿಯಾದ ಸ್ಫೋಟ ಯತ್ನಗಳು, ಸ್ಫೋಟಕಗಳ ತಹ ಘಟನೆಗಳ ಸಂಖ್ಯೆ ಸಾಕಷ್ಟು ದೊಡ್ಡದಿದೆ. ಸ್ಸಾದಲ್ಲಿ ಸ್ವಾಮಿ ಲಕ್ಷ್ಮಣಾನಂದ ಸರಸ್ವತಿ, ತಿಸಲ್ಲಿ ಸ್ವಾಮಿ ಅಸೀಮಾನಂದನಂಥವರು ವಾಗಿ ಆದಿವಾಸಿಗಳ ಮರುಮತಾಂತರ, ಗಳು, ಸ್ಫೋಟಗಳು ಇತ್ಯಾದಿಗಳಿಗೆಂದೇ ಟ್ಟವರು. ಸ್ವಾಮಿ ಅಸೀಮಾನಂದ ಮತ್ತು ಇನ್ನೂ ಆರೆಸ್ಸೆಸ್ಸಿಗರಿಂದು ಮಾಲೆಗಾಂವ್ ಮುಂತಾದ ದು ಬಾಂಬ್ ಸ್ಫೋಟಗಳನ್ನು ಯೋಜಿಸಿರುವ ದಲ್ಲಿ ಶ್ರೀಕೃಷ್ಣ ಜನ್ಮಸ್ಥಾನ ಸೇರಿದ್ದಾರೆ.

ಕೋಟೆಯೊಳಗೆ ಬಂಧಿಯಾಗಿರುವ ಹವ್ಯಕರು

ನ್ಯಾಸ ನಮ್ಮಲ್ಲಿ ಹೆಚ್ಚಿನವರನ್ನು ಅಕ್ಷರಸ್ಥರನ್ನಾಗಿಸಿ ಹೊರತು ಸುಶಿಕ್ಷಿತರನ್ನಾಗಿ, ವಿಚಾರವಂತರನ್ನಾಗಿ ವಂತೆ ತೋರುವುದಿಲ್ಲ, ಪರಿಣಾಮವಾಗಿ ತ್ರ್ಯ ಭಾರತದಲ್ಲಿ ಸಂವಿಧಾನ ಮತ್ತು ಮವೇ ಪ್ರಧಾನವೆಂಬ ತಿಳಿವಳಿಕೆ ನಮ್ಮಲ್ಲಿ ಗಿದೆ. ಸಂವಿಧಾನದ ಆಶಯಗಳನ್ನು ಸುವಲ್ಲಿ ಸಕ್ರಿಯವಾಗಿ ಪಾಲ್ಗೊಂಡು ವಾಗಿ ಜಾತಿಮುಕ್ತ ಸಮಾನತೆಯ ಸಮಾಜ ಗಡ ಗುರಿಸಾಧನೆಗೆ ಅಳಿಲಸೇವೆ ಸಲ್ಲಿಸುವುದು ನಮ್ಮಲ್ಲಿ ಪ್ರತಿಯೊಬ್ಬನ ಕರ್ತವ್ಯ ಎಂಬುದನ್ನು ನಾವು ಅರಿಯದಾಗಿದ್ದೇವೆ. ಸ್ವಜಾತಿ, ಸ್ವಧರ್ಮ ಪ್ರೇಮಗಳು ನಮ್ಮನ್ನು ವಾಸ್ತವಗಳಿಗೆ ಕುರುಡಾಗಿಸಿವೆ. ವ್ಯಕ್ತಿತ್ವವನ್ನು ವಿಕಸನಗೊಳಿಸಿ ವಿಶ್ವ ಮಾನವರಾಗುವ ಬದಲು ಜಾತಿ, ಮತ, ಸಮುದಾಯದ ಕೋಟೆಯೊಳಗೆ ಬಂಧಿಯಾಗಿ ಇನ್ನಷ್ಟು ಸಂಕುಚಿತ ಮನೋಭಾವವನ್ನು ಬೆಳೆಸಿಕೊಳ್ಳುತ್ತಿರುವುದು ದುರದೃಷ್ಟಕರ.

ಈ ಪರಿಸ್ಥಿತಿಗೆ ಅಜ್ಞಾನ, ವೈಚಾರಿಕ ಚಿಂತನೆಯ ಅಭಾವ ಮತ್ತು ಜಿಜ್ಞಾಸಾ ಮನೋಭಾವದ ಕೊರತೆಗಳೇ ಕಾರಣ. ಪ್ರಾಯಶಃ ಇದೆಲ್ಲ ನಮ್ಮ ದೋಷಯುತ ಶಿಕ್ಷಣ ವ್ಯವಸ್ಥೆಯ ಫಲವೆಂದರೆ ತಪ್ಪಾಗಲಾರದು. ಇಂತಹ ಪರಿಸ್ಥಿತಿಗಳು ಸಮಯಸಾಧಕರ ಪಾಲಿಗೆ ಅತ್ಯಂತ ಆಪ್ಯಾಯಮಾನವಾಗಿ ಪರಿಣಮಿಸಿವೆ. ನಮ್ಮ ಅಜಾಗರೂಕತೆಯಿಂದಾಗಿಯೇ ಇವತ್ತು ಮಠಮಾನ್ಯಗಳು ಒಂದೆಡೆ ಜಾತಿ ವ್ಯವಸ್ಥೆಯನ್ನು ಪೋಷಿಸಿ ಬೆಳೆಸುತ್ತಾ ಇನ್ನೊಂದೆಡೆ ತಾವೇ ಶಿಕ್ಷಣೋದ್ಯಮದ ದಂಧೆಯಲ್ಲಿ ತೊಡಗಿಸಿಕೊಳ್ಳುತ್ತಾ ಮಗದೊಂದೆಡೆ ರಾಜಕೀಯ ಪುಢಾರಿಗಳು, ಭ್ರಷ್ಟ ಉದ್ಯಮಿಗಳು ಮತ್ತಿತರ ಕಾಳದಂಧೆಕೋರರ ಅಕ್ರಮ ಸಂಪತ್ತನ್ನು ಬಚ್ಚಿಡುವ ಖಜಾನೆಗಳಾಗಿಬಿಟ್ಟಿವೆ. ರಾಜಕಾರಣಿಗಳಿಗೆ ವೋಟ್ ಬ್ಯಾಂಕ್ ಸೃಷ್ಟಿಸುವ ಸುಲಭ ಸಾಧನಗಳಾಗಿವೆ. ಜನಸಾಮಾನ್ಯರಿಗೆ ಧರ್ಮದ ಅಫೀಮನ್ನು ತಿನ್ನಿಸಿ, ಆ ಅಮಲಿನಲ್ಲಿ ಅವರನ್ನು ತೇಲಿಸಿ, ವಿವೇಚನಾಶೂನ್ಯರನ್ನಾಗಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವವರು ಸ್ವಾಮಿಗಳಿರಲಿ, ಇನ್ಯಾರೇ ಇರಲಿ, ಅವರ ವಿರುದ್ಧ ನಾವು ಸದಾ ಎಚ್ಚರಿಕೆಯಿಂದಿರಬೇಕು.

ಇನ್ನು ಗೋಪ್ರೇಮದ ವಿಷಯ. ಪ್ರಮುಖವಾಗಿ ಕೃಷಿಯಲ್ಲಿ ತೊಡಗಿಸಿಕೊಂಡು, ಹೈನುಗಾರಿಕೆಯನ್ನು ಉಪಕಸುಬಾಗಿ ಮಾಡಿಕೊಂಡಿರುವ ಹವ್ಯಕರು ಮತ್ತು ಇತರ ರೈತರು ಜಾನುವಾರುಗಳ ಜೊತೆ ಅವಿನಾಭಾವ ಸಂಬಂಧ ಇರಿಸಿಕೊಂಡವರು. ಹಾಲು, ಗೊಬ್ಬರ ನೀಡಿ ಹೊಲ ಉಳಲು ಸಹಾಯ ಮಾಡುವ ಜಾನುವಾರುಗಳನ್ನು ಪ್ರೀತಿಸುವ ಇವರು ಅವುಗಳ ಬಗ್ಗೆ ಅತಿರೇಕದ ಪ್ರೇಮವನ್ನು ಇಟ್ಟುಕೊಂಡಿಲ್ಲ. ಅನುಪಯುಕ್ತ ಜಾನುವಾರುಗಳನ್ನು ಮಧ್ಯವರ್ತಿಗಳಿಗೆ ಮಾರುವಾಗ ಅವು ಅಂತಿಮವಾಗಿ ಎಲ್ಲಿ ತಲಪುತ್ತವೆಂದು ಗೊತ್ತಿದ್ದುಕೊಂಡೇ ಮಾರುತ್ತಾರೆ. ಹೀಗಿರುವಾಗ ಜಾನುವಾರು ಸಾಗಿಸುವ ಬ್ಯಾರಿಗಳ ಮೇಲೆ ಆರೆಸ್ಸೆಸ್ ಸಂಘಟನೆಗಳು ದಾಳಿ ಮಾಡುವಾಗ ಇವರೆಲ್ಲರೂ ಸುಮ್ಮನಿರುವುದು ಮಾತ್ರ ಎಷ್ಟು ಮಾತ್ರಕ್ಕೂ ಸರಿಯಲ್ಲ.

ಜಾತಿಪದ್ಧತಿ, ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆ, ಲಿಂಗ ಅಸಮಾನತೆಗಳು ಹಿಂದೂ ಸಮಾಜದ ವೈಲಕ್ಷಣ್ಯಗಳಾಗಿವೆ. ತಾವು ಹಿಂದೂ ಸಮಾಜದಲ್ಲಿ ಅತ್ಯುಚ್ಚರೆಂದು ಕರೆದುಕೊಳ್ಳುವ ಬ್ರಾಹ್ಮಣರಲ್ಲೇ ಅತಿ ಹೆಚ್ಚು ಲಿಂಗ ತಾರತಮ್ಯವನ್ನು ಕಾಣಬಹುದು. ವಂಶೋದ್ಧಾರಕರನ್ನು ಹೆರುವುದು, ಗೃಹಿಣಿಯಾಗಿ ಮನೆಗೆಲಸಗಳನ್ನು ನಿಭಾಯಿಸುವುದಕ್ಕಷ್ಟೇ ಸೀಮಿತವಾಗಿ ಹೆಚ್ಚುಕಡಿಮೆ ತೊತ್ತಿನಂತಿದ್ದ ಸ್ತ್ರೀಗೆ ತೀರ ಇತ್ತೀಚಿನವರೆಗೂ ಆಸ್ತಿಯಲ್ಲಿ ಸಮಪಾಲು ಇರಲಿಲ್ಲ. ಹೆಣ್ಣಿಗೆ ಅಲ್ಲಿ ಎರಡನೆ ದರ್ಜೆಯ ಸ್ಥಾನಮಾನ. ವಿಚಾರಣೆಗೂ ಮುನ್ನ ಸ್ತ್ರೀಯತ್ತ ಬೆಟ್ಟು ಮಾಡುವ ಹವ್ಯಾಸ. ಬ್ರಾಹ್ಮಣರ ಒಂದು ವರ್ಗವಾದ ಹವ್ಯಕರಲ್ಲಂತೂ ಭಾಷೆಯಲ್ಲೇ ತಾರತಮ್ಯವನ್ನು ಗುರುತಿಸಬಹುದು. ಹವ್ಯಕ ಭಾಷೆಯಲ್ಲಿರುವುದು ಎರಡೇ ಲಿಂಗ – ಪುಲ್ಲಿಂಗ ಮತ್ತು ನಪುಂಸಕ ಲಿಂಗ. ಅಲ್ಲಿ ಬ್ರಾಹ್ಮಣರು ಮಾತ್ರ 'ಅವನು' ಎಂಬ ಸಂಬೋಧನೆಗೆ ಅರ್ಹರು. ಬ್ರಾಹ್ಮಣೇತರರನ್ನು, ಸ್ತ್ರೀಯರನ್ನು ಮತ್ತು ಇನ್ನಿತರ ಚರಾಚರಗಳನ್ನೆಲ್ಲ ಸಂಬೋಧಿಸುವುದು 'ಅದು' ಎಂಬುದಾಗಿ. ವಿಧವೆಯನ್ನಂತೂ ಅಮಂಗಳೆ ಎಂದೇ ಪರಿಗಣಿಸಲಾಗುತ್ತದೆ. ಸ್ವಾಮಿಗಳಾದವರು ಇಂತಹ ಹತ್ತುಹಲವು ಅನಿಷ್ಟಗಳನ್ನು ತೊಡೆಯುವ ಕೆಲಸ ಮಾಡಿದ್ದರೆ ಗೌರವಕ್ಕೆ ಪಾತ್ರರಾಗುತ್ತಿರಲಿಲ್ಲವೇ? ಆದರೆ ವಾಸ್ತವ ಏನೆಂದರೆ ಸಮಾಜ ಸುಧಾರಣೆಗೂ ಮಠಮಾನ್ಯಗಳಿಗೂ ಎಣ್ಣೆ ಸೀಗೆಕಾಯಿ ಸಂಬಂಧ. ಆದುದರಿಂದ ಸುಧಾರಣೆ ಬಯಸುವವರು ಈ ಗುರು, ಗುರುಪೀಠ, ಮಠ ಇತ್ಯಾದಿಗಳ ಉಪಯುಕ್ತತೆ ಬಗ್ಗೆ ಬಹಳ ಗಂಭೀರವಾಗಿ ಯೋಚಿಸುವ ಸಮಯ ಬಂದಿದೆಯೆಂದು ನನ್ನ ಭಾವನೆ. ಸಮಾಜದಿಂದ ಬಹಿಷ್ಕೃತಗೊಳ್ಳುವ ಭೀತಿಯಿಂದ ಹೊರಬಂದರೆ ಎಲ್ಲವೂ ಸಾಧ್ಯ. ನೆನಪಿರಲಿ, ಸದೃಢ ಭಾರತದ ನಿರ್ಮಾಣಕ್ಕೆ ಇಂದು ಬೇಕಾಗಿರುವುದು ಅಂತರ್ಜಾತೀಯ, ಅಂತರ್ಧರ್ಮೀಯ ವಿವಾಹಗಳು.

ಕೊನೆಯದಾಗಿ ಒಂದು ಕಿವಿಮಾತು. ಮಾಜಿ ಆರೆಸ್ಸೆಸ್ಸಿಗರಾದ ಸಾಹಿತಿ ಪಿ.ಜಿ.ಸಹಸ್ರಬುಧೆ, ವಿಮರ್ಶಕ, ಚಿಂತಕ ಹಾಗೂ ಆರ್ಥಿಕ ತಜ್ಞ ಎಸ್.ಎಚ್.ದೇಶಪಾಂಡೆ, ಲೇಖಕ ಹಾಗೂ ಇತಿಹಾಸಜ್ಞ ಡಿ.ಆರ್.ಗೋಯಲ್, ನ್ಯಾಯವಾದಿ ಎ.ಕೆ.ಸುಬ್ಬಯ್ಯರಂಥವರು ಆ ಸಂಘಟನೆಯ ಬಂಡವಾಳವನ್ನು ಸಂಪೂರ್ಣವಾಗಿ ಬಯಲುಮಾಡಿದ್ದಾರೆ. ಆರೆಸ್ಸೆಸ್‌ಅನ್ನು ಬೆಂಬಲಿಸುವ ಹವ್ಯಕರು ಇನ್ನಾದರೂ ಇಂತಹ ಪುಸ್ತಕಗಳನ್ನು ಓದಬೇಕು. ಆರೆಸ್ಸೆಸ್‌ನ ನೈಜ, ಸಂವಿಧಾನ ವಿರೋಧಿ ಮುಖವನ್ನು ತಿಳಿದುಕೊಳ್ಳಬೇಕು. ಇಂತಹ ಸಂಘಟನೆಗಳಿಂದ ದೂರವಾದಷ್ಟೂ ಅವರಿಗೂ ಕ್ಷೇಮ, ಸಮುದಾಯಕ್ಕೂ ಕ್ಷೇಮ, ನಾಡಿಗೂ ಕ್ಷೇಮ.



■ ಸುರೇಶ್ ಭಟ್ ಬಾಕ್ರಬೈಲ್

ಹೊನ್ನಾವರ

4ನೇ ಪುಟದಿಂದ

ನಾಯ್ಕ್ ಆರಂಭದಲ್ಲಿ ಹೊನ್ನಾವರ ಮುನ್ಸಿಪಾಲ್ಟಿಯ ಹಂಗಾಮಿ ದಿನಗೂಲಿ ಯಾಗಿದ್ದ. ಆಗಲೇ ಹೊನ್ನಾವರ ನಗರದ ಸರ್ಕಾರಿ ಸೈಟ್‌ಗಳ ಹಂಚಿಕೆಯಲ್ಲಿ ಹರಾಮಿತನ ಮಾಡಿ ಸಿಕ್ಕಿಬಿದ್ದಿದ್ದ ಆ ಕೇಸು ಈಗಲೂ ಹೈಕೋರ್ಟ್‌ನಲ್ಲಿದೆ. ಅದಕ್ಕೆ "ಗಣಪತಿ ಭಟ್ ಸೈಟ್ ಸ್ವಾಹಾ" ಎಂದೇ ಜನರು ಅಡ್ಡ ಹೆಸರಿಟ್ಟು ಆರ್.ಪಿ. ನಾಯ್ಕನ ಮಹಿಮೆ ಕೊಂಡಾಡುತ್ತಿದ್ದಾರೆ. ಈತ ಕಾಯಂ ನಗರಾಭಿವೃದ್ಧಿ ಇಲಾಖೆಯ ನೌಕರನೆಂದು ಪರಿಗಣಿಸಲ್ಪಟ್ಟಾಗ ಹಂಗಾಮಿಯಾಗಿ ಚಾಕರಿ ಮಾಡಿದ 10 ವರ್ಷದ ಸರ್ವೀಸ್ ಪರಿಗಣಿಸಬಾರದೆಂದು ಷರತ್ತು ಸರ್ಕಾರ ಹಾಕಿತ್ತು. ಆದರೆ ಆರ್.ಪಿ. ನಾಯ್ಕ್ ಈ 10 ವರ್ಷದ ಸೇವೆ ಸೇರಿಸಿಯೇ ಸೇವಾ ಜ್ಯೇಷ್ಠತೆ ತೋರಿಸಿ ಇಇ ಆಗಿ ಅವತರಿಸಿದ್ದಾನೆ. ಈ ಅವ್ಯವಹಾರ ತನಿಖೆ ಬಂದಾದರೆ ಸಾಕು ಆರ್.ಪಿ. "ಆಟ" ಖತಮ್ ಆಗುತ್ತದೆ!

ಒಂದು ಕಾಲದಲ್ಲಿ ಎರಡೊತ್ತಿನ ಊಟಕ್ಕೆ ತತ್ವಾರ ಆಗಿದ್ದ ಆರ್.ಪಿ. ಇವತ್ತು ಕೋಟಿಗೆ ತೂಗುತ್ತಾನೆ. ಎಮ್ಮೆಲ್ಲೆ-ಮಂತ್ರಿಗೂ ಸೆಡ್ಡು ಹೊಡೆದು ಬೆಂಗಳೂರಿನ ನಗರಾಭಿವೃದ್ಧಿ ಇಲಾಖೆಯಲ್ಲೇ ಸರ್ಕಸ್ ಮಾಡಿ ಬೇಳೆ ಬೇಯಿಸಿಕೊಳ್ಳುತ್ತಾನೆ. ಹಾಗಿದ್ದರೆ ಈ ಲಫಡಾ ಆರ್.ಪಿ.ಗೆ ಪ್ರಳಯಾಂತಕ ಶಕ್ತಿ ಬಂದಿದ್ದಾದರೂ ಹೇಗೆ? 'ಬಿಲ್ಲುಗಾರಿಕೆ' ಇದರ ಹಿಂದಿನ ರಹಸ್ಯ! ಈತ ಇಡೀ ಜಿಲ್ಲೆಯ ಅಷ್ಟೂ ನಗರಾಡಳಿತ ಸಂಸ್ಥೆಗಳ (ಹನ್ನೊಂದು) ಕಾಮಗಾರಿ ಪರಿಶೀಲನೆ ಮಾಡುವ ನಗರಾಭಿವೃದ್ಧಿ ಕೋಶದ ಆಯಕಟ್ಟಿನ ಸ್ಥಾನದಲ್ಲಿದ್ದಾನೆ. ಎಲ್ಲಿಗೇ ವರ್ಗವಾದರೂ ಬೆಂಗಳೂರಿನ ಎಚ್‌ಯುಡಿಯಲ್ಲಿ ಹಣ ಹಾಕಿ ಕಾರವಾರಕ್ಕೆ ವಕ್ಕರಿಸುತ್ತಾನೆ. ಐಎಎಸ್ ಕೇಡರಿನ ಜಿಲ್ಲಾಧಿಕಾರಿ ಗಳಿಗೇ ದಾರಿತಪ್ಪಿಸಿ ಕಾಣಿಕೆ ಫಿಕ್ಸ್ ಮಾಡಿಕೊಳ್ಳುವ ಚಾಲಾಕಿ ಈತ.

ಪ್ರತಿವರ್ಷ ಜಿಲ್ಲೆಯ ಮೂರು ನಗರಸಭೆ, ಎರಡು ಪುರಸಭೆ ಮತ್ತು ಆರು ಪಟ್ಟಣ ಪಂಚಾಯತ್‌ಗಳಿಗೆಂದು ಸುಮಾರು 100-150 ಕೋಟಿ ರೂಪಾಯಿ ಅನುದಾನ ಬರುತ್ತದೆ. ಈ ಕಾಮಗಾರಿಗಳ ಮೇಲುಸ್ತುವಾರಿ ಆರ್.ಪಿ. ನಾಯ್ಕನದು. ಹೀಗಾಗಿ ಆತನಿಗೆ ನಗರಸಭೆಗಳ ಕಮಿಷನರ್‌ಗಳು, ಪಟ್ಟಣ ಪಂಚಾಯ್ತದ ಮುಖ್ಯಾಧಿಕಾರಿಗಳು ಮತ್ತು ಆಸೆಬುರುಕ ಜನಪ್ರತಿನಿಧಿಗಳು ಡೊಗ್ಗು ಸಲಾಮು ಹಾಕಬೇಕಾಗಿದೆ. ಈತ ಸ್ಥಳೀಯ ಸಂಸ್ಥೆಗಳ ದುರ್ಬಲ ದೌರ್ಬಲ್ಯ ಬಳಸಿಕೊಂಡು ತನ್ನ ಸೀಕಡಾ 5 ಕಮೀಷನ್ ಹೊಡೆದುಕೊಳ್ಳುತ್ತಾನೆ. ಇದು ವರ್ಷಕ್ಕೆ ಕಡಿಮೆಯೆಂದರೂ 5-7 ಕೋಟಿ ರೂ. ಈ ಕಳ್ಳ ಕಾಸಿಂದ ಆರ್.ಪಿ. ಮಂತ್ರಿಯಿಂದ ಹಿಡಿದು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಆಯುಕ್ತರನ್ನೆಲ್ಲ ಖರೀದಿಸಿ ಕಾರ್ಯ ಸಾಧಿಸುತ್ತಿದ್ದಾನೆ.

ಆರ್.ಪಿ.ಗೆ ಕಳ್ಳ ದುಡ್ಡಿಡಲು ಈಗ ಜಾಗ ಇಲ್ಲದಾಗಿದೆ. ಹಾಗಾಗಿ ಆತ ತನ್ನ ತವರೂರಲ್ಲಿ ಇಂಡೇನ್ ಗ್ಯಾಸ್ ಏಜೆನ್ಸಿಯ ಬೇನಾಮಿ ಸಾಹುಕಾರನಾಗಲು ಸ್ಕೆಚ್ ಹಾಕಿ ಕಾರ್ಯಾಚರಣೆಗೆ ಇಳಿದಿದ್ದಾನೆ. ರಾಘು ನಾಯ್ಕ್ ಎಂಬ ಸ್ವಜಾತಿಯ ಅಬ್ಬೇಪಾರಿ ಪೋರನ ಮುಂದಿಟ್ಟುಕೊಂಡು ಮಸಲತ್ತು ಮಾಡುತ್ತಿದ್ದಾನೆ. ದುರಂತವೆಂದರೆ, ಲೋಕಾಯುಕ್ತ ಪೊಲೀಸರೂ ಈತ ಹೇಳಿದಂತೆ ಕೇಳುತ್ತಾರೆ. ಈತ ಲೋಕಾಯುಕ್ತ ದವರಿಗೂ ತಾನು ಮಾಮೂಲಿ ಕೊಡುವುದಾಗಿ ಬಹಿರಂಗವಾಗೇ ಹೇಳುತ್ತ ತಿರುಗುತ್ತಿದ್ದಾನೆ. ಹೀಗಾಗಿ ಹೊನ್ನಾವರದ ಅಕ್ರಮ ಗ್ಯಾಸ್ ಏಜೆನ್ಸಿ ಅವಾಂತರದ ಬಗ್ಗೆ ಯಾರೂ ಪ್ರಾಮಾಣಿಕ ತನಿಖೆ ಮಾಡುತ್ತಿಲ್ಲ. ಜಿಲ್ಲಾಡಳಿತ ಈ-ಅನಾಹುತಕಾರಿ ಗ್ಯಾಸ್ ಗೋದಾಮಿನ ಭಯೋತ್ಪಾದನೆ ಕಂಡೂ ಕಾಣದಂತಿರುವುದು ರಾಮತೀರ್ಥ ಪ್ರದೇಶದ ಜನರ ಸಹನೆಯನ್ನು ಕೆಡಿಸುತ್ತಿದೆ. ಜೀವಭಯದಲ್ಲಿ ಶಾಶ್ವತವಾಗಿ ಬದುಕುವ ಅನಿವಾರ್ಯತೆಗೆ ಬದ್ಧರುವ ಜನರೀಗ ಬೀದಿಗಿಳಿದು ಹೊಣೆಗೇಡಿ ಅಧಿಕಾರಿಗಳು ಮತ್ತು ಕಳ್ಳ ಹಣದ ಗ್ಯಾಸ್ ಗೂಂಡಾಗಳಿಗೆ ಪಾಠ ಕಲಿಸಲು ಸಿದ್ಧರಾಗಿದ್ದಾರೆ.

ರಾಮತೀರ್ಥದ ಜನವಸತಿ ಏರಿಯಾದಲ್ಲಿ ಆರ್.ಪಿ. ನಾಯ್ಕನ ಬೇನಾಮಿ ಗ್ಯಾಸ್ ಗೋದಾಮು-ವಿತರಣಾ ಏಜೆನ್ಸಿ ಆರಂಭವಾದರೆ ಸ್ಥಳೀಯರಿಗೆ ಒಂದಲ್ಲ ಒಂದು ಕಿರಿಕಿರಿ-ತೊಂದರೆ ತಪ್ಪಿದ್ದಲ್ಲ. ಸರಿಯಾಗಿ ಅಗ್ನಿಶಾಮಕ ವಾಹನ ಬರುವಷ್ಟು ರಸ್ತೆಯೂ ಇಲ್ಲದ ಈ ಗ್ಯಾಸ್ ವಿತರಣಾ ಘಟಕದಿಂದ ಯಾವ ಘಳಿಗೆಯಲ್ಲಾದರೂ ಯಾವ ತರಹದ್ದಾದರೂ ಅವಘಡ ಘಟಿಸುವ ಸಾಧ್ಯತೆಯಿದೆ. ಗೋದಾಮಿಗೇನಾದರೂ ಬೆಂಕಿ ಹತ್ತಿದರೆ ಇಡೀ ಹೊನ್ನಾವರವೇ ಹೊತ್ತಿ ಉರಿಯಲಿದೆ!!


ಇನ್ನಾದರೂ ಸಂಬಂಧಿಸಿದವರು ಎಚ್ಚೆತ್ತುಕೊಳ್ಳುವರಾ? ಪ್ರಾಕೃತಿಕ ಸೊಬಗಿನ ರಾಮತೀರ್ಥ ನರಕ ಆಗುವ ಮೊದಲೇ ಕಳ್ಳ ಕಾಸಿನ ಪಾಪಿಗಳಿಗೆ ಅಂಕುಶ ಇಡುವರಾ?

■ ನಹುಷ

ಹಂಪಿ ಗೂಂಡಾ ಸ್ವಾಮಿ

5ನೇ ಪುಟದಿಂದ

ಲಕ್ಷ್ಮಿಬಾಯಿ ಸ್ವಾಮಿ ಮತ್ತವನ ಆರ್‌ಎಸ್‌ಎಸ್ ಗೂಂಡಾಗಳ ವಿರುದ್ಧ ದೂರು ನೀಡಲು ಹೋದಾಗ ಹಂಪಿ ಠಾಣೆಯ ಪೊಲೀಸರು ದೂರು ಸ್ವೀಕರಿಸಲಿಕ್ಕೇ ಸಿದ್ಧರಿರಲಿಲ್ಲ. ಅಷ್ಟರಮಟ್ಟಿಗೆ ವಿದ್ಯಾರಣ್ಯ ಸ್ವಾಮಿಯ ಪ್ರಭಾವ ಬಳಕೆಯಾಗಿ



ಸ್ಥಳಕ್ಕೆ ಭೇಟಿ ನೀಡಿದ ಎ.ಸಿ. ಸುನೀಲ್‌ಕುಮಾರ್


ತ್ತು. ಆದರೆ ವಿಷಯ ತಿಳಿಯುತ್ತಿದ್ದಂತೆ ಕೆಲ ದಲಿತ ಮತ್ತು ಸಮಾಜಪರ ಸಂಘಟನೆಗಳು ದೌರ್ಜನ್ಯಕ್ಕೊಳಗಾದ ಕುಟುಂಬದ ಪರ ನಿಂತು ಪೊಲೀಸ್ ಠಾಣೆಯ ಮುಂದೆಯೇ ಶವ ಇಟ್ಟುಕೊಂಡು ಧರಣಿ ಕೂರಬೇಕಾಗಿ ಬಂದಿತ್ತು. ಅಂತೂಇಂತೂ ಕೊನೆಗೆ ರಾತ್ರಿ ಸುಮಾರು 11.30ರ ವೇಳೆಯಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ ನಂತರವಷ್ಟೆ ಶವ ತೆಗೆದು ಅಂತ್ಯಸಂಸ್ಕಾರ ಮಾಡಲಾಯಿತು. ಲಕ್ಷ್ಮೀಬಾಯಿ ದೂರಿನ ಮೇರೆಗೆ ವಿದ್ಯಾರಣ್ಯ ಭಾರತಿ ಸ್ವಾಮೀಜಿ, ಆತನ ಹಿಂಬಾಲಕರಾಗಿರುವ ಆರ್‌ಎಸ್‌ಎಸ್ ಹಿನ್ನೆಲೆಯ ಮಹಾಲಿಂಗ, ವೀರಸ್ವಾಮಿ ಮತ್ತು ಚಂದ್ರ ಇವರುಗಳ ವಿರುದ್ಧ ಕೇಸು ದಾಖಲಾಗಿದೆ.

ಕಪಟ ಸ್ವಾಮೀಜಿ

ವಿದ್ಯಾರಣ್ಯ ಭಾರತೀ ಸ್ವಾಮೀಜಿ ಹಂಪಿಗೆ ವಕ್ಕರಿಸಿ ಹಲವು ವರ್ಷಗಳೇ ಆಗಿವೆ. ಇವನಿಗಿಂತ ಮೊದಲಿನ ಸ್ವಾಮೀಜಿ ಬಗ್ಗೆ ಜನರಲ್ಲಿ ಒಂದಷ್ಟು ಗೌರವವಿತ್ತು, ಆದರೆ ಈತನ ಬಗ್ಗೆ ಬಹುತೇಕ ಜನರಲ್ಲಿ ಒಳ್ಳೆಯ ಅಭಿಪ್ರಾಯವೇ ಇಲ್ಲ. ಹಂಪಿಗೆ ಬಂದುಹೋಗುವ ಭಕ್ತಾದಿಗಳ ಅಪಾರ ಪ್ರಮಾಣ ಕಾಣಿಕೆಯೇ ದೊಡ್ಡ ಮೊತ್ತದ್ದಾಗಿದೆ. ಈ ಕಾಣಿಕೆಯ ಹಣ ಸೋರಿಕೆ ಆಗುತ್ತಿರುವ ಬಗ್ಗೆಯೂ ವಿದ್ಯಾರಣ್ಯ ಸ್ವಾಮೀಜಿಯ ಮೇಲೆ ಗುಮಾನಿಗಳಿವೆ. ಆದರೆ ಬಾಯ್ಬಿಟ್ಟು ಮಾತನಾಡುವ ಧೈರ್ಯವನ್ನು ಯಾರೂ ತೋರಿಸುತ್ತಿಲ್ಲವಷ್ಟೆ. ಬಡ ಕುಟುಂಬಗಳ ಭೂಮಿಯ ಮೇಲೆ ಕಣ್ಣು ಹಾಕಿ ಬಡಜೀವಿಯನ್ನು ಬಲಿತೆಗೆದುಕೊಂಡ ವಿದ್ಯಾರಣ್ಯ ಸ್ವಾಮೀಜಿ ಕಪಟಿಗಳ ಸಾಲಿಗೆ ಸೇರುತ್ತಾನೋ ಇಲ್ಲವೋ ಓದುಗರೇ ಅನಾಯಾಸವಾಗಿ ನಿರ್ಣಯಿಸಿಬಿಡಬಹುದು. ಮಠಗಳು, ದೇವಸ್ಥಾನಗಳು ಜನರ ಪಾಲಿಗೆ ಆಸರೆಯಾಗಬೇಕೇ ಹೊರತು, ಜನರ ಜೀವ ತೆಗೆಯುವ ಯಮದೂತರ ಕೇಂದ್ರಗಳಾಗಬಾರದು.

ಅಸಲಿಗೆ ಮಠಗಳಿಗೆ ಆಸ್ತಿ ವ್ಯಾಮೋಹವಾದರೂ ಏಕೆ ಬೇಕು? ಈ ಆಸ್ತಿಯ ಕಬಳಿಕೆಯ ಆಸೆಯ ಹಿಂದೆ ಯಾವ ಸಂಚು ಅಡಗಿದೆಯೋ ತನಿಖೆಯಿಂದಷ್ಟೇ ಹೊರಬರಬೇಕಿದೆ. ಶಂಕರ್‌ನಾಯ್ಕನ ಸಾವಿನ ಹಿಂದೆ ಸ್ವಾಮಿಯ ಮತ್ತು ಆರ್‌ಎಸ್‌ಎಸ್ ಪಟಾಲಂನ ಕಾನೂನುಬಾಹಿರ ಕೃತ್ಯಗಳು ಕೆಲಸ ಮಾಡಿರುವುದರಿಂದ ಪೊಲೀಸರು ಯಾವುದೇ ರಾಜಕೀಯ ಹಿತಾಸಕ್ತಿಗೆ ಬಲಿಯಾಗದೇ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವ ಮೂಲಕ ಶಂಕರ್‌ನಾಯ್ಕನ ಸಾವಿಗೆ ನ್ಯಾಯ ತುಂಬಿಕೊಡುವರೇ ಕಾದು ನೋಡಬೇಕಾಗಿದೆ. ಆದರೆ ಒಂದಂತೂ ಸ್ಪಷ್ಟವಾಗಿದೆ, ದೇಶಸೇವೆಯ ಹೆಸರಲ್ಲಿ ಉಳ್ಳವರ ಶ್ರೀಮಂತರ ಹಿತಕಾಯುವ ತತ್ವ ಸಿದ್ಧಾಂತದ ಆರ್‌ಎಸ್‌ಎಸ್‌ನವರು ಬಡವರ ಪರವಾಗಿ ಯಾವತ್ತೂ ನಿಲ್ಲುವುದಿಲ್ಲ! ಇವರೇನಿದ್ದರೂ ಸುಳ್ಳು ಮತ್ತು ಮೋಸ, ವಂಚನೆ ಮಾಡುವುದರಲ್ಲಿ ಹಾಗೂ ಹಾಳು ಮಾಡುವುದರಲ್ಲಿ ನಿಸ್ಸೀಮರೆಂದು ಈ ಘಟನೆಯಿಂದಲೇ ಅರ್ಥವಾಗುತ್ತಿದೆ. ಆರ್‌ಎಸ್‌ಎಸ್ ಹುನ್ನಾರಗಳ ಬಗ್ಗೆ ಜನ ಎಚ್ಚರಿಕೆಯಿಂದ ಇರಬೇಕೆಂಬುದನ್ನು ದಲಿತ ರೈತ ಶಂಕರ್‌ನಾಯ್ಕನ ಸಾವು ಸಾರಿಸಾರಿ ಹೇಳುತ್ತಿದೆ.

■ ಕುಮಾರ್ ಸಮತಳ



ಬೆಟ್ಟ ಬಲ್ಲಿತ್ತೆಂದಡೆ, ಉಳಿಯ ಮೊನೆಯಲ್ಲಿ ಬಡತನವಿದ್ದಡೆ ಒಡೆಯದೆ?

ಶರಣರ ವಚನ ಚಳವಳಿಯಿಂದಾಗಿ ಕನ್ನಡ ನೆಲದ 12ನೇ ಶತಮಾನ ಇಂದಿಗೂ ವಿಶ್ವವಿನೂತನವಾಗಿದೆ. ಅದನ್ನು ಅರಿಯದ ಬಹುಪಾಲು ಅನುಯಾಯಿಗಳು ಲಿಂಗಾಯತ ಧರ್ಮವನ್ನು ಹಿಂದೂ ಧರ್ಮದೊಳಗಿನ ಜಾತಿಯಾಗಿಸಿದರು. ಆ ಜಾತಿಯಲ್ಲಿ ಆದಿ, ಬಣಜಿಗ, ಪಂಚಮಸಾಲಿ, ಸಾದರ, ನೊಣಬ, ಕುರುಹಿನಸೆಟ್ಟಿ, ಶಿವಶಿಂಪಿ, ಶೀಲವಂತ, ನೇಕಾರ, ಬಣಗಾರ, ಹಟಗಾರ ಮುಂತಾದ ಹಲವು ಹದಿನೆಂಟು ಉಪಜಾತಿಗಳಾಗಿಸಿಕೊಂಡರು. ಒಟ್ಟಾರೆ 'ಹಿಂದೂ ಲಿಂಗಾಯತ' ಆದರು. ಕಾಲಾನುಕ್ರಮದಲ್ಲಿ ಜಾತಿಮಠಗಳು ಬೆಳೆದು ಸಾವಿರಾರು ಸ್ವಾಮಿಗಳು ಹುಟ್ಟಿಕೊಂಡು ವಚನಚಳವಳಿಯ ಮೊದಲು ಜಾತಿ ಉಪಜಾತಿಗಳಿಂದ ಕೂಡಿದ್ದ ಸಾಮಾಜಿಕ ವ್ಯವಸ್ಥೆಯನ್ನೇ ಮುಂದುವರಿಸಿದರು. ಇಷ್ಟೆಲ್ಲ ಅವಾಂತರಗಳ ಮಧ್ಯೆ ಕೆಲ ಪಲಾಯನವಾದಿಗಳು ಸಮಾಜಮುಖಿಯಾಗದೆ, ಸ್ವಸಂತೋಷದ ಲಿಂಗಧ್ಯಾನವೇ ಮುಖ್ಯವೆಂದು ಸಮಾಜದಲ್ಲಿ ನಿರಂತರವಾಗಿ ನಡೆಯುತ್ತಿರುವ ಶೋಷಣೆಗೆ ವಿಮುಖರಾದರು. ಈ ಎಲ್ಲ ಮಾದರಿಗಳು ಇನ್ನೂ ಮುಂದುವರಿದಿವೆ. ಆದರೆ ಆಧುನಿಕ ಚಿಂತನಾಕ್ರಮಗಳು ಒಂದಿಷ್ಟು ಜನರ ಮೇಲೆ ಪ್ರಭಾವ ಬೀರುತ್ತಿರುವ ಕಾರಣ ಶರಣರು 850 ವರ್ಷಗಳ ಹಿಂದೆಯೆ ಕಂಡುಕೊಂಡ ನಿಜದ ನಿಲುವಿನ ಅರಿವನ್ನು ಹೊಂದುತ್ತಿದ್ದಾರೆ.

ಶರಣರ ಚಳವಳಿ ಹೊಸ ವ್ಯವಸ್ಥೆಯನ್ನು ಜಾರಿಗೊಳಿಸಿತು. ಅದುವೆ ಲಿಂಗವಂತ ಧರ್ಮವಾಗಿ ಹೊಸ ಸಮಾಜದ ನಿರ್ಮಾಣವಾಯಿತು ಎಂಬ ಸತ್ಯವನ್ನು ಜನಮಾನಸದಲ್ಲಿ ಮೂಡಿಸುತ್ತ ಸುಲಿಗೆಯಿಲ್ಲದ ಸಮಾಜ ನಿರ್ಮಾಣಕ್ಕಾಗಿ ಮುಂದಾಗುವುದು ಈ ಕಾಲದ ಲಿಂಗವಂತರ ಮತ್ತು ಪ್ರಜ್ಞಾವಂತರ ನೈತಿಕ ಜವಾಬ್ದಾರಿಯಾಗಿದೆ.


ಶರಣರು ಸಮಾಜಮುಖಿಯಾಗಿದ್ದರು. ಗುರು, ಲಿಂಗ ಮತ್ತು ಜಂಗಮ(ಸಕಲ ಜೀವಾತ್ಮರನ್ನೊಳಗೊಂಡ ಸಮಾಜ)ದ ಪ್ರಜ್ಞೆಯೊಂದಿಗೆ ಅವರು ಶರಣಸಂಕುಲವೆಂಬ ನವಸಮಾಜವನ್ನೇ ನಿರ್ಮಿಸಿ ತೋರಿಸಿದರು. ಎಲ್ಲ ರೀತಿಯ ಸಮಾನತೆಯಿಂದ ಕೂಡಿದ್ದ ಶರಣಸಂಕುಲದಲ್ಲಿ ಬದುಕಿ ತೋರಿಸಿದರು. ಈ ಗುರು, ಲಿಂಗ ಮತ್ತು ಜಂಗಮದಲ್ಲಿ ಸಾಧಿಸಬೇಕಾದುದು ಯಾವುದು ಎಂಬುದನ್ನು ಆ ಕಾಲದ ವಚನಗಳ ಮೂಲಕ ಅರಿತುಕೊಳ್ಳುವುದು ಅವಶ್ಯವಾಗಿದೆ.

ನವಸಮಾಜ ನಿರ್ಮಾಣವೇ ಶರಣರ ಗುರಿಯಾಗಿತ್ತು, ಆ ನವಸಮಾಜವೆಂಬ ಜಂಗಮ (ಸಮಾಜ) ವ್ಯವಸ್ಥೆಗಾಗಿ ಗುರು ಮತ್ತು ಲಿಂಗದ ಅವಶ್ಯಕತೆಯನ್ನು ಅವರು ಬಲ್ಲವರಾಗಿದ್ದರು. ಈ ನಿರ್ಜಾತಿ ಜಂಗಮ ವ್ಯವಸ್ಥೆ ಕಲ್ಯಾಣದಲ್ಲಿ ಶರಣರ ಹತ್ಯಾಕಾಂಡದ ನಂತರದ ಶತಮಾನಗಳಲ್ಲಿ ಜಾತಿಜಂಗಮ ವ್ಯವಸ್ಥೆಯಾಗಿ ನಿರ್ಮಾಣಗೊಂಡ ನಂತರ ಜಂಗಮ ಎಂಬುದು ಗುರುವರ್ಗದ ಕುಲವಾಗಿ, ಲಿಂಗಾಯತ ಒಂದು ಜಾತಿಯಾಗಿ, ಇಷ್ಟಲಿಂಗ ಲಿಂಗಧಾರಿಗಳು ಜಾತಿ ಮತ್ತು ಉಪಜಾತಿಗಳಲ್ಲಿ ಒಡೆದುಹೋದರು. ಲಿಂಗಾಯತ ಒಂದು ಸ್ವತಂತ್ರ ಧರ್ಮ. ಇದು ಕಾಯಕಪ್ರಧಾನ ಧರ್ಮ; ಜಾತಿಪ್ರಧಾನ ಧರ್ಮ ಅಲ್ಲ ಎಂಬುದನ್ನು ಅರ್ಥೈಸಿಕೊಂಡು, ಅದು ಮತ್ತೆ ತನ್ನ ಗತವೈಭವವನ್ನು ಮರಳಿ ಪಡೆಯುವಂತೆ ಮಾಡುವುದೇ ಈ ಕಾಲಘಟ್ಟದ ಲಿಂಗಾಯತರ ಮತ್ತು ಬಸವತತ್ವದಲ್ಲಿ ನಂಬಿಕೆ ಇಟ್ಟವರ ಆದ್ಯ ಕರ್ತವ್ಯವಾಗಿದೆ.

ಈ ಕಾರ್ಯಸಾಧಿಸುವಲ್ಲಿ ಅನೇಕ ತೊಡಕುಗಳಿವೆ. ಅವುಗಳಲ್ಲಿ ಮುಖ್ಯವಾಗಿ ಲಿಂಗಾಯತದಲ್ಲಿನ ಉಪಜಾತಿ ಮಠಗಳು, ಉಪಜಾತಿ ಮಠಗಳು ಎಂದು ಕರೆಯಿಸಿಕೊಳ್ಳದಿದ್ದರೂ ಒಂದೇ ಉಪಜಾತಿಯ ಹಿಡಿತದಲ್ಲಿರುವ ಮಠಗಳು, ಕಾಯಕಜೀವಿಗಳ ಮತ್ತು ಸರ್ವವಿಧದ ಸಮಾನತೆಯ ಸಮಾಜದ ಹಾಗೂ ಕಾಯಕಜೀವಿಗಳ ಅನುಭವದ ಗಂಧವಿಲ್ಲದೆ 'ಅನುಭಾವ, ಅನುಭಾವ' ಎಂದು ಹೇಳುತ್ತ ಬಸವಣ್ಣನವರ ಹೆಸರಿನಲ್ಲಿ ಸಮಿತಿಗಳನ್ನು, ಪ್ರತಿಷ್ಠಾನಗಳನ್ನು ಸ್ಥಾಪಿಸಿಕೊಂಡು ವಚನಚಳವಳಿಯ ಮೂಲ ಉದ್ದೇಶವನ್ನೇ ಬದಿಗೊತ್ತಿ ಬದುಕುತ್ತಿರುವ ಅಕ್ಕ, ಅಣ್ಣ, ಅಪ್ಪ ಮತ್ತು ಅಮ್ಮಗಳು ಬದಲಾಗುವವರೆಗೆ ಶರಣರ ಸಮಾನತೆಯ ಪರಿಕಲ್ಪನೆಯನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವಿಲ್ಲ. ನಡೆ ಮತ್ತು ನುಡಿಗಳಲ್ಲಿ ಭೂಮಿ ಬಾಹ್ಯಾಕಾಶದಷ್ಟು ಅಂತರವಿರುವುದರಿಂದಲೇ ಶರಣರ ತತ್ವಗಳು ಹಾಡುವುದಕ್ಕೆ, ಓದುವುದಕ್ಕೆ, ಭಾಷಣ ಮತ್ತು ಪ್ರವಚನಕ್ಕೆ ಸೀಮಿತವಾಗಿವೆ. ಇಂಥ ವಿಷಮ ಸಂದರ್ಭದಲ್ಲಿ ವಚನಗಳ ನಿಜದ ನೆಲೆಯನ್ನು ಜನಸಮುದಾಯಕ್ಕೆ ತೋರಿಸುವುದರ ಮೂಲಕ ಲಿಂಗಾಯತ ಧರ್ಮದೊಳಗೆ ಮತ್ತು ಹೊರಗೆ ಜನಜಾಗೃತಿಯ ಚಳವಳಿಗಳಾಗುವುದು ಇಂದಿನ ತುರ್ತು ಅವಶ್ಯಕತೆಯಾಗಿದೆ.

ಕೆಲ ವಚನ ಪಂಡಿತರು ಕಾಯಕಜೀವಿಗಳ ಅನುಭವವನ್ನು ಮರೆತು 'ಅನುಭಾವ'ದ ಹೆಸರಿನಲ್ಲಿ ವಚನ ಸಾಹಿತ್ಯ ಮತ್ತು ದುಡಿಯುವ ಜನರ ಬದುಕಿನ ಮಧ್ಯೆ ಕಂದಕವನ್ನು ನಿರ್ಮಿಸುತ್ತಿದ್ದಾರೆ. ವೈದಿಕರ ಅಧ್ಯಾತ್ಮದ ಬೇರುಗಳು ಜನಸಾಮಾನ್ಯರ ಬದುಕಿನಲ್ಲಿರದೆ ಗುಹೆಗಳಲ್ಲಿ, ಅರಣ್ಯಗಳಲ್ಲಿ, ಹಿಮಾಲಯದಲ್ಲಿ ಮತ್ತು ವಿವಿಧ ಏಕಾಂತದ ಸ್ಥಳಗಳಲ್ಲಿ ಇವೆ. ಅಂತೆಯೆ ಬಸವಾದಿ ಶರಣರು ಇಂಥ ಅಧ್ಯಾತ್ಮವನ್ನು ತಿರಸ್ಕರಿಸಿದ್ದಾರೆ. ಕೆಲ ಶರಣರು ಅಧ್ಯಾತ್ಮ ಪದವನ್ನು ತಿರಸ್ಕರಿಸುವ ಉದ್ದೇಶದಿಂದ ಮಾತ್ರ ಬಳಸಿದ್ದಾರೆ. ಯಾವೊಬ್ಬ ಶರಣನೂ ಅಧ್ಯಾತ್ಮವನ್ನು ಎತ್ತಿ ಹಿಡಿದಿಲ್ಲ. ಆದರೆ ಅದಕ್ಕೆ ಪರ್ಯಾಯವಾಗಿ 'ಅನುಭಾವ' ಎಂಬುದನ್ನು ಶರಣತತ್ವದ ಪಾರಿಭಾಷಿಕ ಪದವಾಗಿ ಬಳಸಿದ್ದಾರೆ. ಅಧ್ಯಾತ್ಮವು ಸ್ಥಾವರಲಿಂಗದ ಜೊತೆ ಇದೆ. ಆದರೆ ಅನುಭಾವ ಇಷ್ಟಲಿಂಗದ ಜೊತೆ ಇದೆ. ಕಾಯಕಜೀವಿಗಳ ಅನುಭವವನ್ನು ಅನುಭಾವದ ಮಟ್ಟಕ್ಕೆ ಏರಿಸುವುದರ ಮೂಲಕ ಮನುಷ್ಯ, ಪ್ರಾಣಿ, ಪಕ್ಷಿ ಮತ್ತು ನಿಸರ್ಗದ ಮಧ್ಯೆ ಅವಿನಾಭಾವ ಸಂಬಂಧದ ಅರಿವನ್ನು ಮೂಡಿಸುವುದೇ ಬಸವಣ್ಣನವರ ಉದ್ದೇಶವಾಗಿತ್ತು. ಕಾಯಕಜೀವಿಗಳ ಅನುಭವ; ಆ ಅನುಭವದ ಮೂಲಕ ಅವರ ಕಾಯಕದ ಪರಿಭಾಷೆಯಲ್ಲೇ ವಚನಗಳ ರಚನೆ; ಬದುಕನ್ನು ಪ್ರತಿನಿಧಿಸುವ ಆ ವಚನಗಳು ಸಾಹಿತ್ಯವಾಗಿ, ತತ್ವವಾಗಿ ಮತ್ತು ಕೊನೆಗೆ ಎಲ್ಲ ಒಂದಾಗಿ ದುಡಿಯುವ ವರ್ಗದ ಧರ್ಮವಾಗಿ ರೂಪುಗೊಳ್ಳುವ ಪ್ರಕ್ರಿಯೆ ವಿಶ್ವ ಸಾಹಿತ್ಯದಲ್ಲೇ ಅನನ್ಯವಾಗಿದೆ. ವಿಶ್ವದಲ್ಲಿ ದುಡಿಯುವ ವರ್ಗದ ಮೊದಲ ಸಾಹಿತ್ಯ ವಚನರೂಪದಲ್ಲಿ ರಚನೆಯಾದುದು 12ನೇ ಶತಮಾನದ ಕನ್ನಡದಲ್ಲಿ ಎಂಬುದನ್ನು ಮರೆಯಬಾರದು. ಅದೇರೀತಿ ದುಡಿಯುವ ವರ್ಗದ ತತ್ವಜ್ಞಾನವೂ ಆ ಕಾಲದ ಪರಿಮಿತಿಯಲ್ಲಿ ಕನ್ನಡದಲ್ಲೇ ರೂಪುಗೊಂಡಿತು! ಆ ಮೂಲಕ ದುಡಿಯುವ ವರ್ಗದ ಮೊದಲ ಸಂಘಟನೆ ಕನ್ನಡದ ನೆಲದಲ್ಲೇ ಆಯಿತು. ಅಷ್ಟೇ ಅಲ್ಲ ಕಾಯಕಜೀವಿಗಳು ಬಸವಣ್ಣನವರ ಮಾರ್ಗದರ್ಶನದಲ್ಲಿ ಮತ್ತು ವಿವಿಧ ಕಾಯಕಸಮುದಾಯ ಗಳಿಂದ ಬಂದು ನಾಯಕ ಸ್ಥಾನಗಳಲ್ಲಿದ್ದ ಅಮರಗಣಂಗಳ ನೇತೃತ್ವದಲ್ಲಿ ಶರಣಸಂಕುಲ ಎಂಬ ವಿಶ್ವದಲ್ಲೇ ಅನನ್ಯವಾದ ವರ್ಗರಹಿತ ಸಮಾಜದ ನಿರ್ಮಾಣವಾಯಿತು! ಬಸವಣ್ಣನವರು ದುಡಿಯುವ ಜನರನ್ನು ಮೊದಲ ಬಾರಿಗೆ ಒಂದುಗೂಡಿಸಿದವರು. ಆ ಮೂಲಕ 'ಎಲ್ಲರಿಗಿಂತಲೂ ಕಿರಿಯ' ಎಂಬುದನ್ನು ಕಾಯಾ, ವಾಚಾ, ಮನಸಾ ಪಾಲಿಸಿದ ಬಸವಣ್ಣನವರು ದುಡಿಯುವ ವರ್ಗದ ಪ್ರಥಮ ನಾಯಕರಾದರು! ಈ ಬಸವ ನಾಯಕರು ಜನಸಾಮಾನ್ಯರ ಅನುಭವದ ಮೂಲಕ ಅನುಭಾವ ಎಂಬ ತತ್ವಜ್ಞಾನದ ಜನಕರಾದರು. ಕಾಯಕಜೀವಿಗಳ ಅನುಭವ ಎಂಬುದು ಮಕರಂದದಂತೆ. ಆ ಎಲ್ಲರ ಅನುಭವವನ್ನು ಅನುಭವಮಂಟಪದಲ್ಲಿ ಒಂದಾಗಿಸಿ ಅನುಭಾವ ಎಂಬ ಜೇನು ತಯಾರಿಸಿದವರು ಬಸವಣ್ಣನವರು. ಆದ್ದರಿಂದ ಅದು ಅನುಭವ ಮಂಟಪವೇ ಹೊರತು ಅನುಭಾವ ಮಂಟಪವಲ್ಲ. ನೀಲಾಂಬಿಕೆಯವರು 'ಅನುಭವಮಂಟಪವನನು ಮಾಡಿ ಅನುಭವಮೂರ್ತಿಯಾದ ನಮ್ಮ ಬಸವಯ್ಯನು' ಎಂದು ತಿಳಿಸಿದ್ದಾರೆ. ಅನುಭಾವವನ್ನು ಅನುಭವದಿಂದ ಬೇರ್ಪಡಿಸುವುದು ಮತ್ತು ಆ ಮೂಲಕ ದುಡಿಯುವ ವರ್ಗವನ್ನು ದೂರ ಇಟ್ಟು ಅನುಭಾವದ ಮಾತನಾಡುತ್ತ ಬದುಕು ಸಾಗಿಸುವುದು ಶರಣ ಚಳವಳಿಗೆ ಮಾಡುವ ದ್ರೋಹವಾಗುತ್ತದೆ.

ಕಾಯಕ, ಪ್ರಸಾದ, ದಾಸೋಹ, ಗುರು, ಲಿಂಗ, ಜಂಗಮ, ಅನುಭವ, ಅನುಭಾವ, ಭಕ್ತಿ, ಅರಿವು, ಆಚಾರ ಮುಂತಾದ ಪಾರಿಭಾಷಿಕ ಪದಗಳು ಮತ್ತು ಶಬ್ದಗಳು ಅವೈದಿಕ ಬಸವಧರ್ಮದ ಜೀವಾಳಗಳಾಗಿವೆ. ಇವುಗಳನ್ನು ಬೇರ್ಪಡಿಸಿ ನೋಡುವಾಗ ಅವೈದಿಕದಲ್ಲಿ ವೈದಿಕ ಸೇರುತ್ತ ಹೋಗುತ್ತದೆ ಎಂಬ ಪರಿಜ್ಞಾನ ಕೂಡ ಅನುಭಾವವನ್ನು ಪ್ರತ್ಯೇಕವಾಗಿ ನೋಡ ಬಯಸುವವರಿಗೆ ಇಲ್ಲವಾಗಿದೆ. ಇದೊಂದು ಧಾರ್ಮಿಕ ದುರಂತವೇ ಸರಿ.



ಲಿಂಗವಂತ ಧರ್ಮ ಎಂಬ ಬಸವಧರ್ಮಕ್ಕೆ ಕಾಯಕವೇ ತಾಯಿಬೇರು. ಕಾಯಕದಿಂದ ಬಂದುದನ್ನು ದೇವರ ಪ್ರಸಾದ ಎಂದು ಸ್ವೀಕರಿಸುವುದೇ ಸರ್ವಸಮತ್ವದ ಮನಸ್ಥಿತಿಯ ಭಕ್ತಿಭಾವ. ದೇವರಿಂದ ಪಡೆದುದನ್ನು ದೇವರ ಕಾಣುವ ರೂಪವಾದ ಸಮಾಜಕ್ಕೆ ಅರ್ಪಿಸಬೇಕೆಂಬ ಸಾಮಾಜಿಕ ಪ್ರಜ್ಞೆಯಿಂದ ಮೂಡಿದುದೇ ದಾಸೋಹಂಭಾವ. ಗುರು, ಲಿಂಗ ಮತ್ತು ಜಂಗಮದಲ್ಲಿ ಜೀವಜಗತ್ತಿನ ಜಂಗಮವೇ ಎಲ್ಲವನ್ನೂ ಒಳಗೊಂಡಿದೆ ಎಂಬುದನ್ನು ಸೂಚಿಸುವುದೇ ಅನುಭವದಿಂದ ಹೊರಹೊಮ್ಮಿದ ಅನುಭಾವ. ಈ ಅನುಭಾವದ ಅರಿವನ್ನು ಆಚರಣೆಯಲ್ಲಿ ತರುವುದೇ ಬಸವಧರ್ಮದ ಗುರಿ. ಈ ಗುರಿಯ ಕುರಿತು ಬಸವಾದಿ ಶರಣರು ನೂರಾರು ವಚನಗಳನ್ನು ರಚಿಸಿದ್ದರೂ ನಮ್ಮ ಅನುಭವವಿಲ್ಲದ ಅನುಭಾವವಾದಿಗಳು ಜಾಣ ಕುರುಡರಾಗುವುದರ ಮೂಲಕ ಯಥಾಸ್ಥಿತಿವಾದಿಗಳಾಗಿದ್ದಾರೆ. ಕೆಲ ಸ್ವಾಮಿಗಳಂತೂ ಧನದಾಸೆಗಾಗಿ, ಭಾರತದ ತುಂಬ ಗುಡಿಗುಂಡಾರ ಸುತ್ತುತ್ತ ಹೋಮಹವನಗಳಲ್ಲಿ ದಿನ ಕಳೆಯುವ ಲಿಂಗಾಯತ ರಾಜಕೀಯ ನಾಯಕರನ್ನು ಓಲೈಸುವುದರಲ್ಲೇ ತಲ್ಲೀನರಾಗಿದ್ದಾರೆ. ಆ ಮೂಲಕ ಬಸವಾದಿ ಶರಣರಿಗೆ ಅಪಮಾನ ಮಾಡುತ್ತಿದ್ದಾರೆ.

ಕಾಯಕಜೀವಿ ನುಲಿಯ ಚಂದಯ್ಯ ಮುಂತಾದ ವಚನಕಾರರ ವಚನಗಳು ಇಂಥ ಜನರ ಬೂಟಾಟಿಕೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಬಹಳ ಸಹಕಾರಿಯಾಗಿವೆ ಮತ್ತು ಅನುಭಾವದ ಮೂಲ ಅನುಭವದಲ್ಲಿದೆ ಎಂಬುದನ್ನು ಸಾಬೀತುಪಡಿಸುತ್ತವೆ. ಜಂಗಮವೇ (ಸಮಾಜವ) ಬಹುಮುಖ್ಯ ಎಂಬುದನ್ನು ಸಾರಿ ಹೇಳುತ್ತವೆ.

ಗುರುಪೂಜಕರು ಲಿಂಗವನೆತ್ತ ಬಲ್ಲರು?
ಲಿಂಗಪೂಜಕರು ಜಂಗಮವನೆತ್ತ ಬಲ್ಲರು?
ಜಂಗಮದಾಸೋಹವೆಂಬುದು ಉಭಯದ ಸಂಗಸ
ಚಂದೇಶ್ವರಲಿಂಗವೆಂಬ ಲಿಂಗದ ಪೂಜೆ.

– ನುಲಿಯ ಚಂದಯ

ಗುರು, ಲಿಂಗ ಮತ್ತು ಜಂಗಮದ ಅರ್ಥವ ನಿರ್ಣಾಯಕವಾಗಿ ಈ ವಚನ ಸಾರುತ್ತದೆ. ಗುರುವಿ ಪೂಜೆ ಮಾಡುವವರಿಗೆ ಇಷ್ಟಲಿಂಗದ ಜ್ಞಾನವಾಗುವುದಿ ಅನುಭಾವ ಅನುಭಾವ ಎನ್ನುತ್ತ ಇಷ್ಟಲಿಂಗದ ಪೂಜೆಯ ಕಾಲ ಕಳೆಯುವವರಿಗೆ ಜಂಗಮ ಎಂಬ ಜೀವಜಗತ್ತಿ ಅರಿವು ಉಂಟಾಗುವುದಿಲ್ಲ. ದಾಸೋಹಂಭಾವದಿಂದ ಕೂ ಕ್ರಿಯಾಶೀಲವಾಗಿರುವ ಅರಿವು-ಆಚಾರದ ಅಂದರೆ ನಡೆನು ಸಿದ್ಧಾಂತದ ಪ್ರಕಾರ ಸಕಲಜೀವಾತ್ಮರಿಗೆ ಲೇಸನೇ ಬಯಸು ಕ್ರಿಯಾಶೀಲವಾಗುವ ಜಂಗಮತತ್ವದ ಅರಿವಿನಲ್ಲಿ ಗುರು ಮತ್ತು ಲಿಂಗ ಒಂದಾಗಿಹೋಗುತ್ತವೆ. ಇದನ್ನೆಲ್ಲ ಬಿಟ್ ಗುರುವಿಗೆ ಮತ್ತು ನಂತರ ಲಿಂಗಕ್ಕೆ ಅಂಟಿಕೊಂಡು ಜಗತ್ ನೋವು ನಿವಾರಿಸುವಲ್ಲಿ ಕ್ರಿಯಾಶೀಲವಾಗದೆ ಬದುಕುವವ ನಿಷ್ಪ್ರಯೋಜಕರು ಎಂದು ನುಲಿಯ ಚಂದಯ್ಯನವ ಸೂಚಿಸಿದ್ದಾರೆ. ಜೀವಜಗತ್ತಿನ ಸೇವೆಯೇ ನಿಜವಾ ಇಷ್ಟಲಿಂಗ ಪೂಜೆ ಎಂಬುದನ್ನು ಸೂಚಿಸಿದ್ದಾರೆ.

ಈ ಅರಿವು ಇಲದ ವಿರಕ್ತರನ್ನು 'ವಿರಕ್ತ ವಿರಕ್ತ ಎಂ ಹಾದಿಕಾರರ ವಿರಕ್ತರೆನ್ನಬಹುದೆ? ಕಾವಿಯ ಹೊದ ತಿರುಗುವ ಜೀವಗಳ್ಳರು ವಿರಕ್ತರೆ?' ಎಂದು ಅಮು ರಾಯಮ್ಮ ಛೇಡಿಸಿದ್ದಾರೆ. ಶರಣರು ಕಾವಿ ಸಂಸ್ಕೃತಿಯನ್ ತಿರಸ್ಕರಿಸಿ ಕಾಯಕ ಸಂಸ್ಕೃತಿಯನ್ನು ಎತ್ತಿ ಹಿಡಿದವರ ಶರಣರಿಗೂ ಕಾವಿಗೂ ಎಣ್ಣೆ ಸೀಗೆಕಾಯಿ ಸಂಬಂಧ. ಆದ ಸಂಸಾರಿಗರಾಗಿದ್ದ ವಿಶ್ವಗುರು ಬಸವಣ್ಣನವರಿಗೂ ಸ್ವಾಮಿಗ ಕಾವಿ ತೊಡಿಸಿ ಅವರ ಭಾವಚಿತ್ರ ಬರೆಸಿದರು. ಹಿ ಕಳೆದ ಐದಾರು ನೂರು ವರ್ಷಗಳಿಂದ ಶರಣತತ್ವ ಮೇಲೆ ದಾಳಿ ನಡೆಯುತ್ತಲೇ ಇದೆ. ಇಷ್ಟಲಿಂಗದ ಅರಿ ಮತ್ತು ಜಂಗಮಲಿಂಗದ ಪ್ರಜ್ಞೆಯ ಮೇಲೆ ಕಾಯಕಜೀವಿಗಳ ಧರ್ಮ ನಿಂತಿದೆ. ಇಷ್ಟಲಿಂಗ ಅರಿವೆಂದರೆ ಇಷ್ಟಲಿಂಗದ ಮೂಲಕ ತನ್ನಂತೆ ಪರ ಬಗೆಯುವ ಅರಿವನ್ನು ಪಡೆಯುವುದು. ಆ ಮೂಲ ಜೀವಜಗತ್ತಿಗೂ ತನಗೂ ಮತ್ತು ಸೃಷ್ಟಿಕರ್ತನಿಗೂ ಇರು ಅಭೇದ್ಯ ಸಂಬಂಧವನ್ನು ಅರಿತುಕೊಳ್ಳುವುದು. ಸಕಲಜೀ ಗಳಿಂದ ಕೂಡಿರುವ ಲೋಕಾತ್ಮ ಮತ್ತು ಪರಮಾತ್ಮನೊಂದಿ ಜೀವಾತ್ಮವು ಸಮ್ಮಿಳಿತವಾಗಿದೆ ಎಂಬ ಸತ್ಯದೊಂದಿ ಜಂಗಮಲಿಂಗದ ಪ್ರಜ್ಞೆಯನ್ನು ಹೊಂದುವುದು. ಪ್ರಜ್ಞೆಯೊಂದಿಗೆ ಮೂಡುವ ಸಮತತ್ವದೊಂದಿಗೆ ಪ್ರಕಾರದ ಅಸಮಾನತೆಯ ವಿರುದ್ಧ ಹೋರಾಡುತ್ತ ಅರಿವ ಆಚರಣೆಯಲ್ಲಿ ತರುವುದು. ಈ ಜವಾಬ್ದಾರಿಯಿಂ ನುಸುಳಿಕೊಂಡು ಕಾವಿ ಹೊತ್ತು ತಿರುಗುವ ಜೀವಗಳ್ ವಿರಕ್ತರೆ ಎಂದು ಆಯ್ದಕ್ಕಿ ಲಕ್ಕಮ್ಮ ಪ್ರಶ್ನಿಸಿದ್ದಾರೆ.

ಕೆಲವು ಸ್ವಾಮಿಗಳಂತೂ ಜಾತಿಗೊಬ್ಬ ಸ್ವಾಮಿಯ ಮಾಡಿ ಪ್ರಸಿದ್ಧರಾಗಲು ಹೋಗಿ ಫಜೀತಿಗೆ ಒಳಗಾದ 'ಹೊನ್ನಾಸೆಗೆ ಹದಿನೆಂಟು ಜಾತಿಯ ಭಕ್ತರ ಮಾಡಿ, ಲಿಂ ಕೊಟ್ಟು ಲಿಂಗದ್ರೋಹಿಯಾದ' ಎಂದು ಮಡಿವ ಮಾಚಿದೇವರು ಇಂಥವರ ಕುರಿತೇ ಹೇಳಿದ್ದಾರೆ. ದ ವೇಶ್ಯೆಯರ ಮಕ್ಕಳು ಕೂಡ ಶಿವದೀಕ್ಷೆಯಾದ ಬ ಶಿವಸ್ವರೂಪಿಗಳೇ ಆಗುತ್ತಾರೆ. ಜಾತಿ, ವರ್ಗ, ಮೇ ಕೀಳು ನಾಶವಾಗಿ ಎಲ್ಲರೂ ಒಂದೇ ಸ್ಥಾನವ ಹೊಂದುತ್ತಾರೆ ಎಂದು ಬಸವಣ್ಣನವರು ಪ್ರತಿಪಾದಿಸಿದ 'ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದಿ (ಇಷ್ಟಲಿಂಗದೀಕ್ಷೆ)ಯಾದ ಬಳಿಕ ಸಾಕ್ಷಾತು ಶಿವನೆಂದು ವಂ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ' ಎಂ ಬಸವಣ್ಣನವರು ಸಾರಿದ್ದಾರೆ. ಹೀಗೆ ಎಲ್ಲ ರೀತಿ ಶೋಷಣೆಗಳಿಂದ ಮುಕ್ತವಾದ ನವಸಮಾಜ ನಿರ್ಮಾ ಮಾಡುವುದೇ ಬಸವಣ್ಣನವರ ಅಂತಿಮ ಗುರಿಯಾಗಿ ಅಂತೆಯೆ ಬಸವಣ್ಣನವರು 'ಇನ್ನು ಜಂಗಮವೇ ಲಿಂಗವೆ ನಂಬಿದೆ' ಎಂದು ಹೇಳುವ ಮೂಲಕ 'ಸಮಾಜ ದೇವರು' ಎಂಬ ದೃಢನಿರ್ಧಾರವನ್ನು ವ್ಯಕ್ತಪಡಿಸಿ ಆದರೆ ಜಾತಿಗೊಬ್ಬ ಸ್ವಾಮಿಯನ್ನು ಸೃಷ್ಟಿಸಿ ಮಹಾಸ್ವಾಮಿಗಳು ಬಸವಣ್ಣನವರ ತತ್ವಕ್ಕೆ ತಿಲಾಂ ಯನ್ನಿಟ್ಟು ಅವರ ಮೂರ್ತಿಗಳನ್ನು ನಿರ್ಮಾಣ ಮಾ ಯಥಾಸ್ಥಿತಿವಾದಿಗಳಾಗಿ ಉಳಿಯುವಲ್ಲೇ ತಲ್ಲೀನರಾಗಿ 'ಜಂಗಮ ನಮಸ್ಕಾರವೆ ಗುರುಪೂಜೆ. ಜಂಗಮಪೂಜೆ ಲಿಂಗಪೂಜೆ' ಎಂದು ನುಲಿಯ ಚಂದಯ್ಯನ ಸಮಾಜಸೇವೆಯ ಬಗ್ಗೆ ಒತ್ತುಕೊಟ್ಟು ಹೇಳಿ ಮರೆತಿದ್ದಾರೆ. ಗುರುವಾದರೂ ಸಮಾಜಕ್ಕಾಗಿ ಇಷ್ಟಲಿಂಗವಾದರೂ ಸಮಾಜಕ್ಕಾಗಿಯೇ ಎಂಬು ಚಂದಯ್ಯ ಸ್ಪಷ್ಟಪಡಿಸಿದ್ದಾರೆ.

...ಫ ಸಮಾಜಮುಖಿ ಧರ್ಮವನ್ನು ಅನೇಕ ...ಳು ಪಾದಪೂಜೆ, ಪಾದೋದಕ, ಇತರ ...ಬಣ್ಣಾರಗಳ ಬಗ್ಗೆ ಉಪದೇಶಿಸುತ್ತಿದ್ದಾರೆ. ಜಾಣರು ... ಪದವಾದ ಸ್ಪಿರಿಚಲಿಸಂ ಬಳಸುತ್ತ ...ಸುತ್ತಿದ್ದಾರೆ. ಏಕದೇವೋಪಾಸನೆಯ ಲಿಂಗವಂತ ...ಲ್ಲಿ ಇಷ್ಟಲಿಂಗ ಪೂಜೆಯೊಂದೇ ಇದೆ. ಇನ್ನು ...ಜೆ ಎಲ್ಲಿಂದ ಬಂತು ಎಂಬುದರ ಕುರಿತು ...ವುದು ಇಂದಿನ ಅವಶ್ಯಕತೆಯಾಗಿದೆ. ಪಾದಪೂಜೆ ...ಜ್ಞಾನಪೂಜೆ. ಪಾದ ಎಂಬ ಶಬ್ದಕ್ಕೆ ಅಡಿ ಎಂಬ ...ಮಾತ್ರ ಇಲ್ಲ, ಕಿರಣ, ಹೊಳವು ಎಂಬ ಅರ್ಥಗಳೂ ...ಗಾಯತ ಧರ್ಮದಲ್ಲಿ ಪಾದದ ಪಾರಿಭಾಷಿಕ ...ದರೆ ಜ್ಞಾನ. ಶರಣರು ಈ ಪಾದ ಶಬ್ದವನ್ನು ...ದ ಹಿನ್ನೆಲೆಯಲ್ಲಿ ಬಳಸಿರುವಂತೆಯೆ ಲಿಂಗವಂತ ... ಪಾರಿಭಾಷಿಕ ಅರ್ಥದ ಹಿನ್ನೆಲೆಯಲ್ಲಿ ಕೂಡ ...ರೆ. 'ಪಾದೋದಕವೆಂಬುದು ಲಿಂಗಕ್ಕೆ ...ದುದು' ಎಂದು ಚೆನ್ನಬಸವಣ್ಣನವರು ತಿಳಿಸಿದ್ದಾರೆ. ...ಯಲ್ಲಿ ಪಾದಪೂಜೆ ಎಂಬುದು ಜ್ಞಾನಪೂಜೆ ...ತ್ತದೆ. ಆ ಜ್ಞಾನಪೂಜೆಯೆ ಇಷ್ಟಲಿಂಗಪೂಜೆ. ...ಬುದು ಇಷ್ಟಲಿಂಗಪೂಜಾಫಲ. 'ಲಿಂಗವ ಪೂಜಿಸಿ ...ಲೆಯಲ್ಲಾ ಸಮರತಿ, ಸಮಕಳೆ, ...ವನರಿಯದನ್ನಕ್ಕ?' ಎಂದು ಬಸವಣ್ಣನವರು ...ರೆ. ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದ ...ದೇವರ ಜೊತೆ ಒಂದಾಗುವ ರಹಸ್ಯವನ್ನು ...ವರು ಈ ವಚನದಲ್ಲಿ ಭೇದಿಸಿದ್ದಾರೆ. ಆದರೆ ...ಮಿಗಳು ಭಕ್ತರಿಂದ ಪಾದಪೂಜೆ ಮಾಡಿಸಿಕೊಳ್ಳುತ್ತ ...ಧನೆಯಲ್ಲೇ ತಲ್ಲೀನರಾಗಿದ್ದಾರೆ. ಬೆಂಜ್ ಕಾರು, ... ಪ್ರೂಫ್ ಕಾರು ಮುಂತಾದ ಅತ್ಯಾಧುನಿಕ ...ಲ್ಲಿ ತಿರುಗುತ್ತ ಭಕ್ತರ 'ಉದ್ಧಾರ' ಮಾಡುತ್ತಿದ್ದಾರೆ!

...ಲಿಂಗ ಪೂಜೆಯಿಂದಲೇ ಮುಕ್ತಿ ಎಂಬುದನ್ನು ...ದನ್ನು ಅಮುಗೆ ದೇವಯ್ಯನವರು ಅಲ್ಲಗಳೆದಿದ್ದಾರೆ. ...ದಿನೆದಡೆ ಭವ ಹಿಂಗೂದೆಂಬ ವಿವರಗೇಡಿಗಳ ...ಳಲಾಗದು. ಹೇಳದಿರಯ್ಯಾ, ಜ್ಯೋತಿಯ ನೆನೆದಡೆ ...ವುದೆ?' ಇಷ್ಟಲಿಂಗಪೂಜೆ ಇರುವುದು ಆತ್ಮ, ... ಮತ್ತು ಪರಮಾತ್ಮರ ಸಂಬಂಧವನ್ನು ...ವುದಕ್ಕೆ. ಆ ಮೂಲಕ ಲೋಕಹಿತ ಕಾರ್ಯಗಳನ್ನು ...ಬೇಕಾದ ಮಾನಸಿಕ ಶಕ್ತಿಯನ್ನು ಸಂಪಾದಿಸುವುದಕ್ಕೆ. ...ನ್ನು ಸಂಪಾದಿಸುವುದಕ್ಕಲ್ಲ. 'ಕೂಡಲಸಂಗನ ... ಅಚ್ಚಲಿಂಗೈಕ್ಯರು' ಎಂದು ಬಸವಣ್ಣನವರು ...ರೆ. ಜೀವಿತಾವಧಿಯಲ್ಲೇ ದೇವರು ಮತ್ತು ...ತ್ತಿನ ಜೊತೆ ಒಂದಾಗಿ ಮುಕ್ತಿಯನ್ನು ಸಂಪಾದಿಸಿ ...ವಣರು. 'ನಿನ್ನಲ್ಲಿ ನೀ ತಿಳಿದು ನೋಡಾ, ಜಗವು ...ದಾತ ನಮ್ಮ ಅಂಬಿಗ ಚೌಡಯ್ಯನು' ಎಂದು ...ಚೌಡಯ್ಯನವರು ಹೇಳಿದ್ದಾರೆ. ಇಷ್ಟಲಿಂಗಯೋಗದ ಮೂಲಕ ಸಾಧಿಸಬೇಕಾದುದು ಇದನ್ನೇ.

'ಲಿಂಗಸಾಧಕರೆಲ್ಲ ಭೂಭಾರಕರಾದರು. ಕೂಡಲಚೆನ್ನಸಂಗಮದೇವಾ ನಿಮ್ಮ ಬಸವಣ್ಣ ಜಂಗಮಸಾಧಕನಾಗಿ ಸ್ವಯಂಲಿಂಗವಾದನು.' ಎಂದು ಚೆನ್ನಬಸವಣ್ಣನವರು ಹೇಳುತ್ತಾರೆ. ಆನಂದಮಯವಾದ ಜೀವಜಗತ್ತನ್ನು ರೂಪಿಸುವವರಿಗೆ ಜಂಗಮಸಾಧಕರು ಎನ್ನುತ್ತಾರೆ. ಬಸವಣ್ಣನವರು ಅಂಥ ಜಂಗಮಸಾಧಕರಾಗಿದ್ದರೇ ಹೊರತು. ಲಿಂಗಸಾಧನೆಯನ್ನೇ ಮಾಡುತ್ತ ಭೂಭಾರಕರಾಗಲಿಲ್ಲ. ಇಷ್ಟಲಿಂಗ ಸಾಧನೆ ಎನ್ನುವುದು ಮನಸ್ಸನ್ನು ಸದೃಢಗೊಳಿಸುವ ವ್ಯಾಯಾಮ ಶಾಲೆ. ಜಂಗಮ ಸಾಧನೆ ಎನ್ನುವುದು ಬದುಕೆಂಬ ಕುಸ್ತಿಯ ಕಣದಲ್ಲಿ ಜಯಶಾಲಿಯಾಗುವುದು. ಜೀವನವಿಡೀ ವ್ಯಾಯಾಮಶಾಲೆಯಲ್ಲೇ ಕಳೆದರೆ ಏನು ಪ್ರಯೋಜನ. ಕುಸ್ತಿಯ ಕಣದಲ್ಲಿ ಜಯಶಾಲಿಯಾಗುವುದಕ್ಕಲ್ಲವೆ ವ್ಯಾಯಾಮಶಾಲೆಯಲ್ಲಿ ವ್ಯಾಯಾಮ ಮಾಡುವುದು? ಬಸವಣ್ಣ ಎಂದರೆ ಬದುಕೆಂಬ ಕುಸ್ತಿಯ ಕಣದಲ್ಲಿ ಗೆದ್ದ ಮಹಾವೀರ.




ಅನುಭಾವ ಎಂಬುದು ಏಕಾಂತದಲ್ಲಿ ಬರುವಂಥದ್ದಲ್ಲ. ಲೋಕವೇ ತಾನಾಗುವುದರ ಮೂಲಕ ಮತ್ತು ಜಗತ್ತಿನ ನೋವನ್ನು ತನ್ನ ನೋವಾಗಿಸಿಕೊಳ್ಳುವುದರ ಮೂಲಕ ಬರುವಂಥದ್ದು. ಅಂತೆಯೆ 'ಲೋಕವೇ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ ಚೆನ್ನಮಲ್ಲಿಕಾರ್ಜುನಾ?' ಎಂದು ಅಕ್ಕಮಹಾದೇವಿ ಪ್ರಶ್ನಿಸುತ್ತಾರೆ. ಹೀಗೆ ಅವರು ಇಡೀ ಜೀವಸಂಕುಲವನ್ನು ತಮ್ಮೊಳಗೆ ತುಂಬಿಕೊಳ್ಳುತ್ತಾರೆ. 'ಗುರುವಿಂಗೆ ಪರಮಗುರು ಜಂಗಮವೆಂದುದು ಕೂಡಲಸಂಗಯ್ಯನ ವಚನ' ಎಂದು ಬಸವಣ್ಣನವರು ಹೇಳುತ್ತಾರೆ. ಜೀವಜಗತ್ತೇ ನಮಗೆ ಎಲ್ಲವನ್ನೂ ಕಲಿಸುವ ಪರಮಗುರು ಎಂದು ಬಸವಣ್ಣನವರು ಸೂಚಿಸುತ್ತಾರೆ. 'ಜಲ ತಪ್ಪಿದ ಮತ್ಸ್ಯ ಬದುಕೂದೇ ಸೋಜಿಗ; ಗಣತಿಂಥಿಣಿಯೊಳಗೆ ಇರಿಸೆನ್ನ ಲಿಂಗವೆ' ಎಂದು ಹಂಬಲಿಸುತ್ತಾರೆ. ಬಸವಣ್ಣನವರು ಬದುಕನ್ನು ಪ್ರೀತಿಸಿದ ಕ್ರಮ ಇದು. ಜನಸಮುದಾಯದ ಜೊತೆ ಬಸವಣ್ಣನವರು ಒಂದಾಗಿ ಹೋಗಿದ್ದರು. ವೈಯಕ್ತಿಕ ಎನ್ನುವುದು ಅವರಿಗೆ ಇರಲೇ ಇಲ್ಲ. ಅವರ ಪ್ರಕಾರ ಎಲ್ಲವೂ ಸಮಾಜದ ಸ್ವತ್ತು. ಇದು ನನ್ನದು ಎಂದು ಅವರು ಹೇಳಲಿಲ್ಲ. ಎಲ್ಲವೂ ನಮ್ಮದು ಎಂಬ ಪಾಠ ಕಲಿಸಿದರು. ಇಡೀ ಸೃಷ್ಟಿ ಇಲ್ಲಿರುವ ಸಕಲಜೀವಾತ್ಮರದು ಎಂದು ಹೇಳಿದರು. ಸಕಲಜೀವಿಗಳ ಲೇಸನ್ನೇ ಬಯಸುವ ಮೂಲಕ ಜೀವಜಾಲಸಮತೋಲನದ ಪಾಠ ಕಲಿಸಿದರು. ಈ ಭೂಮಿಯ ಮೇಲೆ ಮನುಷ್ಯರಿಗಿರುವ ಹಕ್ಕಿನಷ್ಟೇ ಹಕ್ಕು ಎರೆಹುಳು ಮೊದಲು ಮಾಡಿ ಸಕಲಜೀವಿಗಳಿಗೂ ಇದೆ ಎಂದು ಪ್ರತಿಪಾದಿಸಿದರು.

ಜಗತ್ತಿನ ಎಲ್ಲವೂ ಸಕಲಜೀವಾತ್ಮರಿಗೆ ಸಂಬಂಧಿಸಿದುದು ಎಂಬ ಜ್ಞಾನವೇ ಲಿಂಗಜ್ಞಾನ. ಈ ಜ್ಞಾನದ ಮೂಲಕ ಸಮಾಜ ಎಂದರೆ ಹೇಗಿರಬೇಕು ಎಂಬುದರ ಅರಿವನ್ನು ಪಡೆಯಬೇಕು ಎಂದು ಹೇಳಿದ ಮೊದಲ ಸಮತಾವಾದಿ ನಮ್ಮ ಬಸವಣ್ಣನವರು. 'ಲಿಂಗವ ಪೂಜಿಸುತ್ತ ಜಂಗಮದ ಮುಖವ ನೋಡುತ್ತಿಪ್ಪ ಸುಖವ ಕೊಡು, ಕಂಡಾ ಲಿಂಗವೆ' ಎಂದು ಬಸವಣ್ಣನವರು 'ಲೋಕದ ಸುಖ ತಮ್ಮ ಸುಖ, ಲೋಕದ ದುಃಖ ತಮ್ಮ ದುಃಖ' ಎಂಬುದನ್ನು ಬದುಕಿ ತೋರಿಸಿದ ವಿಶ್ವಮಾನವರಾಗಿದ್ದಾರೆ.

'ಲಿಂಗಪಿಡಿದು ಜಂಗಮವಾಪುದೆಂದರಿಯಬೇಕು' ಎಂದು ಆದಯ್ಯನವರು ತಿಳಿಸುತ್ತಾರೆ. ಲಿಂಗಜ್ಞಾನವು ಎಂಥ ನವಸಮಾಜದ ನಿರ್ಮಾಣ ಮಾಡಬೇಕೆಂಬುದನ್ನು ತಿಳಿಸುವ ಜ್ಞಾನವೇ ಆಗಿದೆ ಎಂಬುದನ್ನು ತಿಳಿಸಿದ್ದಾರೆ. 'ಸಮತೆ ಎಂಬುದೆ ಯೋಗ ನೋಡಾ' ಎಂದು ಹಾವಿನಾಳ ಕಲ್ಲಯ್ಯನವರು ತಿಳಿಸುತ್ತಾರೆ. ಹೀಗೆ ಶರಣರೆಲ್ಲರು ಸಮಾನತೆಯಿಂದ ಕೂಡಿದ ಮಾನವೀಯ ಸಮಾಜವೊಂದರ ನಿರ್ಮಾಣಕ್ಕಾಗಿ ಕಾಯಕ, ಪ್ರಸಾದ, ದಾಸೋಹ, ಗುರು, ಲಿಂಗ, ಜಂಗಮ, ಅನುಭವ, ಅನುಭಾವ, ಅರಿವು, ಆಚಾರ, ಇಷ್ಟಲಿಂಗ, ಯೋಗ, ಭಕ್ತಿ ಮುಂತಾದ ಪದಗಳನ್ನು ಬಳಸಿದ್ದಾರೆಯೆ ಹೊರತು ಹೊಸ ಧರ್ಮಸ್ಥಾಪನೆಯ ಹಟದಿಂದ ಬಳಸಿಲ್ಲ. ಶರಣರ ಚಳವಳಿಯೊಂದು ಸಲ್ಲಲಿತ ಸನ್ಮಾರ್ಗವಾಗಿದೆ. ಅದುವೆ ಧರ್ಮವಾಗಿ ರೂಪಗೊಂಡಿದೆ.

ಶರಣರು ಭೌತಿಕ ಬಡತನವನ್ನು ಮೆಟ್ಟಿನಿಂತು ಮನೋಬಲವನ್ನು ಹೊಂದಿದ್ದರು. ಅಂಥ ಮನೋಬಲದಿಂದ ಶೋಷಣೆಯ ಸಮಾಜವನ್ನು ನಿರ್ನಾಮ ಮಾಡಿ ಸುಂದರ ಸಮಾಜ ನಿರ್ಮಾಣ ಮಾಡುವ ಹೋರಾಟದ ಶಕ್ತಿಯನ್ನೂ ಸಂಪಾದಿಸಿದರು. 'ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ? ಬೆಟ್ಟ ಬಲ್ಲಿತ್ತೆಂದಡೆ, ಉಳಿಯ ಮೊನೆಯಲ್ಲಿ ಬಡತನವಿದ್ದಡೆ ಒಡೆಯದೆ?' ಎಂದು ಆಯ್ದಕ್ಕಿ ಲಕ್ಕಮ್ಮನವರು ಪ್ರಶ್ನಿಸುತ್ತಾರೆ. ಬೆಟ್ಟ ಎಷ್ಟೇ ಬಲಿಷ್ಠವಾಗಿದ್ದರೂ ಅದನ್ನು ಚೂಪಾದ ಉಳಿಗಳಿಂದ ಒಡೆಯಬಹುದು ಎಂದು ಅವರು ಕಾಯಕಜೀವಿಗಳ ಒಗ್ಗಟ್ಟಿನ ಮಹತ್ವವನ್ನು ಸಾರಿದ್ದಾರೆ. ಕಾಯಕಜೀವಿಗಳು ಚೂಪಾದ ಉಳಿಗಳಿದ್ದಂತೆ. ಅಸಮಾನತೆಯ ಸಮಾಜ ಬಲಿಷ್ಠ ಬೆಟ್ಟದಂತೆ. ಆ ಮೂಲಕ ನವಸಮಾಜದ ಪರಿಕಲ್ಪನೆಯನ್ನು ಮೂಡಿಸುತ್ತಾರೆ. ಶರಣರ ಬಡತನವೆಂಬುದು ಉಳಿಯ ಮೊನೆಯಲ್ಲಿ ಇರುವ ಬಡತನ. ಆ ಬಡತನ ಬಹಳ ಚೂಪಾಗಿರುತ್ತದೆ. ಇಂಥ ಉಳಿಗಳು ಒಂದಾದಾಗ ಎಂಥ ಬೆಟ್ಟವನ್ನೂ ಒಡೆದು ಹಾಕಬಹುದು.

ಲಿಂಗಭೇದ, ಜಾತಿಭೇದ ಮತ್ತು ವರ್ಗಭೇದಗಳಿಂದ ಕೂಡಿರುವ ವೈದಿಕ ಸಮಾಜವನ್ನು ಕೊನೆಗಾಣಿಸಿ ಸರ್ವಸಮತ್ವದ ಅವೈದಿಕ ಶರಣಸಮಾಜ ನಿರ್ಮಾಣ ಸಾಧ್ಯ ಎಂಬುದನ್ನು ಲಕ್ಕಮ್ಮನವರು 850 ವರ್ಷಗಳಿಂದ ಹೇಳಿದ್ದನ್ನೇ ಕಾರ್ಲ್ ಮಾರ್ಕ್ಸ್ ಅವರು 19ನೇ ಶತಮಾನದಲ್ಲಿ 'ದುಡಿಯುವ ಜನರು ಈ ಜಗತ್ತನ್ನು ಆಳುತ್ತಾರೆ' ಎಂದು ಹೇಳಿದ್ದಾರೆ.



● ರಂಜಾನ್ ದರ್ಗಾ

ನಿಲ್ದಾಣದ ಪಾದಗಳ ಮೇಲೆ ಬರೆದ ಋಣದ ಸಾಲು

...ತ್ತು ಬೆಚ್ಚಗೆ ತನ್ನ ಮನೆಯಲ್ಲಿ ಮಲಗಿರಲಿ
...ರೈಲು ನಿಲ್ದಾಣವೇ ಇರಲಿ
... ಅನಾಮಿಕನಿಗೆ ಸುಖವಿದೆ
...ಗಳು ನನ್ನಂಥವರೇ ಇದ್ದಾರೆ
...ಗೆ ಬಿದ್ದ ಜನಕ್ಕೆ
...ಷ್ಟು ಬೆಳಕಿದೆ
... ಸಿಬ್ಬಂದಿಗೆ ನಾವು
...ವಾಗಿದ್ದೇವೆ
...ರ ಸಾವಿರ ರಾತ್ರಿಗಳನ್ನು
... ಈ ಮೆಟ್ಟಿಲ ಮೇಲೆ
...ದ್ದೇನೆ.

...ಸ್ಯಸು ಗುರುತು
...ಯುವುದು ಬೇಡ
...ಇಲ್ಲದೇ ಬದುಕುವ
...ಗಿಯೇ ನಾನು
...ಗೆ ಬಿದ್ದಿದ್ದೇನೆ
... ಕಳ್ಳರ ಸುಲಿಗೆಕೋರರ
...
...ದರೆ ನಮಗೆ ಏನೂ ಇಲ್ಲ
... ಮಳೆ ರಾತ್ರಿಯಲ್ಲಿಯೂ
... ಅರ್ಥ ಹರಿದ ಹೊದಿಕೆ
...
... ಸುರಿ, ಎದ್ದು ಹೋದವರು
... ನಮಗೆ
... ಹೇಳುವವನಾಗಿಲ್ಲ,

ನಿಲ್ದಾಣದ ರಾತ್ರಿಗಳೇ ಚಂದ
ಹಗಲು ನಮಗೆ ತುಂಬ
ಹಿಂಸೆಯಾಗುತ್ತದೆ ಯಾಕೆಂದರೆ
ನಾಗರಿಕ ಸಮಾಜ ಆಗ
ಎದ್ದಿರುತ್ತದೆ


ಕೆಲವು ಪೊಲೀಸರಿಗೂ
ಕರುಣೆ ಇದೆ
ಯಾಕೆಂದರೆ ದಿನಗಳ ಸಾವಿರ ಹಾಡನ್ನು
ಅವರ ಚಿತ್ತದ ಮೇಲೆ ಬರೆಯಲಾಗಿದೆ.



ನಾವು ಜವಾಬ್ದಾರಿ ಇಲ್ಲದ ಜನ
ಸಮಾಜ ನಮಗೆ
ಅನಾಥವೆಂಬ ರಸೀದಿ ನೀಡಿದೆ
ನಮ್ಮ ಯಾರ ಬಳಿಯೂ
ಆ ರಸೀದಿ ಇಲ್ಲ
ಆ ಖಾಲಿ ಹಾಳೆಯನ್ನು ನಾವು ಎಂದೊ
ಬಿಸಾಕಿದ್ದೇವೆ
ಈ ಹಗಲು ಸೂರ್ಯನಂಥ
ಶನಿ ಮತ್ತೊಬ್ಬನಿಲ್ಲ
ಯಾಕೆಂದರೆ ಈತ ಜಗತ್ತನ್ನು ಎಬ್ಬಿಸಿ
ನಮ್ಮ ಪ್ರೀತಿಯ ಕತ್ತಲೆಗೆ
ಅನ್ಯಾಯ ಮಾಡುತ್ತಾನೆ.

ಲಕ್ಷಲಕ್ಷ ಪಾದಗಳು ಈ ನೆಲವನ್ನು
ಮುಟ್ಟಿವೆ
ಸಂಭ್ರಮ ಸಾವು ದುಃಖ ವಿರಹ
ಆಲಿಂಗನ ಎಲ್ಲವನ್ನೂ ಈ ನೆಲ
ಕಂಡಿದೆ ಆದರೆ
ಯಾರನ್ನೂ ಗುರುತು ಹಿಡಿಯುವುದಿಲ್ಲ
ನಮ್ಮನ್ನು ಮಾತ್ರ ಪ್ರೀತಿಯಿಂದ
ಹೆಸರಿಟ್ಟು ಕರೆಯುತ್ತದೆ.
ಅದಕ್ಕೆ ನಾವು ಈ ನೆಲಕ್ಕೆ
ಋಣಿಯಾಗಿದ್ದೇವೆ.

● ಬಸವರಾಜ ತೂಗಾರ



ನರಭಕ್ಷಕನ ಉಗಮಕ್ಕೆ ಯಾರು ಕಾರಣ



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಉಷ್ಣವಲಯದ ಕಾಡುಗಳಲ್ಲಿ ಓಡಾಡಿದವರಿಗೆ ಹುಣ್ಣಿಮೆಯ ಬೆಳಕು ಬೆಟ್ಟ ಮತ್ತು ಕಣಿವೆಗಳ ಮೇಲೆ ಪಸರಿಸಿದಾಗ ಮೂಡುವ ಸೌಂದರ್ಯದ ಬಗೆಗೆ ಹೇಳಬೇಕಾಗಿಲ್ಲ, ಕಾಡಿನ ಹುಲ್ಲು ಮತ್ತು ದೈತ್ಯ ಮರಗಳ ಪ್ರತಿಯೊಂದು ಎಲೆಯ ಮೇಲೂ ಹರಡಿಕೊಳ್ಳುವ ಬೆಳ್ಳಿ ಬೆಳಕು, ಮರದ ಕೆಳಗೆ ನೆರಳಿನ ಹಂದರವನ್ನು ಸೃಷ್ಟಿಸಿರುತ್ತದೆ. ಅಂತಹ ನೆರಳಿನಲ್ಲಿ ಆಹಾರಕ್ಕಾಗಿ ಅರಸುತ್ತಾ ಇರುವ ಯಾವುದೋ ದುಷ್ಟಪ್ರಾಣಿಯೋ, ನಿರಂತರ ಎಚ್ಚರದಲ್ಲಿರುವ ಜಿಂಕೆಯೋ, ಹೊಂಚುಹಾಕಿ ಕುಳಿತಿರುವ ಸರೀಸೃಪಗಳೋ ಇರಬಹುದು ಎನ್ನುವ ಅಂಶ ಕಾಡಿನ ನಿಗೂಢತೆಯನ್ನು ಹೆಚ್ಚಿಸುತ್ತದೆ.

ಅಂದು ಜೌಳಗಿರಿಯ ಅರಣ್ಯದಲ್ಲಿ ಎಲ್ಲವೂ ಶಾಂತವಾಗಿದ್ದಂತೆ ಮೇಲುನೋಟಕ್ಕೆ ಅನ್ನಿಸಿದರೂ, ಅಪಾಯ ಎಲ್ಲಾ ಕಡೆ ಹರಡಿಕೊಂಡಿತ್ತು. ಹಳೆಯ ಮಾದರಿಯ ಬಂದೂಕುಗಳನ್ನು ಹೊಂದಿದ್ದ ಮೂರು ಜನ ಕಾಡುಗಳ್ಳರು ಆಹಾರಕ್ಕಾಗಿ ಬೇಟೆಯಾಡಲು ನಿರ್ಧರಿಸಿದ್ದರಿಂದ ಪ್ರಾಣಿಗಳ ಕೊಲೆ ಯಾವಾಗಲಾದರೂ ಆಗಬಹುದಿತ್ತು. ಹಳ್ಳವೊಂದರ ದಂಡೆಯ ಇಳಿಜಾರಿನಲ್ಲಿ ಬುದ್ಧಿವಂತಿಕೆಯಿಂದ ಮಾಡಿಕೊಂಡಿದ್ದ ಮರೆಯಲ್ಲಿ ಸೂರ್ಯ ಮುಳುಗಿದಾಗಿನಿಂದ ಕುಳಿತು, ದಾಹವನ್ನು ನೀಗಿಸಿಕೊಳ್ಳಲು ಹಳ್ಳಕ್ಕೆ ಬರಬಹುದಾದ ಜಿಂಕೆಯನ್ನು ಬೇಟೆಯಾಡಲು ಮೈಯೆಲ್ಲಾ ಕಣ್ಣಾಗಿಸಿಕೊಂಡು ಕಾಯುತ್ತಿದ್ದರು.

ಸಮಯ ಕಳೆದಂತೆ ಚಂದ್ರ ಪೂರ್ಣ ರೂಪದಲ್ಲಿ ನೆತ್ತಿಯ ಮೇಲೆ ಪ್ರಕಾಶಿಸತೊಡಗಿದ. ಆಗ ಎಡಗಡೆಯಿದ್ದ ದಟ್ಟವಾದ ಹಸಿರು ಪೊದೆಗಳಿಂದ ತೀವ್ರವಾಗಿ ಎಲೆಗಳು ಕುಲುಕಾಡಿದ ಮತ್ತು ಆಳವಾದ ಗುಟುರುಗಳ ಶಬ್ದ ಕೇಳಿಬಂತು. ಓಹ್ ಇದು ಕಾಡುಹಂದಿಯೇ ಇರಬೇಕು, ಒಂದು ಪುಷ್ಕಳ ಭೋಜನಕ್ಕೆ ಸಾಕಾಗಿ ಮಾರಾಟ ಮಾಡಲು ಮಿಕ್ಕುವಷ್ಟು ಮಾಂಸವನ್ನು ಒದಗಿಸಿಬಲ್ಲದು ಇದು! ಕಾಡುಗಳ್ಳರು ಆ ಪ್ರಾಣಿ ಪೊದೆಗಳಿಂದ ಹೊರಬರುವುದನ್ನೇ ಕಾಯತ್ತಿದ್ದರು. ಯಾವುದೋ ಕಾರಣಕ್ಕೆ ಸಾಕಷ್ಟು ಹೊತ್ತು ಆ ಪ್ರಾಣಿ ಕಣ್ಣಿಗೆ ಕಾಣದಿದ್ದಾಗ ಗುಂಪಿನ ಗುರಿಕಾರನಾದ ಮುನಿಯಪ್ಪ, ತನ್ನ ತುಪಾಕಿಯ ಬಂದೂಕನ್ನು ಚಲಾಯಿಸಲು ನಿರ್ಧರಿಸಿದ. ಮರದ ನೆರಳಿನಲ್ಲಿ ಕಂಡುಬಂದ ದಟ್ಟವಾದ ಇನ್ನೊಂದು ನೆರಳನ್ನು ಗುರಿಯಾಗಿಟ್ಟುಕೊಂಡು ತುಪಾಕಿಯನ್ನು ಹಾರಿಸಿದ. ತಕ್ಷಣ ದೊಡ್ಡದಾದ ಘರ್ಜನೆ, ತೀವ್ರವಾಗಿ ಹೊಯ್ದಾಡಿದ ಎಲೆಗಳ ಸದ್ದು ಮತ್ತು ಜೋರಾಗಿ ಕೆಮ್ಮಿದಂತಹ "ವೂಫ್.." ಎನ್ನುವ ಸದ್ದುಗಳು ಕೇಳಿಬಂದು ನಂತರ ಮೌನ ಆವರಿಸಿಕೊಂಡಿತು.

ಆ ಪ್ರಾಣಿ ಕಾಡುಹಂದಿಯಾಗಿರದೆ ಹುಲಿಯಾಗಿತ್ತು, ಇದನ್ನು ಅರಿತು ಭಯಭೀತರಾದ ಕಾಡುಗಳ್ಳರು ಸದ್ದಿಲ್ಲದೆ ಊರಕಡೆ ಓಡಿದರು. ರಾತ್ರಿಯೆಲ್ಲಾ ತಮ್ಮ ಕೃತ್ಯದ ಪರಿಣಾಮಗಳ ಬಗೆಗೆ ಆತಂಕದಿಂದ ಕಳೆದರು.

ಮರುದಿನ ಬೆಳಗ್ಗೆ ನೋಡಿದಾಗ ಎಲ್ಲವೂ ಆ ಕ್ಷಣಕ್ಕೆ ಸುಖಾಂತ್ಯವಾದಂತೆ ಕಂಡಿತು. ಏಕೆಂದರೆ ಸುಮ್ಮನೆ ಹಾರಿಸಿದ್ದ ತುಪಾಕಿ, ಯೌವ್ವನದಲ್ಲಿದ್ದ ಆ ಗಂಡು ಹುಲಿಯ ಹೃದಯವನ್ನು ನೇರವಾಗಿ ಹೊಕ್ಕು ಅದನ್ನು ಕೊಂದಿತ್ತು, ಹಾಗಾಗಿ ಅವತ್ತಿನ ಮಟ್ಟಿಗೆ ಮುನಿಯಪ್ಪ ಮತ್ತು ಅವನ ಸ್ನೇಹಿತರು ಹಳ್ಳಿಯ ಅನಭಿಷಿಕ್ತ ವೀರಪುರುಷರಾದರು!

ಆದರೆ ಮರುದಿನ ರಾತ್ರಿ ಹೊಸ ಸನ್ನಿವೇಶವೊಂದು ಅನಾವರಣಗೊಂಡಿತು. ಸೂರ್ಯ ಮುಳುಗಿದ ನಂತರ ಸತ್ತ ತನ್ನ ಗಂಡು ಸಂಗಾತಿಗಾಗಿ ಹೆಣ್ಣುಹುಲಿಯೊಂದರ ಕೋಪದ ಕರೆ ಕೇಳಿಬಂತು. ಅದು ಹುಲಿಗಳ ಮಿಲದ ಕಾಲವಾಗಿದ್ದು ಆ ಹೆಣ್ಣು ಹುಲಿ ತನ್ನ ಸಂಗಾತಿಯನ್ನು ಹಿಂದಿನ ರಾತ್ರಿಯಷ್ಟೇ ಹುಡುಕಿಕೊಂಡಿತ್ತು, ಕಾರಣವೇ ಇಲ್ಲದೆ ಗಂಡು ಹುಲಿ ಕಣ್ಮರೆಯಾಗಿದ್ದಕ್ಕೆ ಅದು ನ್ಯಾಯವಾಗಿಯೇ ಮನುಷ್ಯ ಜೀವಿಯನ್ನು ಹೊಣೆಯಾಗಿಸಿತ್ತು, ಮುಂದಿನ ಒಂದು ವಾರ ಆ ಹೆಣ್ಣು ಹುಲಿ ತೀವ್ರ ಅಸಹನೆಯಿಂದ ಅಲೆಯುತ್ತಲೇ ಇತ್ತು. ಹಗಲಿನ ಹೊತ್ತು ಅರಣ್ಯದ ಮಧ್ಯದಿಂದ ಮತ್ತು ರಾತ್ರಿಯಾದ ಮೇಲೆ ಹಳ್ಳಿಯ ಹೊರವಲಯದಿಂದಲೇ ಅದರ ಘರ್ಜನೆಗಳು ಕೇಳಿಬರುತ್ತಿದ್ದವು.

ಜಾಕ್ ಲಿಯೋನಾರ್ಡ್ ಎನ್ನುವ ಯುವಕನೊಬ್ಬ ಊರಿನವರ ಆಗ್ರಹದ ಕರೆಯ ಮೇರೆಗೆ ಹುಲಿ ಶಿಕಾರಿಗಾಗಿ ಬಂದ. ಗಂಡುಹುಲಿಯ ಸಾವಿನ ಎಂಟನೆಯ ದಿನ ಬೆಳಗ್ಗೆ ಬಂದ ಅವನು ಅಲ್ಲಿನ ಪರಿಸ್ಥಿತಿಯ ಮಾಹಿತಿ ಪಡೆದುಕೊಂಡ. ಅರಣ್ಯ ವಸತಿ ಗೃಹಕ್ಕೆ ಹೋಗುತ್ತಿದ್ದ ದಾರಿಯಲ್ಲಿ ಹುಲಿಯ ಹೆಜ್ಜೆ ಗುರುತುಗಳನ್ನು ನೋಡಿದ ಅವನು ಅವತ್ತು ಸಂಜೆ ತನ್ನ ಅದೃಷ್ಟ ಪರೀಕ್ಷೆ ಮಾಡಲು ನಿರ್ಧರಿಸಿದ. ಆ ದಾರಿಯ ಪಕ್ಕದಲ್ಲಿದ್ದ ಒಂದು ಸಣ್ಣ ದಿಬ್ಬದ ಮರೆಯಲ್ಲಿ ಸಂಜೆ 5 ಗಂಟೆಗೆ ಹೋಗಿ ಅವಿತುಕೊಂಡ.

ಸಮಯ ಕಳೆಯುತ್ತಾ ಸುಮಾರು 6.15ಕ್ಕೆ ಕತ್ತಲು ಆವರಿಸತೊಡಗಿತು. ಆಗ ಪೊದೆಗಳು ಅಲ್ಲಾಡಿದ ಮತ್ತು ಅವನ ಬಲಗಡೆ ಇದ್ದ ದಂಡೆಯ ಇಳಿಜಾರಿನಲ್ಲಿ ಕಲ್ಲೊಂದು ಉರುಳಿದ ಸದ್ದು ಕೇಳಿಸಿತು. ಕಣ್ಣನ್ನು ಕಿರಿದಾಗಿಸಿಕೊಂಡು ಹುಡುಕಿದರೂ ಹುಲಿ ಲಿಯೋನಾರ್ಡ್‌ಗೆ ಕಾಣಲಿಲ್ಲ, ನಿಮಿಷಗಳು ಉರುಳಿದ ಮೇಲೆ ಆ ಹಾದಿಯಲ್ಲಿ ಇವನಿದ್ದ ಕಡೆಯತ್ತ ಹುಲಿ ವೇಗವಾಗಿ ನಡೆದು ಬರುತ್ತಿರುವುದನ್ನು ಲಿಯೋನಾರ್ಡ್ ಗಮನಿಸಿದ. ತಕ್ಷಣ ಬಂದೂಕನ್ನು ತನ್ನ ಎಡಭುಜಕ್ಕೆ ವರ್ಗಾಯಿಸಿಕೊಂಡು ಹುಲಿಯನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಾಗುವಷ್ಟು ಮರೆಯಿಂದ ಹೊರಬಂದು ಅದರ ಎದೆಗೆ ಗುರಿಯಿಟ್ಟು ಗುಂಡನ್ನು ಹಾರಿಸಿದ. ಸ್ವಲ್ಪವೇ ಬಲಭಾಗಕ್ಕೆ ಹಾರಿದ್ದರೆ ಆ ಗುಂಡೇಟು ಹುಲಿಗೆ ಪ್ರಾಣಾಂತಿಕವಾಗಬಹುದಿತ್ತು.

ದುರದೃಷ್ಟದಿಂದ ಲಿಯೋನಾರ್ಡ್‌ನ ಗುಂಡು ಹುಲಿಯ ಬಲಭುಜಕ್ಕೆ ತಗುಲಿತ್ತು, ದೊಡ್ಡದಾಗಿ ಘರ್ಜಿಸಿದ ಹುಲಿ ಕಾಡಿನ ಕಡೆಗೆ ಓಡಿಹೋಯಿತು. ಬಹಳ ಬೇಸರಗೊಂಡ ಅವನು ಮರುದಿನ ಬೆಳಗ್ಗೆಯವರೆಗೆ ಕಾದು ಹುಲಿಯ ಜಾಡನ್ನು ಹುಡುಕಿಕೊಂಡು ಹೊರಟ. ರಕ್ತವು ಸಾಕಷ್ಟು ಕಡೆ ಚೆಲ್ಲಿದ್ದರೂ, ಬಂಡೆಗಳು ಮತ್ತು ದಟ್ಟವಾದ ಅರಣ್ಯದ ಮಧ್ಯೆ ಅದರ ಗುರುತನ್ನು ಹಿಡಿದು ಹೋಗಲಾಗದೆ ಲಿಯೋನಾರ್ಡ್ ಹುಲಿಯ ಸುಳುಹುಗಳನ್ನು ಗುರುತಿಸುವುದರಲ್ಲಿ ಸೋತಿದ್ದ.

ತಿಂಗಳುಗಳೇ ಕಳೆಯಿತು. ಆಗ ರಂಗಸ್ಥಳ ಜೌಳಗಿರಿಯಿಂದ ಎಂಟು ಮೈಲು ದೂರದಲ್ಲಿ ಕಾಡಿನ ಮಧ್ಯೆ ಇದ್ದ ಸುಲೆಕುಂಟ ಎನ್ನುವ ಹಳ್ಳಿಗೆ ವರ್ಗಾಯಿಸಲ್ಪಟ್ಟಿತು. ಸುತ್ತಲಿನ ಊರಿನ ಭಕ್ತರು ಹೋಗುತ್ತಿದ್ದ ಒಂದು ಹಳೆಯ ದೇವಸ್ಥಾನ ಸುಲೆಕುಂಟದಲ್ಲಿ ಇತ್ತು, ಗಂಡಹೆಂಡತಿ ಮತ್ತು ಹದಿನಾರು ವರ್ಷದ ಮಗನಿದ್ದ ಕುಟುಂಬ ಒಂದು ದಿನ ಪೂಜೆಯನ್ನು ಮುಗಿಸಿಕೊಂಡು ಹಿಂತಿರುಗುತ್ತಿತ್ತು, ದೇವಾಲಯದಿಂದ ಕಾಲು ಮೈಲು ದೂರದಲ್ಲಿದ್ದ ಹಳೆಯ ಹುಣಸೆ ಮರವನ್ನು ಅವರು ಹಾದುಹೋಗುವಾಗ, ಆ ಹುಡುಗ ಹುಣಸೆಕಾಯಿಯನ್ನು ತಿನ್ನುವ ಆಸೆಯಿಂದ ಅದನ್ನು ಕೊಯ್ಯಲು ನಿಂತ. ಮುಂದೆ ಹೋಗುತ್ತಿದ್ದ ತಂದೆತಾಯಿಗಳಿಗೆ ಒಂದು ಗುಟುರು ಮತ್ತು ನೋವಿನ ಕರ್ಣಭೇದಕ ಕೂಗುಗಳು ಕೇಳಿಸಿತು. ಹಿಂತಿರುಗಿ ನೋಡಿದಾಗ ಅವರ ಒಬ್ಬನೇ ಮಗನನ್ನು ಹುಲಿಯೊಂದು ದವಡೆಯಲ್ಲಿ ಕಚ್ಚಿಕೊಂಡು ಕಾಡಿನ ಕಡೆ ಜಿಗಿದು ಮರೆಯಾಗಿದ್ದು ಅವರಿಗೆ ಕಂಡಿತು. ಆ ವೃದ್ಧ ದಂಪತಿಗಳು ಹುಲಿಗೆ ಶಾಪ ಹಾಕತೊಡಗಿದರು. ಮತ್ತೆರಡು ಬಾರಿ ಆ ಹುಡುಗನ ನೋವಿನ ಕರೆ ಕೇಳಿದ ಮೇಲೆ ಕಾಡಿನಲ್ಲಿ ಮೌನ ಆವರಿಸಿತು.





ಜೌಳಗಿರಿಯ ಅರಣ್ಯ ಪ್ರದೇಶ

ಕೊಲೆಗಳ ಸರಮಾಲೆಯೇ ಶುರು!

ಅಲ್ಲಿಂದ ಕೊಲೆಗಳ ಸರಮಾಲೆಯೇ ಶುರುವಾಯಿತು. ಸುಮಾರು ನಲವತ್ತು ಮೈಲುಗಳ ಉದ್ದಗಲದಲ್ಲಿ ಈ ನರಭಕ್ಷಕ ಸುಮಾರು 15 ಜನರನ್ನು ಬಲಿತೆಗೆದುಕೊಂಡಿತು. ಆಗ ಹೊಸೂರಿನಲ್ಲಿ ಸಬ್‌ಕಲೆಕ್ಟರ್ ಆಗಿದ್ದ ನನ್ನ ಸ್ನೇಹಿತನಿಂದ ಹುಲಿಯಿಂದ ಆ ಜಾಗವನ್ನು ಮುಕ್ತಗೊಳಿಸಲು ನನಗೆ ತುರ್ತು ಕರೆ ಬಂದಿತು.

ತಕ್ಷಣ ಜೌಳಗಿರಿಗೆ ಪ್ರಯಾಣ ಬೆಳೆಸಿದ ನಾನು ವಿಷಯ ಸಂಗ್ರಹಣೆಗೆ ತೊಡಗಿದೆ. ತನ್ನ ಸಂಗಾತಿಯನ್ನು ಕಾಡುಗಳ್ಳರಿಂದ ಕಳೆದುಕೊಂಡು ನಂತರ ಲಿಯೋನಾರ್ಡ್‌ನಿಂದ ಗಾಯಗೊಂಡ ಹೆಣ್ಣುಹುಲಿಯೇ ಇದು ಎನ್ನುವುದು ಖಾತ್ರಿಯಾಯಿತು. ಜೌಳಗಿರಿಯಿಂದ ಸುಲೆಕುಂಟ ಗ್ರಾಮಕ್ಕೆ ಹೋಗಿ ಹೊಸದಾದ ಹೆಜ್ಜೆ ಗುರುತುಗಳಿಗಾಗಿ ಹುಡುಕಾಡಿದೆ. ಆದರೆ ಅಲ್ಲಿ ಇತ್ತೀಚೆಗೆ ಯಾವುದೇ ನರಬಲಿಯಾಗಿರಲಿಲ್ಲ, ಅಲ್ಲಿಂದ ದಕ್ಷಿಣಕ್ಕೆ ಇಪ್ಪತ್ಮೂರು ಮೈಲು ದೂರವಿದ್ದ ಗುಂಡಲಮ್‌ಗೆ ಹೋದೆ. ಕಳೆದ ನಾಲ್ಕು ತಿಂಗಳಲ್ಲಿ ಏಳು ದನಗಾಹಿಗಳನ್ನು ಹುಲಿ ಅಲ್ಲಿನ ಸುತ್ತಮುತ್ತಲಿನ ಕ್ಷೇತ್ರದಲ್ಲಿ ಬಲಿತೆಗೆದುಕೊಂಡಿತ್ತು, ಹಾಗಾಗಿ ಅಲ್ಲಿಯೇ ಕ್ಯಾಂಪ್ ಮಾಡಲು ನಿರ್ಧರಿಸಿದೆ.

ನನ್ನ ಸ್ನೇಹಿತ ಸಬ್‌ಕಲೆಕ್ಟರ್ ಮೂರು ದಷ್ಟಪುಷ್ಟ ಎಮ್ಮೆಕರುಗಳನ್ನು ಬಲಿಗಾಗಿ ಬಳಸಲು ಸಿದ್ಧಮಾಡಿದ್ದ. ಗುಂಡಲಮ್‌ನ ಅಂಚಿನಲ್ಲಿ ಹರಿಯುತ್ತಿದ್ದ ಸಣ್ಣ ಹೊಳೆಯೊಂದು ಸೀಗೆಹಳ್ಳ ಎನ್ನುವ ಕಾವೇರಿಯ ಉಪನದಿಯನ್ನು ಸೇರುವ ಸ್ಥಳದಲ್ಲಿ ಮೊದಲನೆ ಬಲಿಯನ್ನು ಕಟ್ಟಿದೆ. ಎರಡನೆಯದನ್ನು ನಾಲ್ಕು ಮೈಲು ದೂರದ ಅಂಚೆಟ್ಟಿ ಎನ್ನುವ ಹಳ್ಳಿಗೆ ಹೋಗುವ ದಾರಿಯಲ್ಲಿ ಕಟ್ಟಿದೆ. ಮೂರನೆಯದನ್ನು ಸುಲೆಕುಂಟ ಹಳ್ಳಿಯ ಜನರು ತಮ್ಮ ಮತ್ತು ದನಕರುಗಳಿಗೆ ಬೇಕಿದ್ದ ನೀರನ್ನು ಪಡೆಯುತ್ತಿದ್ದ ಝರಿಯ ಬಳಿ ಕಟ್ಟಿದೆ.

ಮುಂದಿನ ಎರಡು ದಿನಗಳು ಹುಲಿಯ ಹೊಸದಾದ ಹೆಜ್ಜೆಗುರುತುಗಳ ಹುಡುಕಾಟದಲ್ಲಿ ಅಥವಾ ಹುಲಿಯನ್ನೇ ನೋಡುವ ಪ್ರಯತ್ನದಲ್ಲಿ ಕಳೆದೆ. ಎರಡನೆಯ ದಿನ ಗುಂಡಲಮ್ ಹೊಳೆಯ ಮರಳಿನಲ್ಲಿ ಆ ಹೆಣ್ಣುಹುಲಿಯ ಹೆಜ್ಜೆ ಗುರುತುಗಳು ಕಂಡುಬಂದವು. ಹಿಂದಿನ ರಾತ್ರಿ ಹುಲಿ ಬೆಟ್ಟದಿಂದ ಇಳಿದು ನದಿಯ ಪಾತ್ರದಲ್ಲಿ ನಡೆದು ನಾನು ಕಟ್ಟಿಹಾಕಿದ್ದ ಮೂರನೆಯ ಎಮ್ಮೆಕರುವಿನ ಬಳಿಯಲ್ಲಿಯೇ ಹಾದು ಹೋಗಿತ್ತು, ಹುಲಿ ಅಲ್ಲಿ ನಿಂತು ಬಲಿಯನ್ನು ವೀಕ್ಷಣೆ ಮಾಡಿದ್ದರೂ ಆಕ್ರಮಣ ಮಾಡದೆ ಪಕ್ಕದ ಬೆಟ್ಟವೊಂ… ಏರಿ ಅಂಚೆಟ್ಟಿ ಗ್ರಾಮದ ಕಡೆ ಹೋಗಿತ್ತು, ಅಲ್ಲಿಂದ ಮುಂದೆ ಅ… ಜಾಡನ್ನು ಹಿಡಿಯಲು ಸಾಧ್ಯವಾಗಲಿಲ್ಲ.

ಬೇಟೆಯ ಪ್ರಥಮ ಪ್ರಯತ್ನ

ಮೂರನೆಯ ದಿನ ಬೆಳಿಗ್ಗೆ ನನ್ನ ಸುತ್ತಾಟದ ನಂತರ ಸ್ನಾನ ಮ… ಊಟಕ್ಕಾಗಿ ಸಿದ್ಧನಾಗುತ್ತಿದ್ದಾಗ, ಅಂಚೆಟ್ಟಿ ಗ್ರಾಮದ ಮುಖಂಡ ತನ್ನ ಜನರೊಂ… ಬಂದು ಅಲ್ಲಿನ ಹಾಡಿಯೊಂದರಲ್ಲಿ ಹುಲಿ ಒಬ್ಬನನ್ನು ಕೊಂದ ಸಮಾಚಾರ… ತಿಳಿಸಿದ. ತನ್ನ ದನಕರುಗಳ ಆತಂಕದ ಕೂಗನ್ನು ಕೇಳಿ ಮುಂಜಾವಿ… ಹೊರಗಡೆ ಹೋಗಿದ್ದ ಆತ ಹಿಂತಿರುಗಿರಲಿಲ್ಲ, ಅವನನ್ನು ಹುಡುಕಲು ಹೋ… ಅವನ ತಮ್ಮ ಮತ್ತು ಮಗನಿಗೆ ಕೊಟ್ಟಿಗೆಯ ಹೊರವಲಯದಲ್ಲಿ ಅ… ಕಂಬಳಿ ಸಿಕ್ಕಿದ್ದಲ್ಲದೆ, ಅಲ್ಲಿನ ಒಣನೆಲದಲ್ಲಿ ಆಕ್ರಮಣಕ್ಕೆ ಸಿದ್ಧವಾಗಿದ್ದ ಹುಲಿ… ಹೆಜ್ಜೆಗುರುತುಗಳು ಅಸ್ಪಷ್ಟವಾಗಿ ಕಂಡವು. ಭಯಭೀತರಾದ ಅವ… ಊರಿನವರೊಡನೆ ಸೇರಿ ನನಗೆ ಸುದ್ದಿ ತಲುಪಿಸಲು ಬಂದಿದ್ದರು.

ಸ್ನಾನವನ್ನು ಮರೆತು, ಊಟವನ್ನು ಬೇಗನೆ ಮುಗಿಸಿ ನಾನು ಅವರೊ… ಹಾಡಿಗೆ ಹೊರಟೆ. ಹುಲಿ ಆಕ್ರಮಣ ಮಾಡಿ ಆ ವ್ಯಕ್ತಿಯನ್ನು ಕೊ… ಸ್ಥಳದಿಂದ ಅದರ ಜಾಡನ್ನು ಹಿಡಿಯುವುದು ಕಷ್ಟಕರವಾಗಿತ್ತು, ಅ… ಮುಳ್ಳುಗಿಡಗಳಲ್ಲಿ ಆ ವ್ಯಕ್ತಿಯ ಬಟ್ಟೆಯ ಚೂರುಗಳು ದೊರಕಿದ್ದು ನ… ಹುಡುಕಾಟಕ್ಕೆ ಸಹಾಯ ಮಾಡಿತು. ಅದು ದುರಂತದ ಸಮಯವಾಗಿಲ್ಲದಿ… ನಾನು ಹುಲಿ ಅಂತಹ ಮುಳ್ಳು ಪೊದೆಗಳಲ್ಲಿ ದಾರಿಮಾಡಿಕೊಂಡ ಹೋ… ಬಗೆಗೆ ಅಧ್ಯಯನ ಮಾಡಲು ಇಚ್ಛಿಸುತ್ತಿದ್ದೆ.

ಹುಲಿ ಅಲ್ಲಿಂದ ಮುನ್ನೂರ ಗಜ ದೂರದಲ್ಲಿ ತನ್ನ ಬಲಿಯನ್ನು ನ… ಕೆಡವಿ ತಿನ್ನಲು ಉದ್ದೇಶಿಸಿತ್ತು, ಆದರೆ ಮನಸ್ಸು ಬದಲಿಸಿ ಮತ್ತೆ ಬಲಿಯ… ಹೊತ್ತು ಹತ್ತಿರದ ಹೊಳೆಯೊಂದರ ಕಡೆಗೆ ಹೋಗಿತ್ತು. ಅಲ್ಲಿಂದ ಮು… ಹುಲಿ ತನ್ನ ಹಿಡಿತವನ್ನು ಬದಲಾಯಿಸಿದ್ದರಿಂದ ರಕ್ತದ ಜಾಡನ್ನು ಹಿಡಿಯು… ಸುಲಭವಾಗಿತ್ತು, ಹೀಗೆ ರಕ್ತ ಮತ್ತು ಬಟ್ಟೆಯ ಜಾಡನ್ನು ಹಿಡಿದು … ಹೊಳೆಯ ಹತ್ತಿರ ತಲುಪಿದೆವು.

ಅಲ್ಲಿಂದ ಮುಂದೆ ಗುಂಪನ್ನು ಕರೆದೊಯ್ಯುವುದು ಸೂಕ್ತವೆನ್ನಿಸದೆ ನಾನೊ… ನಿಧಾನವಾಗಿ ಎಚ್ಚರಿಕೆಯಿಂದ ಪೊದೆಗಳ ನಡುವೆ ನುಸುಳಿಕೊಂಡು ಹೋ… ಸುತ್ತಲಿನ ದಟ್ಟವಾದ ಪೊದೆಗಳಲ್ಲಿ ಅಡಗಿಕೊಂಡಿರಬಹುದಾದ ಹು… ಬಗೆಗೆ ಗಮನವಿಟ್ಟು ನಾನು ಮುಂದುವರೆಯಬೇಕಾಗಿತ್ತು. ಹೊಳೆಯ ಎ… ತಿರುವುಗಳನ್ನು ದಾಟಿ ಹೋದಾಗ ದೂರದಲ್ಲಿ ಹೊಳೆಯ ಮಧ್ಯದಲ್ಲಿ ಎ… ಬಂಡೆಗಳು ಕಂಡವು. ನಾನು ಇನ್ನೂ ಎಚ್ಚರಿಕೆಯಿಂದ ಮುಂದೆ ಹೋ… ಬಂಡೆಯ ಆ ಕಡೆ ಬಲಿಯಾದ ವ್ಯಕ್ತಿಯ ಶವದ ಅವಶೇಷಗಳನ್ನು ನೋ…

ಹುಲಿ ಶವದ ಅರ್ಧಭಾಗದಷ್ಟನ್ನು ಆಗಲೇ ತಿಂದು ಮುಗಿಸಿತ್ತು. … ಸುತ್ತಲಿನ ಪೊದೆಗಳಲ್ಲಿ ಎಲ್ಲೂ ಅಡಗಿಕೊಂಡಿಲ್ಲವೆಂದು ಖಾತ್ರಿಪಡಿಸಿಕೊ… ನಾನು ಜೊತೆ ಬಂದಿದ್ದ ಜನರನ್ನು ಕರೆತಂದೆ. ಹುಲಿ ಆ ಸಂಜೆಯೊಳಗೆ … ತನ್ನ ಭೋಜನದತ್ತ ಬರುವುದು ನಿಶ್ಚಿತವಾಗಿದ್ದರಿಂದ ನಾನು ಯಾವುದಾ… ಮರೆಯಲ್ಲಿ ಕುಳಿತು ಕಾಯಬೇಕಾಗಿತ್ತು.

ಆದರೆ ಮಚಾನು ಅಥವಾ ಯಾವುದೇ ರೀತಿಯ ಮರೆಯನ್ನು ನಿಮಿ… ಸುತ್ತಲೂ ಮರಗಳೇ ಇರಲಿಲ್ಲ, ಬಂಡೆಯ ಮೇಲೆ ಹತ್ತು ಅಡಿ ಎತ್ತ… ಅದರ ತುದಿಯಿಂದ ನಾಲ್ಕು ಅಡಿ ಕೆಳಗೆ ಸ್ವಲ್ಪ ಸಮತಟ್ಟಾದ ಜಾಗ… ಎಲ್ಲವನ್ನೂ ಗಮನಿಸಿದ ನನಗೆ ಎರಡು ಸಾಧ್ಯತೆಗಳು ಹೊಳೆದವು. … ಅವಶೇಷಗಳು ಕಾಣುವಂತೆ ಹೊಳೆಯ ಎದುರಿನ ದಂಡೆಯಲ್ಲಿ ಅ… ಬಂಡೆಯ ಮೇಲೆಯೇ ಮರೆಮಾಡಿಕೊಂಡು ನಾನು ಕುಳಿತುಕೊಳ್ಳಬೇಕ… ಮೊದಲನೆಯದು ಬಹಳ ಅಪಾಯಕಾರಿಯಾಗಿದ್ದುದರಿಂದ … ಎರಡನೆಯದನ್ನೇ ಆಯ್ದುಕೊಂಡೆ. ಬಂಡೆಯ ಮೇಲಿನಿಂದ ನನಗೆ ಹೊ… ಎರಡೂ ಕಡೆ ಸಾಕಷ್ಟು ದೂರ ನೋಡುವುದು ಕೂಡ ಸಾಧ್ಯವಾಗುತ್ತಿ…

ನಿಶಬ್ದವಾಗಿ ತ್ವರಿತವಾಗಿ ಕಾರ್ಯಪ್ರವೃತ್ತರಾದ ಆ ಜನಗಳು ಬ… ಸುತ್ತಲೂ ಬೆಳೆದಿದ್ದ ಮುಳ್ಳಿನ ಪೊದೆಗಳ ಜಾತಿಯ ಗಿಡಗಳನ್ನು … ತಂದು ಬಂಡೆಯ ಮೇಲಿನ ಸಮತಟ್ಟಾದ ಜಾಗವನ್ನು ನಾಲ್ಕೂ ಕಡೆ… ಮರೆಮಾಡಿದರು. ನಾನು ಬಂದೂಕಿನ ಜೊತೆ ಒಂದು ಕಂಬಳಿ, … ಬಾಟಲು ಮತ್ತು ಟಾರ್ಚ್‌ನ್ನೂ ಕೂಡ ತಂದಿದ್ದೆ. ಮಧ್ಯಾಹ್ನ ಮೂರು … ಎಲ್ಲಾ ಸಿದ್ಧವಾಯಿತು. ನನ್ನ ಜಾಗದಲ್ಲಿ ಕುಳಿತ ನಾನು ಮರುದಿನ … ಬಿಸಿಯಾದ ಚಹಾ ಮತ್ತು ಸ್ಯಾಂಡ್‌ವಿಚ್‌ಗಳ ಜೊತೆಗೆ ಹಿಂತಿರುಗಲು… ಆ ಜನಗಳನ್ನು ಕಳಿಸಿದೆ.

(ಮುಂದುವರೆಯು…

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ವಿಜಯ ದಶಮಿ: ನಾಡಹಬ್ಬ ಎಂಬ ಹುಸಿ ಸಂಸ್ಕೃತಿ

...ಯ ಜಯ ಹೇ ಮಹಿಷಾಸುರ ಮರ್ಧಿನಿ ...ರ್ದಿನಿ ಶೈಲಸುತೆ" ಎಂದು ಶಂಕರಾಚಾರ್ಯ ತಮ್ಮ ...ರಿ ನಂದಿನಿಯಲ್ಲಿ ಹಾಡಿ ಹೊಗಳಿರುವುದನ್ನು ...ವೆ. ಪದಗಳ ರಮಣೀಯತೆ, ಎಲ್ಲರಿಗೂ ಹಾಡ ...ಂತಹ ಸಂಗೀತ ಸಂಯೋಜನೆ ಬಹುಜನಪ್ರಿಯ

...ಲ್ಲಾ ಸರಿ, ಈ ಹಾಡನ್ನು ಕೇಳುತ್ತಾ ಒಂದು ...ಯ ತಕರಾರು ಎದ್ದೇಳುತ್ತದೆ. ಮಹಿಷನನ್ನು ...ವಳು ಚಾಮುಂಡಿ ಎಂದು ಈ ನಾಡಿನ ಜನತೆ ... ಆದರೆ, ಆಯಿಗಿರಿ ನಂದಿನಿಯಲ್ಲಿ ಮಹಿಷನನ್ನು

ತೋಡಾದ ಹಿರಿಯರೊಬ್ಬರ ಬಳಿ ಇಂಗ್ಲೆಂಡಿನ ರಾಜಕುಮಾರ ಭಾರತಕ್ಕೆ ಬರುತ್ತಾನೆಂದೂ ಆತ ಬಹಳ ಶ್ರೀಮಂತನೆಂದೂ ತಿಳಿಸಿದಾಗ, ಆ ಹಿರಿಯರು ಆ ಇಂಗ್ಲೆಂಡ್ ರಾಜಕುಮಾರನ ಬಳಿ ಎಷ್ಟು ಎಮ್ಮೆಗಳಿವೆ ಎಂದು ಕೇಳಿದರಂತೆ. ಎಮ್ಮೆಗಳಿಂದ ಬಹಳ ಸಂಪದ್ಭರಿತವಾಗಿರುವ ಊರು ಎರುಮೈ ನಾಡಾಗಿದ್ದಿತ್ತು.

ಚಾಮುಂಡಿಯು ಗೌಳಿಗಿತ್ತಿಯಾಗಿ ಜನಪದಗಳಲ್ಲಿ ಕೇಳಿದ್ದೇವೆ.

ಹಸುವಿನ ಮುಖ್ಯ ಬಳಕೆದಾರರಾದ ಆರ್ಯರು ಎಮ್ಮೆಗಳನ್ನು ಒಲ್ಲದೇ ಹೋದರೆ? ಇದು ಹಸುವನ್ನು ಸಾಕುವವರ ಮತ್ತು ಎಮ್ಮೆಗಳನ್ನು ಸಾಕುವವರ ನಡುವೆ ನಡೆದ ಸಂಘರ್ಷವೇ? ಅಧ್ಯಯನಗಳು ತಿಳಿಸಬೇಕು.

ಇರಲಿ, ಮಹಿಷಾಸುರನ ವಿಷಯಕ್ಕೇ ಮರಳಿ ಬಂದರೆ, ಬುಕ್ ಆನ್ ಇಂಡಿಯನ್ ಇಕನಾಮಿಕ್ಸ್ ಕಾನ್ಫರೆನ್ಸ್'ನಲ್ಲಿ ದಾಖಲಾಗಿರುವ ಕೆಲವು ಅಂಶಗಳನ್ನು ವಿವರಿಸುತ್ತಾ, "ಬೆಟ್ಟಗಳಲ್ಲಿ ನೆಲೆಸುವ ಬುಡಕಟ್ಟುಗಳ ಜನರನ್ನು ರಾಕ್ಷಸರು ಮತ್ತು ಅಸುರರೆಂದು ಕರೆಯಲಾಗುತ್ತಿತ್ತು, ಹೀಗೆ ಹಲವಾರು ಅಸುರರ ಮುಖ್ಯಸ್ಥರು ವಿವಿಧ ಭಾಗಗಳಲ್ಲಿ ಅಧಿಕಾರದಲ್ಲಿದ್ದರು. ಹರಿಹರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದವನು ಗುಹಾಸುರ. ಚಿತ್ರದುರ್ಗವನ್ನು ಆಳುತ್ತಿದ್ದವನು ಹಿಡಿಂಬಾಸುರ, ರಾಮನಗರದಲ್ಲಿದ್ದವನು ಬಕಾಸುರ ಮತ್ತು ಮಹಿಷಾಸುರ ಮೈಸೂರಿನಲ್ಲಿ" ಎಂದು ದಾಖಲಿಸಿದ್ದಾರೆ.

ಹೀಗೇ ಮುಂದುವರಿಯುತ್ತಾ "ದಾನವಂತ ಮಹಿಷನ ರಾಜ್ಯದಲ್ಲಿ ಅನಾಗರಿಕವಾದ ಯಜ್ಞಯಾಗಾದಿಗಳಿಗೆ ಆಸ್ಪದವಿರಲಿಲ್ಲ, ಮನಬಂದಂತೆ ವೃಕ್ಷಗಳನ್ನು ಕಡಿಯುವುದಿರಲಿ, ಸಾವಿರಾರು ಗೋವುಗಳನ್ನು ಕಡಿದು ಯಜ್ಞಕ್ಕೆ ಹಾಕುವುದಾಗಲಿ ಯಾವುದಕ್ಕೂ ಆರ್ಯರಿಗೆ ಅವಕಾಶವಿರಲಿಲ್ಲ. ಪ್ರತಿಯೊಬ್ಬನೂ ಉಳುಮೆ ಮಾಡಬೇಕಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಯಾವೊಬ್ಬನೂ ಸುಮ್ಮನೆ ಕೂತು ಉಣ್ಣುವುದಕ್ಕೆ ಆಸ್ಪದವಿರಲಿಲ್ಲ. ಅಪಾರ ನೈಸರ್ಗಿಕ ಸಂಪತ್ತನ್ನು ಹೊಂದಿದ್ದ ಮಹಿಷಾಸುರನು ಇವೆಲ್ಲವನ್ನೂ ಕಾಪಾಡಲೆಂದೇ ತನ್ನ ಸೇನಾಪತಿಗಳಾದ ಚಾಮರ, ಉಗ್ರವೀರ್ಯ, ಉಗ್ರಾಸ್ಯ ಕರಾಲ, ಬಿಡಾಲ, ಅಂಧಕಾಸುರ, ಬಾಷ್ಕಲ ಮುಂತಾದ ಬಲಾಢ್ಯ ದೈತ್ಯವೀರರನ್ನು ನೇಮಿಸಿದ್ದ. ಕರಾಲ, ದುರ್ಧರ, ಜಿಷ್ಣು, ಬಾಷ್ಕಲ ಇವರನ್ನೊಳಗೊಂಡ ಪಡೆಯು ಆರ್ಯರು ನಡೆಸುತ್ತಿದ್ದ ಯಜ್ಞಯಾಗಾದಿಗಳನ್ನು ಸುಟ್ಟು ಬೂದಿ ಮಾಡಲೆಂದೇ ನೇಮಿಸಲಾಗಿತ್ತು. ಮಹಿಷಾಸುರನು ಈ ಪಡೆಯನ್ನು ವಿಶೇಷ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದ. ಮಹಾನು, ಮಹಾಮೌಳಿ, ಮಹಾಧನು ಇವರುಗಳು ಮಹಿಷ ಮಂಡಲದ ಮತ್ತೊಂದು ವಿಶೇಷ ಸೇನಾಪತಿಗಳ ಪಡೆಯಾಗಿತ್ತು. ಉಗ್ರಾಸ್ಯ ಜ್ವಾಲಾಸ್ಯ ಚಾಮರ ಇವರುಗಳದ್ದು ಕಬ್ಬಿಣದ ಶಿರಸ್ತ್ರಾಣಗಳನ್ನು ತಯಾರಿಸುತ್ತಿದ್ದ ಒಂದು ತಂಡವಾಗಿತ್ತು. ಸೈನ್ಯಕ್ಕೆ ಬೇಕಾದ ಈ ಶಿರಸ್ತ್ರಾಣಗಳನ್ನು ಭಾರತದ ಇತರ ಕಡೆಗಳಿಂದ ಅಸುರರು ಬಂದು ಪಡೆದುಕೊಳ್ಳುತ್ತಿದ್ದರು. ಇವರ ನೈಪುಣ್ಯಕ್ಕೆ ಆಧಾರವಾಗಿ ಎಂ.ಎಲ್.ಶಿಂಡ್ಗೆ ಎಂಬ ಪ್ರಸಿದ್ಧ ಇತಿಹಾಸಕಾರರು ತಮ್ಮ ಸಂಶೋಧನಾ ಕೃತಿಯಾದ 'ದ ಲಾಂಗ್ವೇಜ್ ಆಫ್ ದ ಹರಪ್ಪನ್ಸ್'ನಲ್ಲಿ ಅಸುರರು ಮೆಟಲ್ ಕಾಸ್ಟಿಂಗ್ ಮತ್ತು ಕಬ್ಬಿಣದ ಬಳಕೆಯಲ್ಲಿ ಅಪ್ರತಿಮ ಕೌಶಲ್ಯವನ್ನು ಹೊಂದಿದ್ದರು ಎಂದು ಹೇಳಲಾಗಿದೆ" ಎನ್ನುತ್ತಾ ಇನ್ನೂ ಮುಂದುವರಿದು "ಮಹಾನ್ ಬೌದ್ಧ ರಾಜನಾಗಿದ್ದ ದಾನವಂತ ಮಹಿಷಾಸುರನು ಅಸುರರಿಗೆ ಧ್ಯಾನ ಮಾಡಲಿಕ್ಕೆಂದೇ ಸಾವಿರಾರು ವನಗಳನ್ನು ನಿರ್ಮಿಸಿದ್ದ. ಸಾವಿರಾರು ಪ್ರಾಣಿಪಕ್ಷಿಗಳ ನೆಲೆವೀಡಾಗಿತ್ತು. ಯಾವುದೇ ಕಾರಣಕ್ಕೂ ಅಲ್ಲೆಲ್ಲಾ ಯಜ್ಞಗಳನ್ನು ಆರ್ಯರು ನಡೆಸಲು ಸಾಧ್ಯವಿರಲಿಲ್ಲ. ಮೂಲತಃ ಅತ್ಯಂತ ಧ್ಯಾನಿ ಆಗಿದ್ದ ಮಹಿಷಾಸುರನು ತನ್ನ ಆಳ್ವಿಕೆಯಲ್ಲಿ ಅಪಾರ ಗೌರವಕ್ಕೆ ತನ್ನ ದಕ್ಷ ಆಡಳಿತಕ್ಕೆ, ಗಂಭೀರ ನಡೆನುಡಿಗಳಿಗೆ, ವಿದ್ವತ್ತಿಗೆ ಹೆಸರುವಾಸಿಯಾಗಿದ್ದನು. ಸ್ವತಃ ಮಹಿಷಾಸುರನೇ ಮಕ್ಕಳ ಕಾಯಿಲೆಗಳಿಗೆ ನಿಸರ್ಗ ಚಿಕಿತ್ಸೆ ನೀಡುವುದರಲ್ಲಿ ಪರಿಣಿತಿಯನ್ನು ಹೊಂದಿದ್ದನು" ಎಂದು ಮುಂದುವರಿಸುತ್ತಾರೆ.

ಈ ಎಲ್ಲಾ ವಿವರಣೆಗಳು ಅರಣ್ಯವಾಸಿಗಳಾಗಿದ್ದ ಬುಡಕಟ್ಟು ಜನಾಂಗದವರಿಗೆ ಧಾರಾಳವಾಗಿ ಅನ್ವಯಿಸುತ್ತದೆ.

ರಾವಣಾಸುರನು ಅಶೋಕವನವನ್ನು ಬೆಳೆಸಿದಂತೆ, ಮಧುದೈತ್ಯನು ಮಧುವನ ಬೆಳೆಸಿದಂತೆ ಅಸುರರೆಲ್ಲಾ ಅರಣ್ಯಪ್ರಿಯರಾಗಿದ್ದರು ಮತ್ತು ವನಸಂರಕ್ಷಣೆ ಮಾಡುತ್ತಿದ್ದರು.

ಹೆಣ್ಣೋರ್ವಳನ್ನು (ಚಾಮುಂಡಿ?) ಮಹಿಷಾಸುರನ ಕೊಂದಿದ್ದೂ ವಿಷಪ್ರಾಶನದಿಂದಾಗಿಯೇ ಎಂದು ಹೇಳುತ್ತಾ ಘನಘೋರ ಯುದ್ಧವೊಂದು ನಡೆದು ಶಿವನ ತ್ರಿಶೂಲದಿಂದ ತಿವಿದು ಕೊಂದಳು ಎಂಬ ಪೌರಾಣಿಕ ಕಥಾ ನಿರೂಪಣೆ ಡಾನ್ಸ್‌ಡ್ರಾಮಾಗಳಿಗೆಂದೇ ಬರೆದಿರುವಂತಿದೆ.


ಮಾರ್ನಾಮಿ

ಅವನು ತೋಡಾ ಬುಡಕಟ್ಟಿನವನೇ ಆಗಲಿ, ನಾಗ ಕುಲದವನೇ ಆಗಲಿ, ಬೌದ್ಧ ಅರಸನೇ ಆಗಲಿ ಈಗ ಚರ್ಚೆಯ ವಿಷಯ ಅದಲ್ಲ. ಆರ್ಯರ ಯಜ್ಞಯಾಗಾದಿಗಳನ್ನು ಮಹಿಷನು ವಿರೋಧಿಸಿದನೆಂದ ಮಾತ್ರಕ್ಕೆ ಅವನು ದುಷ್ಟನೇಕಾಗುತ್ತಾನೆ? ಅವನ ಸಂಸ್ಕೃತಿಗೆ ಒಗ್ಗದ, ಅವನ ಸ್ಥಳೀಯ ಅರಣ್ಯಗಳನ್ನು ರಕ್ಷಿಸುವ ಸಲುವಾಗಿ ಆತನು ಕ್ರಮ ತೆಗೆದುಕೊಳ್ಳಬಾರದೇಕೆ? ಅವನನ್ನು ರಾಜಕೀಯ ಪಿತೂರಿಯಿಂದಾಗಿ ಕೊಂದ ದೇವತೆಗಳು 'ಜಯ ಜಯ ಹೇ ಮಹಿಷಾಸುರ ಮರ್ಧಿನಿ' ಎಂದು ಹಾಡುತ್ತಾ ಹೂಮಳೆ ಸುರಿದರು. ಹಾಡಿ ಹೊಗಳಿದರು. ಯು.ಆರ್.ಅನಂತಮೂರ್ತಿ ಸತ್ತಾಗ ಪಟಾಕಿ ಸುಟ್ಟು ಸಂಭ್ರಮಿಸಿದವರಂತೆ ಹೀಗೆ ತಮಗೆ ಎದುರಾಗುವವರ ಮರಣದ ಸುದ್ದಿಯ ಮೇಲೆ ಸಂಭ್ರಮಿಸುತ್ತಾರೆ. ಅದು ವೈದಿಕರಿಗೆ ಹೊಂದುತ್ತದೆ.


ಆದರೆ, ಈ ನಾಡಿನ ಜನಕ್ಕೆ ಇದು ಸೂತಕದ ದಿನ. ಅವರ ಪೂರ್ವಿಕನೂ, ಹಿರಿಯ ಅರಸನೂ, ಮೂಲ ನಿವಾಸಿಯೂ ಆಗಿರುವ ಮಹಿಷಾಸುರನ ಸಾವು ಶೋಕಸಂಕೇತದ ದಿನ. ಹಳೆಯ ಮೈಸೂರು ಪ್ರಾಂತ್ಯದಲ್ಲಿ ಇಂದಿಗೂ ಧೂಪವಿಟ್ಟು ಗೌರವ ಸಲ್ಲಿಸುತ್ತಾರೆ. ಕೆಲವು ಮನೆಯವರು ಚಾಮುಂಡಿಯ ದೇವಸ್ಥಾನಕ್ಕೆ ಹೋಗುವುದು ನಿಷಿದ್ಧ ಎಂದೂ ಹೇಳುತ್ತಾರೆ.













... ದೇವಿಯನ್ನು ನಂದಿನಿ ಎಂದು ವಿವರಿಸಲಾಗಿದೆ. ...ದ ಮಗಳು ಎಂದು ಬಣ್ಣಿಸಲಾಗಿದೆ. ಅವಳು ...ಗಿರಿಕನ್ಯೆಯಾಗಿದ್ದು, ಆಕೆ ಹೇಗೆ ತನ್ನ ವನಗಳಲ್ಲಿ, ...ಲ್ಲಿ, ತನ್ನದೇ ವಿಶ್ವದಲ್ಲಿ ವಿಹರಿಸುತ್ತಿದ್ದಳು ಎಂದು ...ದ್ದಾರೆ. ಅಷ್ಟೇ ಅಲ್ಲ, ವಿಂದ್ಯಾಪರ್ವತದಲ್ಲಿ ...ವವಳೆಂದೂ ಹೇಳುತ್ತಾರೆ.

...ವುದೇ ವೀರೋಚಿತವಾದ ಮಹಿಳೆಯನ್ನು ...ದೇವಿಗೆ ಸಮೀಕರಿಸುವುದು, ಆ ಉಪಮೆಯು ... ರೂಪಕಾಲಂಕಾರಕ್ಕೆ ತಿರುಗಿ, ನಂತರ ಅವಳೂ ...ರ್ಗೆಯು ಒಂದೇ ಎಂದಾಗುವುದು ಅಪರೂಪದ ...ಳೇನಲ್ಲ.

...ದರೆ, ಇದೇ ಆಯಿಗಿರಿ ನಂದಿನಿಯಲ್ಲಿ ಮತ್ತೊಂದು ... ಜನಪದರಿಗೆ ಹತ್ತಿರವಾಗುವ ಸೂಚನೆಯನ್ನು ...ಚಾರ್ಯ ಕೊಡುತ್ತಾರೆ. ಅದೇನೆಂದರೆ, "ಭಗವತಿ ...ಕಂಠ ಕುಟುಂಬಿನಿ, ಭೂರಿಕುಟುಂಬಿನಿ ಭೂರಿಕೃತೆ" ...ಾಲಿನಲ್ಲಿ, ನೀಲಕಂಠನ ಸಂಗಾತಿ ಎಂದು ಅವಳನ್ನು ...ವುದಲ್ಲದೇ, ಆ ನೀಲಕಂಠನಿಗೆ ಹಲವು ಸಂಸಾರಗಳು ... ಕುಟುಂಬಗಳಿದ್ದವು ಎಂದು ತಿಳಿಸುತ್ತಾರೆ.

...ನಮಗೆ ಆಯಿಗಿರಿ ನಂದಿನಿಯನ್ನು ಚಾಮುಂಡಿಯ ... ಶಂಕರಾಚಾರ್ಯ ತರುತ್ತಾರೆ.

...ವೇರಿ ಮತ್ತು ಪಾರ್ವತಿಯೆಂಬ ಇಬ್ಬರು ಹೆಂಡತಿ ...ಂಸಾರವನ್ನು ನಿಭಾಯಿಸುತ್ತಿದ್ದ ನಂಜುಂಡೇಶ್ವರನೆಂಬ ...ರ್ವೈದ್ಯದ ವೈದ್ಯ ಪಂಡಿತ ಚಾಮುಂಡಿ ಎಂಬುವಳ ...ೇಹಕ್ಕೆ ಬಿದ್ದ. ನಂತರ ತನ್ನ ಸಂಸಾರವನ್ನು ...ವಸುತ್ತಿದ್ದ ಇವನು, ತನ್ನ ಜೀವನೋಪಾಯವನ್ನು ...ಸುತ್ತಿದ್ದ ಅವಳು ಹೇಗೇ, ಎಂತೋ ಒಬ್ಬರನ್ನೊಬ್ಬರು ...ಚ್ಛೆಯಾದರೂ ಕಾಣುವ ಸೆಳೆತದಲ್ಲಿ ಬೆಟ್ಟದಿಂದ ... ಬರುತ್ತಿದ್ದಳು.

...ಾದರೆ, ಆಗಾಗಲೇ ಬೆಟ್ಟವು ಅವಳ ಅಧೀನಕ್ಕೆ ...ತ್ತು, ಮಹಿಷಾಸುರನ ಮರಣಾನಂತರದ ಕಾಲವದು.

...ಈ ಮಹಿಷಾಸುರ ಯಾರು?

...ಸೂರು ಎಂಬ ಹೆಸರಿನ ಮೂಲ, ಮಹಿಸೂರು, ...ರು ಎಂದಾಗುತ್ತದೆ. ಇನ್ನೂ ಕನ್ನಡದ ಮೂಲವನ್ನು ...ದರೆ ಎರುಮೈ ನಾಡು ಎಂದು ವಿದ್ವಾಂಸರು ...ುತ್ತಾರೆ. ಅಂದರೆ, ಮೈಸೂರು ಎಮ್ಮೆಗಳ ನಾಡು ... ಮಹಿಷಗಳ ಊರು ಎಂದಾಯ್ತು. ಹಾಗಾದರೆ ...ಮ್ಮೆಗಳು ಯಥೇಚ್ಛವಾಗಿದ್ದವೇ? ಹೌದು ಎನ್ನುತ್ತದೆ ...ಟ್ಟುಗಳ ಅಧ್ಯಯನ.

...ಮ್ಮೆಗಳ ಪ್ರಾಣಿ ಲಾಂಛನವನ್ನು ಹೊಂದಿರುವ ...ಟ್ಟು ಎಲ್ಲಿಂದು ಕಣ್ಣು ಹಾಯಿಸಿದರೆ, "ತೋಡಾ" ...ಟ್ಟು ಸಿಗುತ್ತದೆ. ಈ ಬುಡಕಟ್ಟಿನ ಜನ ಈಗ ...ಯಲ್ಲಿ ವ್ಯಾಪಕವಾಗಿ ಕಾಣಸಿಗುತ್ತಾರೆ. ಊಟಿ, ...ಾಲ್ ಇತ್ಯಾದಿ ಭಾಗಗಳಲ್ಲಿರುವ ಈ ಜನರೇ ...ಾಗಿ ಆಗಿನ ಮಹಿಷೂರಿನ ನಿವಾಸಿಗಳಾಗಿದ್ದರೂ ...ಡಿ, ಅವರು ತಮ್ಮ ಸಂಪತ್ತನ್ನು ಅಳೆಯುತ್ತಿದ್ದದ್ದೇ ...ಲಿ ಇರುವ ಎಮ್ಮೆಗಳಿಂದ. ಎಮ್ಮೆಗಳು ಅವರ ...ಮುಖ್ಯವಾದ ಪ್ರಾಣಿಗಳು ಮಾತ್ರವಲ್ಲ, ಅವರ ...ಲಾಂಛನ ಕೂಡ. ಡಬ್ಲ್ಯು.ಹೆಚ್.ಆರ್.ರಿವರ್ಸ್ ... ಬುಡಕಟ್ಟಿನ ಬಗ್ಗೆ ಬರೆಯುತ್ತಾ ಒಂದು ...ಟ್ಟು ನೆನಪಿಸಿಕೊಳ್ಳುತ್ತಾರೆ.

ಒಂದು ಊರಿಗೆ ಆ ಊರಿನ ಶ್ರೇಷ್ಠ ನಾಯಕನ ಹೆಸರನ್ನು ಇಡಲು ಸಾಧ್ಯತೆಗಳಿವೆ. ದುಷ್ಟನೋ, ಜನರಿಗೆ ಪೀಡಕನೋ ಆಗಿರುವಂತಹ ಕೇಡಿಯ ಹೆಸರನ್ನು ಇಟ್ಟುಕೊಂಡು ತಮ್ಮ ಊರನ್ನು ಗುರುತಿಸಲು ಇಷ್ಟಪಡುವುದಿಲ್ಲ. ಅಂದಹಾಗೆ, ಮಹಿಷಾಸುರನೆಂಬ ಆ ವ್ಯಕ್ತಿ ಐತಿಹಾಸಿಕನೇ ಆಗಿದ್ದ ಪಕ್ಷದಲ್ಲಿ ಆತ ಒಳ್ಳೆಯವನೇ, ಶೀಲವಂತನೇ ಇರಬೇಕು. ಹಾಗಿದ್ದರೂ ಆತ ಏಕೆ ದುಷ್ಟನೆಂದು ಬಿಂಬಿಸಲ್ಪಟ್ಟ?

ತೋಡಾ ಬುಡಕಟ್ಟಿನಲ್ಲಿ ವಿಗ್ರಹಾರಾಧನೆ ಇಲ್ಲ. ಅವರಲ್ಲೂ ಪುರೋಹಿತ ವರ್ಗವಿದ್ದರೂ ನಿರಾಕಾರವಾದ ಖಾಲಿ ಗೋಡೆಯನ್ನು ಆರಾಧಿಸುವವರು. ಇವರ ಈ ಆಚರಣೆಯ ಪದ್ಧತಿಯೇ ಮೊದಲಾಗಿ ಇತರ ಭಿನ್ನ ಸಂಸ್ಕೃತಿಯ ನೇರಪಾಲನೆಗಳಿಂದ ಸಂಘರ್ಷಗಳು ಸಮಕಾಲಿನ ಆರ್ಯ ಜನಾಂಗದೊಡನೆ ಉಂಟಾಗಿರುವ ಸಾಧ್ಯತೆಗಳಿವೆ.

ಈ ಬಗೆಯ ಸಂಘರ್ಷಗಳು ನಡೆದು, ಕ್ರಮೇಣ ತೋಡಾ ಬುಡಕಟ್ಟನ್ನು ತಾವಿದ್ದ ಎಡೆಯಿಂದ ಮೂಲೆಗುಂಪಾಗಿಸುತ್ತಾ ಸಮೀಪದ ನೀಲಗಿರಿಯಲ್ಲಿ ನೆಲೆಯೂರುವಂತೆ ಮಾಡಿರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ.

ಮಹಿಷಾಸುರನ ಹೆಸರು ಖಂಡಿತವಾಗಿ ಅದಿರದೇ ಬೇರೆನ್ನಿನೋ ಇದ್ದು, ಮಹಿಷ ಲಾಂಛನದ ಬುಡಕಟ್ಟಿನ ಒಡೆಯನಾದ್ದರಿಂದ ಆತನನ್ನು ಮಹಿಷಾಸುರನೆಂದು ಕರೆಯುತ್ತಾರೆ. ಪುರಾಣದಲ್ಲಿ ಮಹಿಷನು ನೇರ ಕೋಣವಾಗಿ ಬರದೇ ವಿವಿಧ ರೂಪಗಳನ್ನು ತಳೆಯುತ್ತಾ ನಾಗರಹಾವಾಗಿಯೂ ಬಂದು ಕೊನೆಗೆ ಚಾಮುಂಡಿಯನ್ನು ಕೊಲ್ಲಲು ಕೋಣದ ರೂಪ ತಾಳಿ ಆಕೆಯಿಂದ ಹತನಾಗುತ್ತಾನೆ.

ಇದನ್ನು ವಾಸ್ತವಿಕ ನೆಲೆಗಟ್ಟಿನಿಂದ ನೋಡಲು ಯತ್ನಿಸಿದರೆ, ಮಹಿಷನು ಮೂಲದಲ್ಲಿ ಮಹಿಷಕುಲದವನಾಗಿರದೇ ನಾಗಕುಲದ ನೆಲೆಯಿಂದ ಬಂದಿದ್ದು, ನಂತರ ತೋಡಾದಂತಹ ಮಹಿಷ ಲಾಂಛನದ ಬುಡಕಟ್ಟಿನವರೊಂದಿಗೆ ಸೇರಿ ಮಹಾನ್ ಸಂಘರ್ಷ ಮಾಡಿದನೇ? ಆತನಿಗೆ ನೆರವು ನೀಡಿದ ತೋಡಾ ಬುಡಕಟ್ಟನ್ನು ಬುಡಮೇಲು ಮಾಡಲು ಆರ್ಯರು ಯತ್ನಿಸಿದರೇ? ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ಮಹಿಷಾಸುರ ಬೌದ್ಧನೇ?

ವಿಜಯಾ ಮಹೇಶ್‌ರವರು ತಮ್ಮ ಚರಿತ್ರೆಯ ಮರುಶೋಧದಲ್ಲಿ ಕೆಲವು ಕುತೂಹಲಕರ ಮತ್ತು ಸತ್ಯನಿಷ್ಠವಾದ ಸಂಗತಿಗಳನ್ನು ಪ್ರಸ್ತಾಪಿಸುತ್ತಾರೆ. 1929ರಲ್ಲಿ ಪ್ರಕಟವಾದ ಮೈಸೂರು ವಿಶ್ವವಿದ್ಯಾಲಯದ 'ಹ್ಯಾಂಡ್

ಆರ್ಯರ, ದೇವತೆಗಳ ಪಾಲಿಗೆ ದುಷ್ಟನೆನಿಸಿಕೊಂಡ ಮಹಿಷಾಸುರ ನಮಗೇತರ ದುಷ್ಟ? ಅವನ ಸಾವನ್ನು ಸಂಭ್ರಮಿಸುವುದು ನಮ್ಮ ಸಂಸ್ಕೃತಿಯೇ ಅಲ್ಲ. ಆರ್ಯರ ಅಥವಾ ವೈದಿಕರ ಹೇರಿಕೆಯ ಸಂಸ್ಕೃತಿಗೆ ಒಳಗಾಗಿ ಯಾರದೋ ಸಾಡಿಸ್ಟ್ ಸಂಭ್ರಮವನ್ನು ನಮ್ಮದೆಂದು ಆಚರಿಸುವುದು 'ಇದೇನಾ ಸಭ್ಯತೇ, ಇದೇನಾ ಸಂಸ್ಕೃತಿ, ಇದೇನಾ ನಮ್ಮ ಸತ್ಯತೆ, ಇದೇನಾ ನಮ್ಮ ಜಾಗೃತಿ' ಎಂದು ನೊಂದು ಕೇಳುವ ಕಾಲವಿದೇ ಎಂದು ಅನಿಸುತ್ತದೆ.

ವಿಜಯನಗರ ಅರಸ ಸಾಮಂತರಾಗಿದ್ದುಕೊಂಡು ನಂತರ ಯಾವುದೇ ಘನಂದಾರಿ ಯುದ್ಧದಲ್ಲಿ ವಿಜಯವನ್ನು ಸಾಧಿಸದೇ, ಆಂಗ್ಲರೊಡನೆ ಸಂಧಾನ ಸಮಾಧಾನಗಳನ್ನು ಮಾಡಿಕೊಂಡು ರಾಜಕೀಯ ಮಾಡಿದ ಒಡೆಯರ್ ರಾಜಮನೆತನ ಇಂದು ವಿಜಯ ದಶಮಿಯ ವಾರಸುದಾರರು ಎನ್ನುವುದು ಇನ್ನೊಂದು ಐತಿಹಾಸಿಕ ಮತ್ತು ಸಾಂಸ್ಕೃತಿಕ ಕುಚೋದ್ಯ. ಹಾಗೆ ನೋಡಲು ಹೋದರೆ ಕನ್ನಡನಾಡಿನ ವೀರಪೀಳಿಗೆಯನ್ನು (ಮೈಸೂರು ಸಂಸ್ಥಾನದ ದೃಷ್ಟಿಯಿಂದಾದರೂ) ಮುಂದುವರಿಸಿದ್ದು ಟಿಪ್ಪು. ಮಿಲಿಟರಿಯ ಅತ್ಯುನ್ನತ ವ್ಯವಸ್ಥೆಯನ್ನು ಹೊಂದಿದ್ದು ಟಿಪ್ಪು. ಸಂಸ್ಥಾನಕ್ಕಾಗಿ ತನ್ನ ಮಕ್ಕಳನ್ನು ಪಣಕ್ಕಿಟ್ಟು, ಯುದ್ಧದಲ್ಲಿ ತನ್ನ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿ ವೀರಮರಣ ಹೊಂದಿದ ಟಿಪ್ಪುವಿನ ಸುಳುವೇನಾದರೂ ಈ ವಿಜಯದಶಮಿಯಲ್ಲಿ ಕಂಡಿದ್ದರೆ ಸಾರ್ಥಕವೆನ್ನಬಹುದಿತ್ತೇನೋ.

ಒಟ್ಟಾರೆ ಒಂದು ಸುಳ್ಳನ್ನು ಸಾವಿರ ಬಾರಿ ಹೇಳಿ ನಿಜದಂತೆ ತೋರ್ಪಡಿಸುವುದು, ತಮ್ಮ ಸಂಸ್ಕೃತಿಯನ್ನೇ ನಿಮ್ಮದಾಗಿಸಿಕೊಂಡು ನಮ್ಮನ್ನು ಬೆಳೆಸಬೇಕು, ನೀವು ನಮ್ಮ ಅಧಿಕಾರದಲ್ಲಿಯೇ ಇರಬೇಕೆನ್ನುವುದು, ಅದೆಂತಹ ಪ್ರಧಾನ ಸಂಸ್ಕೃತಿಯೋ ನಾ ಕಾಣೆ. ಮಾನವತೆಯಲ್ಲಿ ನಾಚಿಕೆ ಬೆಲೆಯಿಲ್ಲದೆ ಸಾವನ್ನು ಸಂಭ್ರಮಿಸುವ ಇಂತಹ ಸ್ಯಾಡಿಸ್ಟ್ ಸಂಸ್ಕೃತಿಗಳು ನಮ್ಮ ನಾಡಹಬ್ಬವಾಗಿರುವುದು ಸಾಂಸ್ಕೃತಿಕ ವ್ಯಂಗ್ಯ. ಕೋಣವನ್ನು ಬಲಿಗೊಟ್ಟು ದೇವಿಯನ್ನು ಸಂತೃಪ್ತಗೊಳಿಸುವ ಆಚರಣೆ ಅಬ್ರಾಹ್ಮಣರಲ್ಲಿ ಅಥವಾ ಶೂದ್ರರ ಸಮುದಾಯದಲ್ಲಿರುವುದು ಇನ್ನೂ ಬಹುದೊಡ್ಡ ವ್ಯಂಗ್ಯ. ತಮ್ಮ ರೀತಿಯದೇ ಇದ್ದಂತಹ ಬುಡಕಟ್ಟಿನ ದೊರೆಯನ್ನು ಕೊಂದ ಸಂಕೇತದಲ್ಲಿ ನಾವೇ ಕೋಣವನ್ನು ಬಲಿಕೊಡುತ್ತಿದ್ದೇವೆ ಎಂಬ ಅರಿವಿಲ್ಲದೇ ಇರುವುದು ಶೋಚನೀಯ. ■

ಆಷಾಢಭೂತಿಗಳಾಗಿರುವ ಸಂಘ ಪರಿವಾರಿಗರು

ಬಿಜೆಪಿಯ ಆಷಾಢಭೂತಿತನ, ದ್ವಂದ್ವ ನಿಲುವುಗಳು, ಕಪಟಗಳೆಲ್ಲ ಮತ್ತೆ ಮತ್ತೆ ಸಾಬೀತಾಗುತ್ತಿವೆ. ಇತ್ತೀಚಿನ ಉದಾಹರಣೆ ಗಮನಿಸಿ. ಯುಪಿಎ ಸರ್ಕಾರವಿದ್ದಾಗ ಭಾರತ, ಪಾಕ್ ಗಡಿ ಸಂಘರ್ಷಗಳೆಲ್ಲೊವ್ಮೆ ಏಕಾಏಕಿ ಏರಿಕೆಯಾಯಿತಷ್ಟೇ. ಆ ಸಂದರ್ಭದಲ್ಲಿ ಡಾ.ಮನಮೋಹನ್ ಸಿಂಗ್ ಪಾಕಿಸ್ತಾನದೊಂದಿಗೆ ಮಾತುಕತೆಗೆ ಹೊರಟಾಗ ಮೋದಿ ಅದನ್ನು "ಬಿರಿಯಾನಿ" ರಾಜಕೀಯ ಎಂದು ಬಣ್ಣಿಸಿದ್ದನಲ್ಲವೇ. ಹಾಗಾದರೆ ಅದೇ ಮೋದಿ ಇಂದು ಚೀನಾ ಗಡಿಯಲ್ಲಿ ಸಂಘರ್ಷಗಳು ಹೆಚ್ಚುತ್ತಿರುವಂತೆಯೆ ಚೀನಾ ಪ್ರಧಾನಿಗೆ ಕೆಂಪು ಹಾಸಿನ ಸ್ವಾಗತ ನೀಡುತ್ತಿರುವುದನ್ನು ಏನೆಂದು ಕರೆಯಬೇಕು? ಇನ್ನೊಂದು ಬೆಳವಣಿಗೆಯಲ್ಲಿ ಅಮೆರಿಕ ಭೇಟಿಗೆ ಮುಂಚಿತವಾಗಿ ಸಿಎನ್‌ಎನ್ ಚಾನಲ್‌ಗೆ ಸಂದರ್ಶನ ನೀಡಿರುವ ಮೋದಿ ಭಾರತೀಯ ಮುಸ್ಲಿಮರು ದೇಶಕ್ಕಾಗಿ ಬದುಕಿ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡುತ್ತಾರೆಂಬ ಹೇಳಿಕೆ ನೀಡಿದ್ದಾನೆ. ಹೀಗೆ ತಾನು ಉತ್ತಮನೆಂದು ಬಿಂಬಿಸಲೆತ್ನಿಸುವುದರಲ್ಲಿ ಅಚ್ಚರಿಯೇನೂ ಇಲ್ಲ. ಏಕೆಂದರೆ ಪ್ರಧಾನಿಯಾದ ನಂತರ ಆತನ ಅಲ್ಪಸಂಖ್ಯಾತ ವಿರೋಧಿ ಹೇಳಿಕೆ, ದಾಳಿ ಮತ್ತಿತರ ಕಾರ್ಯಾಚರಣೆಗಳೆಲ್ಲ ಆತನ ನೆಚ್ಚಿನ ವಿಹಿಂಪ, ಬಜರಂಗ ದಳ, ಗೋರಕ್ಷಕ ದಳ ಇತ್ಯಾದಿ ತಂಡಗಳಿಗೆ ವರ್ಗಾಯಿಸಲಾಗಿದೆ. ಬಿಜೆಪಿ ಮತ್ತು ಸಂಘಪರಿವಾರದ ವಿವಿಧ ಮುಖಂಡರು ಇಂದು "ಲವ್ ಜಿಹಾದ್", "ಮದ್ರಸಗಳು ಭಯೋತ್ಪಾದನೆಯ ಕೇಂದ್ರಗಳು" ಮುಂತಾದ ಅಸ್ತಿತ್ವದಲ್ಲಿರದ ವಿಷಯಗಳನ್ನೆತ್ತಿಕೊಂಡು ಸಮಾಜದ ಧ್ರುವೀಕರಣ ನಡೆಸುತ್ತಿದ್ದಾರೆ. ಉತ್ತರ ಪ್ರದೇಶ, ರಾಜಸ್ತಾನ, ಬಿಹಾರ ಮೊದಲಾದೆಡೆ ಉಪಚುನಾವಣೆಗಳಲ್ಲಿ ಹೀನಾಯ ಸೋಲು ಅನುಭವಿಸಿದರೂ 'ಅಡಿಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎಂಬಂತೆ ಮಹಾರಾಷ್ಟ್ರ, ಗುಜರಾತ್ ಇತ್ಯಾದಿ ರಾಜ್ಯಗಳಲ್ಲಿ ಮತ್ತದೇ ಹಳಸಲು ತಂತ್ರಗಳಿಗೆ ಮೊರೆಹೋಗುತ್ತಿದ್ದಾರೆ. ಯೋಗಿ ಆದಿತ್ಯನಾಥ, ಸಾಕ್ಷಿ ಮಹಾರಾಜ್, ಉಶಾ ಠಾಕುರ್, ಮಾನೇಕಾ ಗಾಂಧಿಯಂಥವರ ನಂತರ ಇದೀಗ ಮುತಾಲಿಕ್ ಸರದಿ. ಕುಖ್ಯಾತ ಪಬ್ ದಾಳಿ ಬಳಿಕ 'ಪಿಂಕ್ ಚೆಡ್ಡಿ ಸುರಿಮಳೆ' ಚಳವಳಿಗೆ ಸೋತು




ತತ್ತರಿಸಿದ್ದ ಈತನೀಗ ಮತ್ತೊಮ್ಮೆ ಬಾಲಬಿಚ್ಚಿರುವಂತಿದೆ. ಇತ್ತೀಚೆಗೆ ಮುಂಬಯಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ 'ಲವ್ ಜಿಹಾದ್' ಮಾಡುವ ಮುಸ್ಲಿಮರನ್ನು ಗರ್ಭಾ ನೃತ್ಯಗಳಿಗೆ ಸೇರಿಸಿಕೊಳ್ಳಬಾರದೆಂದು ಫತ್ವಾ ಹೊರಡಿಸಿದ್ದಾನೆ. ಮುತಾಲಿಕನ "ಸೇವೆ"ಯ ಬೆಲೆ ಎಷ್ಟೆಂದು ಕೇಳಿದವರ ತಲೆ ನೂರು ಹೋಳಾದೀತು, ಹುಷಾರ್!

'ಲವ್ ಜಿಹಾದ್' ಎಂಬ ಹಸಿಹಸಿ ಸುಳ್ಳು ಹೇಳುವ ಈ ಸಂಘ ಪರಿವಾರಿಗರು ಎಂಥಾ ಆಷಾಢಭೂತಿಗಳು ಎನ್ನುವುದಕ್ಕೆ ಅನೇಕ ಹಿಂದೂಗಳ ಎರಡನೆ ಮದುವೆಗಳೇ ಸಾಕ್ಷಿ. ಮೊದಲನೆ ಹೆಂಡತಿ ಬದುಕಿರುವಾಗಲೇ ಮತ್ತೊಬ್ಬಳನ್ನು ಕಟ್ಟಿಕೊಳ್ಳಲು ಇವರು ಬಳಸುವ ಉಪಾಯವೇನು ಗೊತ್ತೇ? ಇಸ್ಲಾಮಿಗೆ ಮತಾಂತರ! ಭಾರತದಲ್ಲಿ 1955ರ ತನಕ ಜಾರಿಯಲ್ಲಿದ್ದ ಹಿಂದೂ ಧಾರ್ಮಿಕ ಕಾಯ್ದೆಗಳು ಒಂದಕ್ಕಿಂತ ಹೆಚ್ಚು ಮದುವೆಯಾಗುವುದಕ್ಕೆ ಅಡ್ಡಿಯಾಗಿರಲಿಲ್ಲ. ಆದರೆ 1955ರಲ್ಲಿ ಹಿಂದೂ ವಿವಾಹ ಕಾಯ್ದೆ ಜಾರಿಗೆ ಬಂತು. ಇದರ ಬಳಿಕ ದ್ವಿಪತ್ನಿತ್ವವನ್ನು ಐಪಿಸಿ ಅಡಿ ಅಪರಾಧವೆಂದು ಪರಿಗಣಿಸಲಾಗುತ್ತಿದೆ. ಆಗ ದ್ವಿತೀಯ ವಿವಾಹವಾಗುವ ಅನೇಕ ಹಿಂದೂ ಜೋಡಿಗಳು ಕಾನೂನಿನ ಕುಣಿಕೆಯಿಂದ ತಪ್ಪಿಸಲೋಸುಗ ಇಸ್ಲಾಮ್ ಧರ್ಮಕ್ಕೆ ಮತಾಂತರಗೊಳ್ಳುವ ಉಪಾಯ ಬಳಸತೊಡಗಿದರು. ಇಲ್ಲಿವೆ ಕೆಲವು ನಿದರ್ಶನಗಳು:

ಜಿತೇಂದರ್ ಮಾಥುರ್ ಎಂಬಾತನಿಗೆ 1978ರಲ್ಲಿ ಮೀನಾಕುಮಾರಿ ಜೊತೆ ವಿವಾಹವಾಗಿತ್ತು. 10 ವರ್ಷಗಳ ಬಳಿಕ ಈತನಿಗೆ ಸುನಿತಾ ನರೂಲ ಎಂಬಾಕೆಯ ಪರಿಚಯವಾಯಿತು. ನಂತರ ಇಬ್ಬರೂ ಇಸ್ಲಾಮಿಗೆ ಮತಾಂತರಗೊಂಡು ಮದುವೆಯಾದರು. 4 ತಿಂಗಳ ಬಳಿಕ ಸುನಿತಾಳನ್ನು ತ್ಯಜಿಸಿದ ಜಿತೇಂದರ್ ಮತ್ತೆ ಹಿಂದೂ ಧರ್ಮಕ್ಕೆ ಮರುಮತಾಂತರಗೊಂಡು ಪ್ರಥಮ ಪತ್ನಿಯನ್ನು ಸೇರಿಕೊಂಡ!


1988ರಲ್ಲಿ ನಡೆದಂಥ ಮತ್ತೊಂದು ಪ್ರಕರಣ ಪ್ರದೀಪ್ ಕುಮಾರ್ ಮತ್ತು ಗೀತಾ ರಾಣಿ ದಂಪತಿಯದು. ಅವರಿಬ್ಬರ ವಿವಾಹವಾಗಿ ಮೂರು ವರ್ಷಗಳಾಗುವಷ್ಟರಲ್ಲಿ ಪ್ರದೀಪ್, ದೀಪಾ ಎಂಬಾಕೆಯ ಜೊತೆ ಓಡಿಹೋದ. ಬಳಿಕ ಇಬ್ಬರೂ ಇಸ್ಲಾಮಿಗೆ ಪರಿವರ್ತಿತರಾಗಿ ಮದುವೆಯಾದರು.

ಜೆ.ಸಿ. ಘೋಷ್ ಮತ್ತು ಸುಷ್ಮಿತಾ ಮದುವೆ 1984ರಲ್ಲಿ ನಡೆದಿತ್ತು. ಘೋಷ್ 1992ರಲ್ಲಿ ವನಿತಾ ಗುಪ್ತಾ ಎಂಬಾಕೆಯ ಪ್ರೇಮಪಾಶಕ್ಕೆ ಸಿಲುಕಿದ. ಇವರು ಕೂಡ



ಇಸ್ಲಾಮಿಗೆ ಮತಾಂತರಗೊಂಡು 'ನಿಕಾ' ಮಾಡಿಕೊಂಡ

ಈ ಎರಡನೆ ವಿವಾಹಗಳೆಲ್ಲವೂ ಅಕ್ರಮವಾಗಿ ಶಿಕ್ಷಾರ್ಹ ಅಪರಾಧಗಳೆಂದು ಸುಪ್ರೀಂ ಕೋರ್ಟ್ 1995ರಲ್ಲಿ ತೀರ್ಪು ನೀಡಿದೆ. ಇದರ ಹೊರತಾಗಿಯ ಈ ರೀತಿಯ ಮೋಸದ ಮದುವೆಗಳು ಇಂದಿ ನಡೆಯುತ್ತಲೇ ಇವೆ. 2008ರಲ್ಲಿ ಹರಿಯಾಣಾ ರಾ ಉಪಮುಖ್ಯಮಂತ್ರಿ ಯಾಗಿದ್ದ ಚಂದರ್ ಮೋ ಎಂಬಾತ ವಿವಾಹಿತನಾಗಿದ್ದರೂ ಅನುರಾಧಾ ಬ (ಸಹಾಯಕ ಅಡ್ವೊಕೇಟ್ ಜನರಲ್)ಯ ಮದುವೆಯಾಗಬಯಸಿದ. ಆಗ ಇಬ್ಬರೂ ಇಸ್ಲಾ ಮತಾಂತರಗೊಂಡರಲ್ಲದೆ ಹೆಸರುಗಳನ್ನೂ 'ಚಾಂ ಮುಹಮ್ಮದ್' ಮತ್ತು 'ಫಿಜಾ' ಎಂಬುದ ಬದಲಾಯಿಸಿಕೊಂಡರು. ಆದರೆ ಅನತಿ ಕಾಲದಲ್ಲಿ 'ಚಾಂ ಮಹಮ್ಮದ್' ಮತ್ತೆ ಚಂದರ್ ಮೋಹನ್ ಆಗಿ ಪ್ರ ಪತ್ನಿಯೊಂದಿಗೆ ಇರಲಾರಂಭಿಸಿದ. ಇತ್ತ ಫಿಜಾ (ಅನುರಾ ಆತ್ಮಹತ್ಯೆ ಮಾಡಿಕೊಂಡಳು.



ಮೋದಿಯ ಅಮೆರಿಕನ್ ಉಪವಾಸ ಒಂದು ಕುತಂತ್ರ ಮಾ

ಧಾರ್ಮಿಕ ಮನೋಭಾವದ ಭಾವುಕ ಹಿಂದೂಗಳ, ಮುಖ್ಯತಃ ಮಹಿಳೆಯರ ಬೆಂಬಲ ಉಳಿಸಿಕೊಳ್ಳಲು ಮೋದಿ ಗುಂಪು ಧಾರ್ಮಿಕ ನಾಟಕಗಳನ್ನು ಆಡುತ್ತಲೇ ಇರುತ್ತದೆ ಎಂದು ಎಲ್ಲರಿಗೂ ಗೊತ್ತು. ಅದೇ ಕಾರಣಕ್ಕೆ ಈಗ ಉಪವಾಸ ವ್ರತದ ಪ್ರಹಸನಕ್ಕೆ ಇಳಿದಿದ್ದಾರೆ. ಅಮೆರಿಕದ ಅಧಿಕೃತ ಭೇಟಿಯು ನವರಾತ್ರಿ ಸಮಯವಾದುದರಿಂದ ಮೋದಿ ಅಮೆರಿಕದಲ್ಲಿಯೂ ಉಪವಾಸ ಮಾಡಿ ಕೇವಲ ನೀರು ಕುಡಿದು ಉಳಿಯುತ್ತಾರಂತೆ. ಅವರು ಎಂತಹ ಖಟ್ಟಾ ಧಾರ್ಮಿಕ ಎಂದರೆ ಅಮೆರಿಕದ ಅಧ್ಯಕ್ಷ ಒಬಾಮಾರು ಕೊಡುವ ಅಧಿಕೃತ ಸರಕಾರಿ ಔತಣಕೂಟದಲ್ಲೂ ಅವರು ಭಾಗವಹಿಸುವುದಿಲ್ಲ ಎಂದು ಭಾರತೀಯ ಮಾಧ್ಯಮಗಳೆಲ್ಲಾ ಮೋದಿಯ ತುತ್ತೂರಿ ಊದುತ್ತಿವೆ. ಆದರೆ ಪ್ರಜ್ಞಾವಂತರು ಕೇಳುತ್ತಿರುವ ಪ್ರಶ್ನೆಯೆಂದರೆ- ತನ್ನ ಈ ನವರಾತ್ರಿ ಉಪವಾಸದ ಅವಧಿ ತಪ್ಪಿಸಿ ಅಮೆರಿಕದ ಭೇಟಿ ಯಾಕೆ ಇಟ್ಟುಕೊಳ್ಳಲಿಲ್ಲ ಎಂಬುದು.

ಯಾವುದೇ ದೇಶದ ಸರಕಾರದ ಅತ್ಯುಚ್ಚ ನೇತಾರರು ಇನ್ನೊಂದು ದೇಶಕ್ಕೆ ಅಧಿಕೃತ ಭೇಟಿಗೆ ಹೋಗುವ ಎರಡು-ಮೂರು ತಿಂಗಳು ಮೊದಲೇ ಎರಡೂ ದೇಶದ ದೂತಾವಾಸದವರು ಒಂದೆಡೆ ಸೇರಿ ಎರಡೂ ಕಡೆಯವರ ಅನುಕೂಲ ನೋಡಿಕೊಂಡು ಎರಡೂ ದೇಶದ ಗಣ್ಯರ ವೈಯಕ್ತಿಕ ಸಲಹೆ ಪಡೆದು ನಂತರವೇ ಪ್ರವಾಸದ ದಿನ ನಿಗದಿ ಮಾಡುವುದು. ಹಾಗಿರುವಾಗ ಭಾರತ ಮತ್ತು ಅಮೆರಿಕದ ದೂತಾವಾಸದವರು ಹಾಗೂ ಅಮೆರಿಕದ ವೈಟ್ ಹೌಸ್ ಅಧಿಕಾರಿಗಳು ಮತ್ತು ಭಾರತದ ಪ್ರಧಾನಮಂತ್ರಿ ಕಚೇರಿಯವರು ಈ ವಿಷಯ ಪರಸ್ಪರ ಚರ್ಚಿಸುತ್ತಿದ್ದಾಗ ಸ್ವತಃ ಮೋದಿ ಅಥವಾ ಅವರ ಸೆಕ್ರೆಟರಿ ಈ ನವರಾತ್ರಿ ಉಪವಾಸದ ವಿಷಯ ಅಮೆರಿಕದ ಪ್ರತಿನಿಧಿಗಳಿಗೆ ತಿಳಿಸಿ ಬೇರೆ ದಿನಾಂಕ ನಿಗದಿ ಮಾಡಲು ತಿಳಿಸಬಹುದಿತ್ತಲ್ಲವೇ? ಆದರೆ ಹಾಗೆ ಮಾಡದೇ ಈ ನವರಾತ್ರಿ ಸಮಯವನ್ನೇ ಮೋದಿ ಕಡೆಯವರು ಆರಿಸಲು ಮುಖ್ಯ ಕಾರಣ ಈ ಪ್ರವಾಸದ ಆದಿಯಲ್ಲೂ ಹಿಂದೂ ವೋಟ್ ಬ್ಯಾಂಕ್ ಸೃಷ್ಟಿಸುವುದು!

ಇನ್ನು ದೇವರ ವಿಷಯದಲ್ಲಿ ಭಾರತೀಯ ವಿದ್ಯಾವಂತರೂ ಪ್ರದರ್ಶಿಸುವ ಮೌಢ್ಯ ಜಗತ್ತಿಗೆಲ್ಲಾ ಗೊತ್ತಿದೆ. ಸರಕಾರಿ ಕಚೇರಿಗಳಲ್ಲೇ ನೋಡಿ. ಕೆಳಗಿನ ನೌಕರನ ತಾಯಿ ಸಾಯುವ ಸ್ಥಿತಿಯಲ್ಲಿದ್ದಾರೆಂದರೂ ರಜೆ ಕೊಡದವರು ಮೇಲಧಿಕಾರಿಯು ತನ್ನ ಮನೆಯಲ್ಲಿ ಸತ್ಯನಾರಾಯಣ ಪೂಜೆಯಿದೆ ಎಂದು ಸುಳ್ಳು ಹೇಳಿದರೂ ತಕ್ಷಣ ರಜೆ ಕೊಡುತ್ತಾರೆ. ನೌಕರನ ಸ್ವಂತ ತಂಗಿಯ ಮದುವೆಗೆ ರಜೆ ನಿರಾಕರಿಸುವ ಮೇಲಧಿಕಾರಿ ದೇವರ ಮದುವೆಗೆ (ಶ್ರೀನಿವಾಸ ಕಲ್ಯಾಣೋತ್ಸವಕ್ಕೆ) ರಜೆ ಕೇಳಿದರೆ ತಕ್ಷಣ ಮಂಜೂರು ಮಾಡುತ್ತಾನೆ. ಮಹಿಳಾ ನೌಕರರಿಗೆ ಅಸೌಖ್ಯವಾಗಿರುವಾಗ ರಜೆ ಕೊಡದಿದ್ದರೂ ವ್ರತ ಉಪವಾಸದ ನೆಪದಲ್ಲಿ ಮಹಿಳೆಯರು ಬೇಕಾದಷ್ಟು ರಜೆ ಪಡೆಯಲು ಮೇಲಧಿಕಾರಿ ಒಪ್ಪುತ್ತಾನೆ. ಇಂತಹ ಮನಸ್ಥಿತಿಯಿರುವ ಭಾರತೀಯ ಸಮಾಜದಲ್ಲಿ ಮೋದಿಯ ಉಪವಾಸದ ನಾಟಕ ಎಷ್ಟೊಂದು ಪರಿಣಾಮಕಾರಿಯಾಗಿ ಮತದಾರರ ಮನಸ್ಸು ಗೆಲ್ಲಬಲ್ಲದು ಊಹಿಸಿ!

ಭಾರತೀಯರ ಇಂತಹ ಧಾರ್ಮಿಕ ದೌರ್ಬಲ್ಯಗಳನ್ನೇ ನಗದೀಕರಿಸಲು ಈಗ ಬಿಜೆಪಿಯವರು ಹೆಣೆದಿರುವ ಮನೋವೈಜ್ಞಾನಿಕ ತಂತ್ರವೇ ಈ ಅಮೆರಿಕನ್ ಉಪವಾಸ! ಎಷ್ಟಾದರೂ ಇನ್ನು ಕೆಲವೇ ದಿನಗಳಲ್ಲಿ ಮಹಾರಾಷ್ಟ್ರದಂತಹ ಪ್ರಮುಖ ರಾಜ್ಯದಲ್ಲಿ ವಿಧಾನಸಭಾ ಚುನಾವಣೆಯಿದೆ ತಾನೇ.

ನಾನು ಮುಂಬೈಯಲ್ಲಿ ಹದಿನಾರು ವರ್ಷ ಹಾಗೂ ಗುಜರಾತಿನಲ್ಲಿ ಮೂರು ವರ್ಷ ಬ್ಯಾಂಕ್ ಸರ್ವಿಸ್ ಮಾಡಿದ್ದೇನೆ. ನವರಾತ್ರಿ ಸಮಯದಲ್ಲಿ ರಾತ್ರಿಯಿಡೀ ನಡೆಯುವ ಗರ್ಬಾ-ಕೋಲಾಟ ಕುಣಿತಕ್ಕೆ ಹೆಚ್ಚು ಶಕ್ತಿ ಬೇಕೆಂದು ಗುಜರಾತಿಗಳು ಬೇರೆ ದಿನಗಳಲ್ಲಿ ತಿನ್ನುವುದಕ್ಕಿಂತ ಹೆಚ್ಚು ವಿವಿಧ ಭಕ್ಷ್ಯಗಳನ್ನು ನವರಾತ್ರಿಯಲ್ಲಿ ತಿನ್ನುತ್ತಾರೆ. ಕುಣಿತದ ನಡು-ನಡುವೆ ಹೋಗಿ ತಿಂದು ಬರುತ್ತಾರೆ. ಕೇವಲ ನೀರು ಕುಡಿದು ನವರಾತ್ರಿ ಉಪವಾಸ ಮಾಡುವ ಒಬ್ಬನೇ ಒಬ್ಬ ಗುಜರಾತಿಯನ್ನು ನಾನು ನೋಡಿಲ್ಲ. ಆದರೆ ಈಗ ಬಿಜೆಪಿಯಲ್ಲಿ ಅಮಿತ್ ಷಾ ಎಂಬ ಅಪರಿಮಿತ ವಿಷ ಸ್ಟ್ರಾಟೆಜಿಸ್ಟ್ ಆಗಿರುವುದರಿಂದ ಮೋದಿ ಉಪವಾಸದ ಭರ್ಜರಿ ಪ್ರಚಾರ ನಡೆಯುತ್ತಿದೆ ಅಷ್ಟೇ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಪುರೋಹಿತಶಾಹಿತನ ಈ ದೇಶಕ್ಕಂಟಿದ ಬಲುದೊಡ್ಡ ಶಾಪ

ಹಿರಿಯ ಸಾಹಿತಿ ದೇ ಜವರೇಗೌಡರು ಪುಸ್ತಕ ಬಿಡುಗಡೆ ಸಮಾರಂಭವೊಂದರಲ್ಲಿ ವ್ಯಕ್ತಪಡಿಸಿರುವ ಪುರೋಹಿತಶಾಹಿಯ ಕುರಿತ ಹೇಳಿಕೆ ಇದೀಗ ತೀವ್ರ ಚರ್ಚೆಗೆ ಗ್ರಾಸವಾಗಿದೆ. "ಪುರೋಹಿತಶಾಹಿ ವ್ಯವಸ್ಥೆ ಈ ದೇಶದಿಂದ ತೊಲಗುವ ವರೆಗೂ ಇಲ್ಲಿ ಶಾಂತಿಯಿಲ್ಲ" ಎಂಬ ಅವರ ಕಟುಸತ್ಯದ ಈ ಮಾತು ಕೆಲವರಿಗೆ ಅಪಥ್ಯವಾಗಿ ತೋರಿದೆಯಂತೆ. ಆದರೆ ಪುರೋಹಿತಶಾಹಿಯ ಕಬಂಧ ಹಿಡಿತದ ವಿರುದ್ಧ ಹಿಂದಿನಕಾಲದಿಂದಲೂ ಬುದ್ಧ ಬಸವಾದಿಗಳಂತವರಿಂದ ಹಲವಾರು ಚಳವಳಿ ಹಾಗು ಪ್ರತಿರೋಧಗಳನ್ನು ಈ ದೇಶದ ಇತಿಹಾಸ ದಾಖಲಿಸುತ್ತಲೇ ಬಂದಿವೆ. ಈ ಕಾರಣಕ್ಕೆ ದೇಜಗೌ ಅವರ ಈ ಮಾತು ಒಂದು ಸಾಂದರ್ಭಿಕ ಮರು ನೆನಪಿಸಿಕೊಳ್ಳುವಿಕೆಯೇ ವಿನಃ ಹೊಸವಿಚಾರವೇನೂ ಅಲ್ಲ. ಅದೇ ರೀತಿ ಈ ದರಿದ್ರ ಪುರೋಹಿತಶಾಹಿಯ ಕುರಿತ ಆಕ್ರೋಶ ಇಂದು ನಿನ್ನೆಯದ್ದೂ ಅಲ್ಲ.

ಒಂದು ದಿನ ಕುವೆಂಪುರವರು ತಮ್ಮ ಮನೆಗೆ ಬೆಳಗ್ಗೆ ಪೇಪರ್ ಹಾಕುವ ಹುಡುಗನಿಗೆ ಚೆನ್ನಾಗಿ ಬೈಯ್ಯುತ್ತಿದ್ದರಂತೆ. ಯಾವಾಗ ನೋಡಿದರೂ ಈ ಅನ್ ಪ್ರೊಡಕ್ಟಿವ್ (ಕೂಳುದಂಡ) ಸ್ವಾಮೀಜಿಗಳ, ಧಾರ್ಮಿಕ ಮುಖಂಡರುಗಳ, ಖಾವಿಧಾರಿಗಳ ಸುದ್ದಿಯೇ ಈ ಪೇಪರುಗಳ ಪ್ರಮುಖ ಸುದ್ದಿಯಾಗಿ ಬರುತ್ತಿರುವುದನ್ನು ನೋಡಿ ನೋಡಿ ಅವರಿಗೆ ರೋಸಿಹೋಗಿತ್ತಂತೆ. ಆಗ ಅವರಿಗೆ ಸಿಕ್ಕಿದ್ದು ಆ ಪಾಪ ಈ ಬಡಪಾಯಿ ಪೇಪರ್ ಹುಡುಗ (ಕುವೆಂಪು ಕುರಿತ ಸಂದರ್ಶನ ಒಂದರಲ್ಲಿ ತೇಜಸ್ವಿ ಸ್ಮರಿಸಿಕೊಂಡಿದ್ದು).

ಸ್ವಾಮಿ ವಿವೇಕಾನಂದರು ಕೇರಳದಲ್ಲಿ ಪುರೋಹಿತಶಾಹಿಗಳ ಅಮಾನವೀಯ ಅಟ್ಟಹಾಸವನ್ನು ಕಂಡು ಇದು "ಹುಚ್ಚರ ಸಂತೆ" ಎಂದು ಹಿಗ್ಗಾಮುಗ್ಗಾ ಜರೆದಿದ್ದರು.

ದೇಜಗೌ ತರಹದ ಹಿರಿಯರ ಈ ಮಾತಿಗೆ ಕೆರಳಿದ ಅದ್ಯಾರೋ ರಂಗನಾಥ ಶರ್ಮನೆಂಬ ಘೇಂಡಾಮೃಗವೊಂದು ಟಿವಿಯಲ್ಲಿ ದೇಜಗೌರವರಿಗೆ ಬುದ್ಧಿಭ್ರಮಣೆಯಾಗಿದೆ ಎಂದು ಹೇಳಿದನಲ್ಲದೇ ಅನಂತಮೂರ್ತಿಯವರಿಗೆ ಆದ 'ಶಾಸ್ತಿ'ಯ ಬಗ್ಗೆಯೂ ಪ್ರಸ್ತಾಪಿಸಿದ್ದಾನೆ.

ಹೌದು ಮಾರಾಯ, ಬುದ್ಧಿ ಭ್ರಮಣೆಯಾಗಿರುವುದು ಇನ್ನಿತರ ಅಬ್ರಾಹ್ಮಣರಿಗೇ ಹೊರತು ದೇಜಗೌರಿಗಲ್ಲ. ಹುಟ್ಟಿನ ಹುಸಿ ಶ್ರೇಷ್ಠತೆಯ ಭ್ರಮೆಯನ್ನು ಸಮಾಜದಲ್ಲಿ ಹಬ್ಬಿಸಿ, ಭೂಸುರರೆಂದು ರಾಜಪ್ರಭುತ್ವವನ್ನೇ ತಮ್ಮ ಅಂಕೆಯಲ್ಲಿಟ್ಟುಕೊಂಡು, ಇತರರನ್ನು ತಮ್ಮ ಸೇವೆಗೆ ದೂಡಿ, ಇತಿಹಾಸದುದ್ದಕ್ಕೂ ಬೆವರಿಳಿಸದೇ ತುಪ್ಪದೂಟವನ್ನು ಉಂಡ ಈ ನಿಮ್ಮ ವರ್ಗ ಇತರರಿಗೆ ವಿದ್ಯೆ ಜ್ಞಾನದ ಅವಕಾಶವನ್ನೇ ತಪ್ಪಿಸಿದ್ದು ಇದೇ ದಾಸ್ಯತ್ವದ ಕಾರಣಕ್ಕೇ ತಾನೆ? ಕಾ ಪಲ್ಲಟಗಳ ಕಾರಣ ಮರಳಿ ವಿದ್ಯೆ -ಜ್ಞಾನಗಳ ಬ ನಮ್ಮೆಡೆಗೂ ಈಗ ಹರಿಯತೊಡಗಿದೆ. ಅದೇರೀತಿ ಆಟ ಹೂರಣಗಳೆಲ್ಲ ಒಂದೊಂದಾಗೇ ಬಯಲಾಗು ಅದರ ಪ್ರತಿಫಲನವೇ ದೇಜಗೌರಂತವರ ಮಾತು.

- ಶಶಿ ಪುತ್ತೂರು

ಎಲ್ಲಾ ಸಂಸ್ಥಾನಗಳು ವಿಲೀನ ದಿನಾಚರಣೆ ಆಚರಿಸಿದರೆ 15ನೇ ಆಗಸ್ಟ್‌ನ ಔಚಿತ್ಯವೇನು?

ಹೈದ್ರಾಬಾದ ಕರ್ನಾಟಕ ವಿಭಾಗದಲ್ಲಿ ನಡೆದ 19 ದೌರ್ಜನ್ಯಗಳ ಬಗ್ಗೆ ತಾವು ವರದಿ ಮಾ ಅಭಿನಂದನಾರ್ಹವಾಗಿದೆ. ವಾಸ್ತವವಾಗಿ ಹೈದ್ರಾಬ ಆಡಳಿತದಲ್ಲಿ 16 ಜಿಲ್ಲೆಗಳಿದ್ದವು. ಆ ಜಿಲ್ಲೆಗಳಲ್ಲಿ ರಜಾಕ ಹಲವಾರು ದೌರ್ಜನ್ಯಗಳು ಮಾಡಿದ್ದು ಸರಿಯಷ್ಟೇ. 17ನೇ ಸೆಪ್ಟೆಂಬರ್ 1948 ರಿಂದ ಮೇಜರ್ ಜ ಜೆ.ಎನ್.ಚೌಧರಿ ಅವರ ಸೈನಿಕರಿಗೆ ಹೈದ್ರಾ ಸಂಸ್ಥಾನವನ್ನು ಒಪ್ಪಿಸಲಾಯಿತು. ಸದರಿ ಸೈನಿಕರು ಸು ಒಂದು ವರ್ಷದವರೆಗೆ 'ಆಪರೇಶನ್ ಪೋಲೋ' ಹೆಸರಿನಲ್ಲಿ ಈ ಸಂಸ್ಥಾನದಲ್ಲಿದ್ದ ಪ್ರತಿಯೊಂದು ಮು ಮನೆಗಳನ್ನು ಜಾಲಾಡಿದ್ದರು. ಅಷ್ಟೇ ಅಲ್ಲ, ಸಾಲುಸಾ ಮುಸ್ಲಿಮ್ಮರನ್ನು ನಿಲ್ಲಿಸಿ ಗುಂಡಿಕ್ಕಿ ಕೊಲೆ ಮಾಡಿದ ಹ ಉದಾಹರಣೆಗಳೂ ಸಿಗುತ್ತವೆ. ಉದ್ದ ಕೂ ಯಾವುದಾದರೂ ಮುಸ್ಲಿಮ್ ತರುಣ ಕಂಡು ಅವನನ್ನು ರಜಾಕಾರನೆಂದು ಭಾವಿಸಿ ಮಾಡಲಾಗುತ್ತಿತ್ತು. ಏಕೆಂದರೆ ರಜಾಕಾರರು ಗಡ್ಡಗಳನ್ನು ಹೊಂದಿರುತಿದ್ದರು. ಅದೇ ವೇಳೆಯಲ್ಲಿ ಸೇನಾನಿಗಳೆಂದು ಹೇಳಿಕೊಳ್ಳುತ್ತಿದ್ದ ಜನರು "ಮು ಹಿಂದೂಗಳನ್ನು ಕಗ್ಗೊಲೆ ಮಾಡಿದರು. ಹಿಂ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿದರು" ಎಂದೆಲ್ಲ ಹಾಕಿದ್ದರು. ಆಗ ತಮ್ಮ ರಕ್ಷಣೆಗೆ ಅನೇಕ ಮು ತಮ್ಮ ಕೈಗಳ ಮೇಲೆ ಹಿಂದೂಗಳಂತೆ ಹಚ್ಚೆ ಹಾಕಿಸಿಕೊಂಡು ಬಚಾವ್ ಆದ ಉದಾಹರಣೆಗಳ ಆ ಕಾಲದಲ್ಲಿ ರಜಾಕಾರರಿಗಿಂತ 3-4 ಪಟ್ಟು ಸೇಡನ್ನು ಹಿಂದೂಗಳು ಮುಸ್ಲಿಮರ ತೀರಿಸಿಕೊಂಡಿದ್ದರು.

ಈಗ ಇಂತಹ ಗಾಯವನ್ನು ಮುಸ್ಲಿಮರು ಮ ಯತ್ನಿಸುತ್ತಿರುವಾಗ ಪುನಃ ಹೈದ್ರಾಬಾದ ಕ ವಿಮೋಚನಾ ದಿನಾಚರಣೆಯ ನೆಪದಲ್ಲಿ ನೆನಪಿಸಲಾಗುತ್ತಿದೆ.

1998 ರಲ್ಲಿ ಗುಲಬರ್ಗಾದಲ್ಲಿ ಸರ್ದಾರ ವಲ್ಲ ಪಟೇಲರ ಮೂರ್ತಿಯನ್ನು ಪ್ರತಿಷ್ಠಾಪಿಸುವ ಹಾಗು ಶತಮಾನೋತ್ಸವವನ್ನು ಆಚರಿಸುತ್ತಾ ಕಾಮರೇಡ್ ಗ ನಮೋ ಅವರ ಮಗನಾದ ಶೈಲ ನಮೋ

...ಲ್ ಸ್ಮಿತ್ ಎಂಬ ಪವರ್ ಸ್ಟಾರ್



...ದ್ಧಿ ಮರ್ಜಿಯನ್ನು ಹೋಲುವ ನಟ ವಿಲ್ ಸ್ಮಿತ್. ...ಹೆಸರು ವಿಲಿಯಮ್ ಸ್ಮಿತ್. ಈತನ ತಂದೆ ...ಶನ್ ಇಂಜಿನಿಯರ್, ತಾಯಿ ಶಾಲೆಯೊಂದರ ...ಧಿಕಾರಿ. ನಲವತ್ತೈದು ವರ್ಷದ ಸ್ಮಿತ್ ಎತ್ತರದ ...ಕಪ್ಪು ಬಣ್ಣ, ಅಗಲ ಕಿವಿಗಳ ಮೂಲಕ ವಿಶಿಷ್ಟ ...ಹೊರಹೊಮ್ಮಿದಾತ. ಈತ ನಟಿಸಿರುವ 'ಬ್ಯಾಡ್ ...', 'ಇಂಡಿಪೆಂಡೆನ್ಸ್ ಡೇ', 'ಮೆನ್ ಇನ್ ಬ್ಲಾಕ್', ...ಆಫ್ ದಿ ಸ್ಟೇಟ್', 'ಅಲಿ', 'ದಿ ಪರ್ಸ್ಯೂಟ್ ...ಹ್ಯಾಪಿನೆಸ್', 'ಐಯಾಮ್ ಲೆಜೆಂಡ್', 'ಆಫ್ಟರ್ ...' ಚಿತ್ರಗಳನ್ನು ನೋಡಿದವರಿಗೆ ವಿಲ್ ಸ್ಮಿತ್‌ನ ...ತನ, ಲವಲವಿಕೆ, ಕಲೆ, ಪ್ರಬುದ್ಧತೆಯು ...ವಾಗುತ್ತದೆ. ಇವತ್ತು ವಿಲ್ ಸ್ಮಿತ್ ಜಗತ್ತಿನ ...ಮ ನಟರಲ್ಲಿ ಒಬ್ಬ; ಬಿಳಿಯರ ಅಬ್ಬರದ ನಡುವೆ ...ಬಣ್ಣದ ನಟ ಹೆಮ್ಮೆಯ ಸಾಧಕ.

...ಪ್ಪಿ ಮಾತ್ರವಾಗಿದ್ದರೆ, ಸ್ಮಿತ್ ಕೇವಲ ನಟನಾಗಿದ್ದರೆ, ...ರ್ಚಿಸಬೇಕಾದ ಅಗತ್ಯವಿರಲಿಲ್ಲ. ವಿಲ್ ಸ್ಮಿತ್ ...ಗಿಯೂ ಇಷ್ಟವಾಗುವಾತ. ಈತ ಪರದೆಯ ಮೇಲೆ ...ಳ್ಳುವುದು ಪಾತ್ರಗಳಾಗಿ ಮಾತ್ರ. ಅಮೆರಿಕದ ...ಷ್ಟೆ ಪೊಳ್ಳು ದೊಡ್ಡಸ್ತಿಕೆಯ ಪರಿಸರದಲ್ಲಿ ಈತನದು ...ನಸಿನ ಮಾತಿಗೆ ಕಿವಿಗೊಡುವ ವ್ಯಕ್ತಿತ್ವ; ಬರಾಕ್ ...ನನ್ನು ಬೆಂಬಲಿಸುವ ಸ್ಮಿತ್ ಸಾಮಾಜಿಕ ...ಯನ್ನು ಹೊಂದಿರುವ ವ್ಯಕ್ತಿ. ಎಲ್ಲಾ ಹಸಿದವರು, ...ರು ತನ್ನವರೆಂದು ಭಾವಿಸುವ ಗುಣ. ಆದರೆ ...ಜನರು ಹುಚ್ಚು ಸಿದ್ಧಾಂತ ಎಂದು ನಂಬಿರುವ ...ಆಫ್ ಸೈಂಟಾಲಜಿ' ಎಂಬ ಪಂಥದಲ್ಲಿ ಈಗನಿಗೆ ... ನಂಬಿಕೆ. "ಈ ಸೈಂಟಾಲಜಿ ಎಂಬ ಸಿದ್ಧಾಂತವು ಅದ್ಭುತವಾಗಿದ್ದು ಧರ್ಮನಿಷ್ಠೆಯಿಂದ ದೂರವಿದೆ" ಎಂದು ವಾದಿಸುವ್ ಅವಿಲ್ ಈ ಸಿದ್ಧಾಂತವನ್ನು ಹರಡುವವರಿಗೆ ಮಿಲಿಯನ್‌ಗಟ್ಟಲೆ ಡಾಲರ್‌ಗಳನ್ನು ದಾನ ಮಾಡಿದ್ದಾನೆ.

ಸಿನಿಮಾಗೆ ಬರುವ ಮುಂಚೆ ತನ್ನ ಬಾಲ್ಯದ ಗೆಳೆಯ ಜೆಫ್ರಿ ಜೊತೆ ಸೇರಿಕೊಂಡು 'ಡಿಜೆ ಜಾಝಿ ಜೆಫ್ - ದಿ ಫ್ರೆಶ್ ಪ್ರಿನ್ಸ್'ಗಾಗಿ ಯೂರೋಪ್ ಶೈಲಿಯಲ್ಲಿ ಹಾಡುವುದು, ಇತ್ಯಾದಿಗಳನ್ನು ಮಾಡುತ್ತಾ ಜನರನ್ನು ರಂಜಿಸುತ್ತಿದ್ದ. ಅಲ್ಲಿಂದಾಚೆಗೆ ತನ್ನ ಪ್ರತಿಭೆಯನ್ನು ದೊಡ್ಡಮಟ್ಟದಲ್ಲಿ ಹೊರಹಾಕಲು ನಿರ್ಧರಿಸಿ ಜಗತ್ತಿನ ಶ್ರೇಷ್ಠನಟನಾಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ. ಆ ನಿಟ್ಟಿನಲ್ಲಿ 1993ರಲ್ಲಿ 'ಸಿಕ್ಸ್ ಡಿಗ್ರೀಸ್ ಆಫ್ ಸೆಪರೇಶನ್'ದಲ್ಲಿ ಮೊಟ್ಟಮೊದಲಬಾರಿಗೆ ಪಾತ್ರ ಮಾಡಿದ. ಆ ಚಿತ್ರದ ಮೂಲಕ ಜನರ ಗಮನವನ್ನು ಸೆಳೆದ. ಆನಂತರ ಆತ ನಟಿಸಿದ್ದು ಮಾರ್ಟಿನ್ ಲಾರೆನ್ಸ್ ಜೊತೆ 'ಬ್ಯಾಡ್ ಬಾಯ್ಸ್' ಸಿನಿಮಾದಲ್ಲಿ. ಆ ಚಿತ್ರದಲ್ಲಿ ಚುರುಕಾಗಿ ಕಂಡ ವಿಲ್ ಸ್ಮಿತ್‌ಗೆ ಹೆಸರಾಂತ ನಿರ್ದೇಶಕ ರೋನಾಲ್ಡ್ ಎಮೆರಿಕ್ ತನ್ನ ಮುಂದಿನ ಚಿತ್ರ 'ಇಂಡಿಪೆಂಡೆನ್ಸ್'ನಲ್ಲಿ ವಿಲ್ ಸಿಮಿತ್‌ಗೆ ಮಹತ್ವದ ಪಾತ್ರ ಕೊಟ್ಟ. ಈ ಸಿನಿಮಾ ದೊಡ್ಡ ಹಿಟ್ ಆಗಿದ್ದರಿಂದ ಸ್ಮಿತ್ ರಾತ್ರೋರಾತ್ರಿ ದೊಡ್ಡ ಸ್ಟಾರಾಗಿ ಮಾರ್ಪಟ್ಟ.

ಅಲ್ಲಿಂದಾಚೆಗೆ ಒಂದರ ಮೇಲೆ ಒಂದರಂತೆ ಹಿಟ್ ಕೊಡುತ್ತಲೇ ಹೋದ ಸ್ಮಿತ್ ಬದುಕನ್ನು ಗ್ರಹಿಸಿದ್ದು ಮಾತ್ರ ತಾನು ಮಾಡಿದ ಪಾತ್ರಗಳ ಮೂಲಕ, ತನ್ನ ಸುತ್ತಲ ಜನರ ಮೂಲಕ, ಜೀವನ ಮೊಗೆದು ಕೊಟ್ಟ ಅಮೂಲ್ಯ ಅನುಭವಗಳ ಮೂಲಕ. "ನನ್ನ ಅಮ್ಮ ಫಿಲಡೆಲ್ಫಿಯಾ ರಾಜ್ಯದ ಶಾಲಾ ಇಲಾಖೆಯಲ್ಲಿ ಅಧಿಕಾರಿಯಾಗಿದ್ದರು. ಆಗ ಪ್ರತಿಷ್ಠಿತ ಎಮ್‌ಐಟಿ ಸಂಸ್ಥೆಯಲ್ಲಿ ಹಿರಿಯ ಸ್ಥಾನದಲ್ಲಿದ್ದವರೊಬ್ಬರು ಅಮ್ಮನ ಸ್ನೇಹಿತರಾಗಿದ್ದರು. ನನಗೂ ಹೈಸ್ಕೂಲಿನಲ್ಲಿ ಹೆಚ್ಚು ಅಂಕಿಗಳು ಬಂದಿದ್ದವು. ಜೊತೆಗೆ ಎಮ್‌ಐಟಿ ಕಪ್ಪು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಅವರಿಗೆ ಸುಲಭವಾಗಿ ಪ್ರವೇಶ ನೀಡುತ್ತಿತ್ತು. ಈ ಕಾರಣಗಳಿಗೆ ನನಗೆ ಎಮ್‌ಐಟಿಯಲ್ಲಿ ಸುಲಭವಾಗಿ ಅಲ್ಲಿ ಸೀಟ್ ಸಿಗುತ್ತಿತ್ತು. ಆದರೆ ಕಾಲೇಜಿಗೆ ಹೋಗುವ ಇರಾದೆ ನನಗಿರಲಿಲ್ಲ" ಎನ್ನುವ ವಿಲ್ ಸ್ಮಿತ್ ಮಾತುಗಳಲ್ಲಿಯೇ ಗೊತ್ತಾಗುತ್ತದೆ ಆತನಿಗೆ ನಾಲ್ಕು ಗೋಡೆಗಳ ನಡುವಿನ ಒತ್ತಾಯದ ಬೋಧನೆ, ಕೃತಕ ಶಿಕ್ಷಣದ ಬಗ್ಗೆ ಒಲವಿರಲಿಲ್ಲವೆಂದು.

ಸ್ಮಿತ್ ಎರಡು ಬಾರಿ ಮದುವೆ ಆಗಿದ್ದಾನೆ. ಶಿರೀ ಜಾಮ್‌ಪಿನೊ ಈತನ ಮೊದಲ ಪತ್ನಿ. ಅವರಿಬ್ಬರಿಗೂ ಒಂದು ಮಗುವಿದೆ. ಎರಡನೆ ಬಾರಿಗೆ ಸ್ಮಿತ್ ಮದುವೆಯಾಗಿದ್ದ ಜಾಡಾ ಕೊರೆನ್ ಪಿಂಕೆಟ್ ಎಂಬ ನಟಿಯನ್ನು. ಈಗ ಅವರಿಬ್ಬರಿಗೆ ಇಬ್ಬರು ಮಕ್ಕಳಿದ್ದಾರೆ.

ವಿಲ್ ಸ್ಮಿತ್ ಅಂದರೆ ಅಭಿಮಾನಿಗಳಿಗೆ ಅದೆಂಥದೋ ಹುಚ್ಚು ಅದರಲ್ಲೂ ಹುಡುಗಿಯರಿಗಂತೂ ಈತನನ್ನು ಕಂಡರೆ ಅದೇನೋ ಆಕರ್ಷಣೆ. ಕಳೆದ ಜುಲೈ ತಿಂಗಳಿನಲ್ಲಿ ಸ್ಮಿತ್ ತನ್ನ ಕುಟುಂಬದೊಂದಿಗೆ ರಜಾ ದಿನಗಳನ್ನು ಕಳೆಯಲೆಂದು ಸ್ಪೇನ್ ದೇಶಕ್ಕೆ ಹೋಗಿದ್ದ. ಆತ ಇಬಿಜಾ ನಗರದಲ್ಲಿದ್ದಾಗ ಅನೇಕ ಅಭಿಮಾನಿಗಳು ಸ್ಮಿತ್‌ನ ಫೋಟೋಗ್ರಾಫ್, ಆಟೋಗ್ರಾಫ್‌ಗಾಗಿ ಮುಗಿಬಿದ್ದರು. ಆ ಪೈಕಿ ಬಿಲಿಸಿಗೆ ಮೈಚೆಲ್ಲಿ ಮಲಗಿದ್ದ ಒಬ್ಬ ಟಾಪ್ ಲೆಸ್ ಹುಡುಗಿ ಸ್ಮಿತ್‌ನನ್ನು ಅಪ್ಪಿಕೊಂಡು ಫೋಟೋ ತೆಗೆಸಿಕೊಂಡಳು.

ಚಿತ್ರೀಕರಣ ವೇಳೆ, ರೆಸ್ಟೋರೆಂಟ್‌ಗಳಿಗೆ ಹೋದಾಗ ಸ್ಮಿತ್ ಸುತ್ತ ಅಭಿಮಾನಿಗಳು ತುಂಬಿಕೊಂಡಿರುತ್ತಾರೆ. ಆತ ಕೂಡ ಅಷ್ಟೇ ಪ್ರೀತಿಯಿಂದ ಅವರ ಮನಸಿಗೆ ನೋವಾಗದಂತೆ ಸಂಭಾಳಿಸುತ್ತಾನೆ; ಜನರ ಮಧ್ಯೆ ಓಡಾಡುವ ಸಾಮಾನ್ಯ ವ್ಯಕ್ತಿಯೊಬ್ಬ ಅಕಸ್ಮಾತ್ ಸ್ಟಾರ್ ಆದ ನಂತರ ಅದೇ ಜನರಿಂದ ದೂರವಿರಲು, ಕಾರಿನ ಗ್ಲಾಸನ್ನು ಮೇಲೇರಿಸಿಕೊಂಡು ಹೋಗುವ, ಯಾರ ಕಣ್ಣಿಗೂ ಬೀಳದಂತೆ ತಾವೇನೋ ಮಹಾನ್ ಸೆಲೆಬ್ರಿಟಿ ಎಂಬ ಭ್ರಮೆಯಲ್ಲಿ ಓಡಾಡುವ ಭಾರತದಂಥ ದೇಶದ ಸೀಮಿತ ಚೌಕಟ್ಟಿನ ನಟರು ವಿಲ್ ಸ್ಮಿತ್ ಥರದವರಿಂದ ಕಲಿಯಬೇಕಾದುದು ಬಹಳಷ್ಟಿದೆ ಅನ್ನಿಸುವುದು ಇಂಥ ಸಂದರ್ಭಗಳನ್ನು ನೆನೆದಾಗಲೇ.

ಅಷ್ಟು ವಿಹಾರಪ್ರಿಯ ಅನ್ನಿಸುವಂತೆ ಜೀವಿಸುವ ವಿಲ್ ಸ್ಮಿತ್ ಇತ್ತೀಚೆಗಷ್ಟೇ ಹವಾಯಿ ಬೀಚಿನಲ್ಲಿ ತನ್ನ ಮಡದಿ ಜಾಡಾಳನ್ನು ಚುಂಬಿಸುತ್ತಿದ್ದ ಫೋಟೋಗಳು ಎಲ್ಲಾ ಕಡೆ ಪ್ರಸಾರವಾಗಿದ್ದವು; ಕೆಂಪು-ನೀಲಿ ಬಣ್ಣದ ಬಿಕಿನಿ ಧರಿಸಿದ್ದ ನಲವತ್ತೆರಡು ವರ್ಷದ ಜಾಡಾ ಪತಿ ಸ್ಮಿತ್‌ನ ಕೈಯನ್ನು ಗಟ್ಟಿಯಾಗಿ ಹಿಡಿದು ಹಿತವಾಗಿ ಚುಂಬಿಸಿದ್ದಳು; ಫೋಟೋಗ್ರಾಫರ್‌ಗಳು ಈ ವಿವಾದಾತ್ಮಕ ದೃಶ್ಯವನ್ನು ತಮ್ಮ ಫೋಟೋಗಳಲ್ಲಿ ಸೆರೆ ಹಿಡಿದರೆ ಏನು ಗತಿ? ಎಂಬ ಕೆಲವರ ಆತಂಕಕ್ಕೆ ಜಾಡಾ ಹೇಳಿದ್ದು "ಆ ಫೋಟೋಗಳಲ್ಲಾಗಲಿ, ಆ ಸಂದರ್ಭದಲ್ಲಾಗಲಿ ಎಂತಹದ್ದೇ ಲೈಂಗಿಕತೆ ಇರಲಿಲ್ಲ" ಎಂದು! ಇಂತಹ ಬೋಲ್ಡ್ ಹೆಂಡತಿಯ ಜೊತೆ ವಿಲ್ ಸ್ಮಿತ್ ತನ್ನ ಬದುಕನ್ನು ಖುಷಿಖುಷಿಯಾಗಿ ಕಟ್ಟಿಕೊಳ್ಳುವುದರಲ್ಲಿ, ಲೋಕದ ಗೊಡವೆಗೆ ಹೋಗದೆ ತನ್ನಿಚ್ಛೆ ಬಂದಂತೆ ನೆಮ್ಮದಿಯಿಂದ ಬದುಕುವುದರಲ್ಲಿ ಸಾರ್ಥಕತೆ ಇದೆ ಎಂದಾಯಿತು ಅಲ್ಲವೇ?

ವಿಲ್ ಸ್ಮಿತ್ ಬದುಕಿನ ಸುತ್ತ ಆವರಿಸಿಕೊಂಡ ಒಂದು ವಿವಾದವೆಂದರೆ ಆತನ ಹದಿಮೂರುವ ವರ್ಷದ ಮಗಳು ವಿಲ್ಲೋ ಇಪ್ಪತ್ತು ವರ್ಷದ ನಟ ಮೋಸಸ್ ಆರಿಯಾ ಎಂಬಾತನ ಜೊತೆ ಬರಿಮೈಯಲ್ಲಿರುವಾಗ ಆತನ ಜೊತೆ ಬೆಡ್‌ರೂಮಿನಲ್ಲಿ ತೆಗೆದುಕೊಂಡಿದ್ದ ಚಿತ್ರ. ಈ ಫೋಟೋ ಬೆಳಕಿಗೆ ಬಂದಾಗ ಲಾಸ್ ಎಂಜಲೀಸ್ ರಾಜ್ಯದ ಮಕ್ಕಳ ಇಲಾಖೆ ಸ್ಮಿತ್ ದಂಪತಿಗಳು ತಮ್ಮ ಮಗಳನ್ನು ಹೇಗೆ ನೋಡಿಕೊಳ್ಳುತ್ತಿದ್ದಾರೆ ಎಂಬುದರ ಬಗ್ಗೆ ತನಿಖೆ ನಡೆಸಿತ್ತು. ಮಕ್ಕಳ ಇಲಾಖೆಯು ಕೊನೆಗೆ ತನ್ನ ವರದಿಯಲ್ಲಿ "ವಿಲ್ಲೋಗೆ ದೈಹಿಕವಾಗಿ ಅಥವಾ ಮಾನಸಿಕವಾಗಿ ಕಿರುಕುಳವಾಗಿರುವ ಬಗ್ಗೆ ಯಾವುದೇ ಸಾಕ್ಷ್ಯಗಳು ದೊರಕುತ್ತಿಲ್ಲ" ಎಂದು ಹೇಳಿತ್ತು.

ತಮ್ಮ ಮಗಳು ಮುಕ್ತ ವಾತಾವರಣದಲ್ಲಿ ಬೆಳೆಯಲಿ ಎಂಬುದು ಸ್ಮಿತ್ ಹಾಗೂ ಜಾಡಾಳ ಉದ್ದೇಶ. ಇಷ್ಟಕ್ಕೂ "ಆಕೆ ಪ್ರಬುದ್ಧೆ, ಯಾವುದು ಸರಿ, ಯಾವುದು ತಪ್ಪು ಎಂಬುದರ ಪರಿಜ್ಞಾನ ಆಕೆಗಿದೆ" ಎಂದು ತನ್ನ ಮಗಳ ಮೇಲೆ ವಿಲ್ ಸ್ಮಿತ್ ಭರವಸೆ ವ್ಯಕ್ತಪಡಿಸಿದ್ದಾನೆ. ಪತ್ನಿ ಜಾಡಾ ಕೂಡ "ಒಮ್ಮೆ ವಿಲ್ಲೋ ನನ್ನೊಂದಿಗೆ ಮಾತನಾಡುತ್ತಾ 'ಅಮ್ಮಾ ನಿನಗೆ ಗೊತ್ತಾ? ನನ್ನ ವಯಸ್ಸಿನ ಹೆಣ್ಣು ಮಕ್ಕಳನ್ನು ಈ ದೇಶದಲ್ಲಿ ಮಾರಾಟ ಮಾಡುತ್ತಾರೆ. ಅದು ನಡೆಯಕೂಡದು. ಇದಕ್ಕೆ ಅವಕಾಶ ಮಾಡಿಕೊಡಬಾರದು' ಎಂದು ಹೇಳಿದ್ದಳು. ಆದ್ದರಿಂದ ಹೆಣ್ಣು ಮಕ್ಕಳ ಶೋಷಣೆ ಬಗ್ಗೆ ಆಕೆಗೆ ಅರಿವು ಇದೆ" ಎಂದು ಸ್ಪಷ್ಟಪಡಿಸಿದ್ದಳು.

ತನ್ನ ಮಕ್ಕಳ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತಾ ನೈತಿಕತೆಯ ನೆಲೆಗಟ್ಟಿನಲ್ಲಿ ಚಿಂತಿಸಲು, ಬದುಕಲು ಪ್ರೇರೇಪಿಸುತ್ತಾ ಅವರ ಸುತ್ತ ಒಂದು ಆರೋಗ್ಯಕರ ವಾತಾವರಣ ನಿರ್ಮಿಸುವ ವಿಲ್ ಸ್ಮಿತ್ ಸ್ವಭಾವತಃ ಯಾವ ಥರದ ವ್ಯಕ್ತಿ ಎಂಬುದನ್ನು ಅರಿಯಬೇಕಾಗುತ್ತದೆ. ಈತ ತನ್ನ ಚೂಟಿತನದಿಂದ ಜನರನ್ನು ರಂಜಿಸಿದರೂ, ತನ್ನ ಹಾಸ್ಯ ಪ್ರಜ್ಞೆಯಿಂದ ಪ್ರೇಕ್ಷಕರನ್ನು ಖುಷಿಪಡಿಸಿದರೂ ಆಳದಲ್ಲಿ ಗಂಭೀರವಾದ ಪ್ರಜ್ಞಾವಂತ ಎಂಬುದು ಎಷ್ಟೋ ಜನಕ್ಕೆ ಗೊತ್ತಿರಲಿಕ್ಕಿಲ್ಲ. ಇಷ್ಟು ಎತ್ತರಕ್ಕೆ ಬೆಳೆಯಲು ಆತ ಅನುಸರಿಸಿದ ಮಾರ್ಗಗಳು, ಕೈಗೊಂಡ ಕ್ರಮಗಳು, ಕಂಡ ಸತ್ಯಗಳು, ಆದ ಅವಮಾನಗಳು- ಅವೆಲ್ಲವನ್ನು ಆತ ದಾಟಿ ಬಂದ ಪರಿ ಹೇಗಿದ್ದವೆಂದು ಆತನ ಸಾಲುಗಳಲ್ಲಿಯೇ ಕೇಳುವುದು ಚೆಂದ. ಆತನೇ ಹೇಳುವಂತೆ "ನನ್ನ ಬದುಕಿನಲ್ಲಿ ಏನೇನು ಸಂಭವಿಸುತ್ತದೋ ಅದೆಲ್ಲವೂ ನನಗೆ ಮುಖ್ಯ ಏಕೆಂದರೆ ನಾನು ಶಾಲೆಯಲ್ಲಿ ಹೆಚ್ಚು ಕಲಿಯಲಾಗಲಿಲ್ಲ, ಹಾಗೆಯೇ ಬದುಕಿನುದ್ದಕ್ಕೂ ಜನ ನಮ್ಮನ್ನು ಹುಚ್ಚರನ್ನಾಗಿಸುತ್ತಾರೆ, ನಮ್ಮನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ. ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೆ ಮುನ್ನುಗ್ಗಬೇಕು" ಎನ್ನುತ್ತಾನೆ ವಿಲ್ ಸ್ಮಿತ್.

ಆಳದಲ್ಲಿ ಡಿಸ್ಟರ್ಬ್ ಆದವನಂತೆ, ಸಂತನಂತೆ ಮಾತಾಡುವ ವಿಲ್ ಸ್ಮಿತ್ ಪ್ರತಿಭೆ ಮತ್ತು ಕೌಶಲ್ಯ ಬೇರೆಬೇರೆಯಾಗಿದ್ದು, ಪ್ರತಿಭೆ ಅನ್ನುವುದು ಸಹಜವಾಗಿ ಬರುವುದಾಗಿಯೂ, ಕೌಶಲ್ಯ ಎಂಬುದು ರೂಢಿಸಿಕೊಳ್ಳಬೇಕಾದುದೂ ಆಗಿರುತ್ತದೆ ಎನ್ನುವಷ್ಟು ಜಾಣ. ಅದೇರೀತಿ ಯಾವುದನ್ನೂ ಸಂಕೀರ್ಣಗೊಳಿಸಲು ಹೋಗದೆ ಸುಲಭದಲ್ಲಿ, ಸರಳವಾಗಿ ನಿಭಾಯಿಸಬೇಕು ಎನ್ನುವುದು ಆತನ ತೀರ್ಮಾನ; ತೀರಾ ಯೋಜಿತ ಎನ್ನಿಸುವ ಎಷ್ಟೋ ಕೆಲಸಗಳು ಒತ್ತಡಗಳಿಂದಾಗಿ ಅರ್ಧಕ್ಕೇ ಮುರಿದುಬೀಳುವ ಸಂಭವವಿರುವುದರಿಂದ ಹೆಚ್ಚು ತಲೆಬಿಸಿ ಮಾಡಿಕೊಳ್ಳದೆ ತಣ್ಣಗೆ, ಶ್ರದ್ಧೆಯಿಂದ ಕಾರ್ಯಪ್ರವೃತ್ತರಾದಾಗ ಮಾತ್ರ ಯಶಸ್ಸು ದೊರಕುತ್ತದೆ ಎಂಬುದು ಕೂಡ ಸ್ಮಿತ್‌ನ ಅನುಭವದ ಮಾತು.

ಜೀವನೋತ್ಸಾಹಿ ವಿಲ್ ಸ್ಮಿತ್ ಎಂದೂ ಜಿಗುಪ್ಸೆಯಲ್ಲಿ ಮುಳುಗುವುದಿಲ್ಲ, ತನ್ನ ಸುತ್ತಲ ಗಾಸಿಪ್ ಬಗ್ಗೆ ವ್ಯಥೆ ಪಡುವುದಿಲ್ಲ. ಪ್ರಬುದ್ಧವಾಗಿ, ತೀವ್ರವಾಗಿ ಬದುಕುತ್ತಾನೆ; ಮಿಂಚುತ್ತ ಬಾಳುತ್ತಾನೆ. ಆತನ ಗೆಲುವನ್ನು ಕಂಡು ಅಸೂಯೆ ಪಡುವವರೂ ಆತನ ಚಿತ್ರಗಳನ್ನು ನೋಡಲು ಥಿಯೇಟರುಗಳಿಗೆ ಲಗ್ಗೆ ಹಾಕುತ್ತಾರೆ. ಆತ ವರ್ಣವಳಿ ಕರಿಯನಾದರೂ ಆತನ ಕಲೆಯಲ್ಲಿ ತಲ್ಲೀನರಾಗಿ ಮೈ ಮರೆತು ಆರಾಧಿಸುತ್ತಾರೆ. ಒಬ್ಬ ಅದ್ಭುತ ನಟ ಒಬ್ಬ ಅದ್ಭುತ ಮನುಷ್ಯನೂ ಯಾಕಾಗಬಾರದು? ಎರಡು ಬಾರಿ ಆಸ್ಕರ್ ಅವಾರ್ಡಿಗೆ ನಾಮಿನೇಟಾದ ವಿಲ್ ಸ್ಮಿತ್ ಅನೇಕ ಅಚ್ಚರಿಗಳ ಗುಚ್ಛವಂತಿದ್ದಾನೆ.

■ ಹೃದಯಶಿವ

...ದ ಆಶಯದಂತೆ ಕುತಂತ್ರ ಹೂಡಿ ಹೈದ್ರಾಬಾದ ...ದ ವಿಲೀನವನ್ನು ವಿಮೋಚನೆ ಎಂದು ತಪ್ಪಾಗಿ ... ಜನರಲ್ಲಿ ವಿಷ ತುಂಬುತ್ತಿದ್ದಾರೆ. ಆರಂಭದಲ್ಲಿ ...ಗುಲಬರ್ಗಕ್ಕೆ ಸೀಮಿತವಾಗಿದ್ದ ಈ ಆಚರಣೆಯನ್ನು ...ಗುಲಬರ್ಗಾ ವಿಭಾಗದ ನಾಲ್ಕೂ ಜಿಲ್ಲೆಗಳಿಗೆ ...ವಂತೆ ನೋಡಿಕೊಂಡಿದ್ದಾರೆ.


...47 ರಲ್ಲಿ ಭಾರತದಲ್ಲಿ 565 ಸಂಸ್ಥಾನಗಳಿದ್ದವು. ... ಸ್ವಾತಂತ್ರ್ಯ ಕಾಯಿದೆಯಂತೆ ಅವುಗಳು ಭಾರತ, ...ನದಲ್ಲಿ ವಿಲೀನಗೊಳ್ಳ...ಗಿತ್ತು ಅಥವಾ ಸ್ವತಂತ್ರವಾಗಿ ...ದಾಗಿತ್ತು. ಭಾರತವು ಎಂದೂ ...ವಾಗಿರಲಿಲ್ಲ. ಬ್ರಿಟಿಷ್ ಅಧಿಪತ್ಯ ...ಲ್ಲಿ ಕೊನೆಗೊಂಡಾಗ ದೇಶೀಯ ...ಗಳು ಭದ್ರತೆಯ ದೃಷ್ಟಿಯಿಂದ ...ದ ಸರ್ಕಾರದೊಂದಿಗೆ ತಮ್ಮ ...ಗಿ ಚೌಕಾಸಿ ಮಾಡಿದವು. ಈ ...ಸಂಸ್ಥಾನಗಳು ಏಕಕಾಲಕ್ಕೆ ...ದಲ್ಲಿ ವಿಲೀನಗೊಳ್ಳಲಿಲ್ಲ. ...ರಣೆಗೆ ಮೈಸೂರು ಸಂಸ್ಥಾನವು ...ಬರ್ 24, 1947 ರಂದು ...ದಲ್ಲಿ ವಿಲೀನಗೊಂಡಿತ್ತು. ...ರೆ, ಹಳೇ ಮೈಸೂರು ಪ್ರಾಂತದಲ್ಲಿ ಪ್ರತಿವರ್ಷ ...ಬರ್ 24ರಂದು ವಿಮೋಚನಾ ದಿನಾಚರಣೆ ...ಲಾಗುತ್ತಿದೆಯೇ....? ಮುಂದುವರೆದು 1935 ...ವಿದುರಾಶ್ವತ್ಥ ಬಳಿಯಲ್ಲಿ ಮೈಸೂರು ಮಹಾರಾಜರ ... ಯಾತ್ರಾರ್ಥಿಗಳ ಮೇಲೆ ಗೋಲಿ ಬಾರ್ ಮಾಡಿ ...ನರ ಕೊಲೆಗೆ ಕಾರಣವಾಗಿದ್ದರು. ಇದನ್ನು ...ಜಿಯವರು ಜಲಿಯನ್ ವಾಲಾಬಾಗ್‌ನ ಹತ್ಯಾ...ಕಾಂಡ ಎಂದು ವಿವರಿಸುತ್ತಾ ತನಿಖೆಗೆ ಆಗ್ರಹಿಸಿದ್ದರು. ...ಬಿಜೆಪಿ ಅಧ್ಯಕ್ಷ ಅಮಿತ್ ಶಾ ಅವರು ...ನೂರಿನ ದೇವಾಲಯದ ಬಳಿ ಸ್ಮಾರಕ ...ತ್ತಾರೆಯೇ?

...ೀರ್ ಸಂಸ್ಥಾನವು 26, ಅಕ್ಟೋಬರ್ 1948 ...ರತದಲ್ಲಿ ವಿಲೀನಗೊಂಡಿತ್ತು, ಹಾಗಿದ್ದರೆ ಅಲ್ಲಿ ... ದಿನಾಚರಣೆ ಆಚರಿಸಲಾಗುತ್ತಿದೆಯೇ? ಈ ...ಗಿ 565 ಸಂಸ್ಥಾನಗಳು ತಮ್ಮ ತಮ್ಮ ವಿಲೀನ ...ಣೆ ಆಚರಿಸಲು ಪ್ರಾರಂಭಿಸಿದರೆ 15ನೇ ಆಗಸ್ಟ್‌ನ ...ಗದರೂ ಏನು?

- ಮೊಹಿಯೊದ್ದೀನ್, ಗುಲಬರ್ಗಾ

...ಬಸವಣ್ಣನ ಪ್ರತಿಮೆ ಸ್ಮಾರಕವೇ ...ಹೊರತು ಮೂರ್ತಿಯಲ್ಲ

...ನ 24.9.2014 ರ ಸಂಚಿಕೆಯಲ್ಲಿ ...ಷಣ್ಮುಖರವರು ಬರೆದ 'ಮುರುಘಾ ಶರಣರ ...ಅಧಃಪತನ' ಎಂಬ ಲೇಖನವನ್ನು ಓದಿ ...ಸುರ್ಚ್ಯವಾಯಿತು. ...ಮುರುಘಾ ಶ್ರೀಗಳ ವೈಚಾರಿಕತೆಯನ್ನು ಪ್ರಶ್ನಿಸು...ವಂತಿಲ್ಲ. "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ಮಾತನ್ನು ಬಸವಣ್ಣ ಯಾಕೆ ಹೇಳಬೇಕಾಯಿತು ಎಂಬುದನ್ನು ತಿಳಿಯಬೇಕು. ಆಗ ಶೂದ್ರರನ್ನು, ಪಂಚಮರನ್ನು ಗುಡಿಯೊಳಗೆ ಬಿಡುತ್ತಿರಲಿಲ್ಲ. ಆಗ ಇಂಥ ಸ್ಥಾವರ ಬೇಡ, ಅದು ಉಳಿಯದು ಎಂದು ಬಸವಣ್ಣ ಅದನ್ನು ತಿರಸ್ಕರಿಸಿದರು. ಈಗ ಚಿತ್ರದುರ್ಗದ ಶರಣರು ಸ್ಥಾಪಿಸ ಹೊರಟಿರುವುದು ಸ್ಥಾವರಲ್ಲ, ಅದೊಂದು ಸ್ಮಾರಕ. ಬಸವಣ್ಣ ಐತಿಹಾಸಿಕ ವ್ಯಕ್ತಿ. ಅಂತೆಯೇ ಗಾಂಧಿ, ಬುದ್ಧ ಅಂಬೇಡ್ಕರ್ ಮೂರ್ತಿಗಳನ್ನಿಂದು ಸ್ಥಾಪಿಸಲಾಗಿದೆ.



ವಿದೇಶಗಳಲ್ಲಿ ರಾಜಮಹಾರಾಜರುಗಳ, ದೇವ-ದೇವಿಯರ, ಏಸುಕ್ರಿಸ್ತನ ಪ್ರತಿಮೆಗಳನ್ನು ಸ್ಥಾಪಿಸಿಲ್ಲವೆ. ಪಾರ್ಲಿಮೆಂಟಿನ ಮುಂದೆ ಬಸವಣ್ಣನ ವಿಗ್ರಹ ಸ್ಥಾಪಿಸಿಲ್ಲವೇ? ಇದು ಸ್ಮಾರಕ. ಇದನ್ನು ನೋಡಿದಾಗ ಗೊತ್ತಿಲ್ಲದವರಿಗೂ ಗೊತ್ತಾಗಬೇಕು-ಬಸವಣ್ಣ ಯಾರೆಂಬುದು.

ಬಸವಣ್ಣ ಮತ್ತು ಆತನ ಸಮಕಾಲೀನ ಶರಣರ ವಚನಗಳನ್ನು ಅವರ ಭಾವಚಿತ್ರಗಳನ್ನು ಒಂದು ಮ್ಯೂಸಿಯಂ ಮಾಡಿ ಪ್ರದರ್ಶನ ಮಾಡಲಿದ್ದಾರೆ. ಸುತ್ತ ಸುಂದರವಾದ ತೋಪಿವಿರುತ್ತದೆ. ಇಡೀ ವಾತಾವರಣ ಜಂಗಮವಾಗಿರುತ್ತದೆ. ಅಲ್ಲಿ ಮೂರ್ತಿ ಪೂಜೆ ಮಾಡುವುದಿಲ್ಲ.

ಮಠದ ಇತಿಹಾಸ ಪ್ರಸ್ತಾಪಿಸುವಾಗ ಆಸ್ತಿ ಮಾರಿದ ಬಗ್ಗೆ ಷಣ್ಮುಖರವರು ಬರೆಯುತ್ತಾರೆ. 150 ಕೋಟಿಗೂ ಹೆಚ್ಚಿನ ಸಾಲವಾಗಿತ್ತು, ಅದರಿಂದ ಮುಕ್ತವಾಗಲು ಆಸ್ತಿ ಮಾರದೇ ಗತ್ಯಂತರವಿರಲಿಲ್ಲ. ಸಾಲ-ಸೋಲ ಏಕಾಯಿತು ಹೇಗಾಯಿತು ಎಂಬುದನ್ನು ಶರಣರು 'ಅಭಿವೃದ್ಧಿಯ ಹಾದಿಯಲ್ಲಿ ಮುಳ್ಳಿನ ಹಾಸಿಗೆ' ಎಂಬ ಪುಸ್ತಕದಲ್ಲಿ ವಿಷದವಾಗಿ ಬರೆದಿದ್ದಾರೆ. ಅದನ್ನು ಲೇಖಕರು ಗಮನಿಸಬೇಕು. ಪ್ರತಿವರ್ಷ ಮಠದ ಎಲ್ಲ ಖರ್ಚು-ವೆಚ್ಚಗಳು ಆಡಿಟ್ ಆಗಿ ಸಾಮಾನ್ಯ ಸಭೆಯಲ್ಲಿ ಮಂಡನೆ ಆಗಿರುತ್ತವೆ. ಈಗ ಮಠ ಸಾಲ ಮುಕ್ತವಾಗಿದೆ ಎಂದು ಶರಣರು ಘೋಷಿಸಿದ್ದಾರೆ.

ಇನ್ನು ಸಾಧಕರು ಬಾಧಕರಾದರೆ ಶರಣರೇನು ಮಾಡಬೇಕು. ಸ್ವಾಮೀಜಿ ಒಳ್ಳೆದನ್ನೇ ಕಲಿಸಿದ್ದಾರೆ. ಆದರೆ ಅವರು ಅಡ್ಡದಾರಿ ಹಿಡಿದರೆ ಏನು ಮಾಡಬೇಕು.

-ಕೆ. ಸಿದ್ದಯ್ಯಸ್ವಾಮಿ, ಮಾನ್ವಿ

-ಡಾ. ಬಸವಪ್ರಭು ಪಾಟೀಲ, ಬೆಟ್ಟದೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday

ಗುರುಪ್ರಸಾದ್ ಮನೆಯಿಂದ ಹೊರಕ್ಕೆ



ಗುರುಪ್ರಸಾದ್ ಎಂದಾಕ್ಷಣ ಅಲ್ಲೊಂದು ಗಾಂಚಾಲಿಯ, ದೌಲತ್ತಿನ, ಧಿಮಾಕಿನ ಮೂಡ್ ಆವರಿಸುತ್ತದೆ. ಇಂತಹ ಇಮೇಜ್ ಹೊಂದಿರುವ ಈ ಮನುಷ್ಯ ಮಾಡಿದ್ದು ಒಂದೆರಡು ಚಿತ್ರಗಳಾದರೂ ತಮ್ಮ ಉಡಾಫೆಯ ಮಾತುಗಳಿಂದ, ತಾವೊಬ್ಬ ಮಹಾನ್ ಕಿಲಾಡಿಯೆಂಬ ಭ್ರಮೆಯಿಂದ ಇಷ್ಟು ಕಾಲ ಗಾಂಧಿನಗರದಲ್ಲಿ ಸುದ್ದಿಯಲ್ಲಿರುವುದು ನಿಮಗೆಲ್ಲ ಗೊತ್ತಿರುವಂಥದ್ದೇ. ತಮ್ಮ ಮೊದಲ ಚಿತ್ರ 'ಮಠ'ದಲ್ಲಿ ಕೆಳಮಟ್ಟದ ಡಬಲ್ ಮೀನಿಂಗ್ ಡೈಲಾಗ್ಸ್‌ಗಳನ್ನೇ ಬಂಡವಾಳವಾಗಿಸಿಕೊಂಡು, ಜಗ್ಗೇಶ್ ಎಂಬ ಪರಿಚಿತ ನಟನ ಮುಖವನ್ನು ಇಟ್ಟುಕೊಂಡು ಹೇಗೋ ಒಂದು ರೇಂಜಿಗೆ ಸಕ್ಸಸ್ ಪಡೆದುಕೊಂಡ ಗುರುಪ್ರಸಾದ್ ತಮ್ಮ ಎರಡನೆಯ ಚಿತ್ರ 'ಎದ್ದೇಳು ಮಂಜುನಾಥ'ದಲ್ಲಿಯೂ ಅದೇ ಚಾಳಿ ಮುಂದುವರಿಸಿ ಒಂದಿಷ್ಟು ಫೇಮಸ್ ಮಂದಿಯ ಹೆಸರು ಬಳಸಿ, ಸುಖಾಸುಮ್ಮನೆ ಕಾಲೆಳೆದು ಹೇಗೋ ಮತ್ತೊಂದು ಸಕ್ಸಸ್ ಪಡೆದುಕೊಂಡರು.

ಅದೇ ಜೋಶ್‌ನಲ್ಲಿ ಅದ್ಯಾವುದೋ ಡ್ರಿಂಕ್ಸ್ ಬ್ರಾಂಡಿನ ಟೈಟಲನ್ನು ತಮ್ಮ ಚಿತ್ರಕ್ಕೆ ಇಟ್ಟು ತಮ್ಮದೇ ಮೆಂಟಾಲಿಟಿಯ ಪ್ರೇಕ್ಷಕರನ್ನು ಸೆಳೆಯಲೆತ್ನಿಸಿ ಸೋತು ಮಕಾಡೆ ಮಲಗಿದ್ದೂ ಕೂಡ ನೀವು ಬಲ್ಲಿರಿ. ಇಂತಹ ಗುರುಪ್ರಸಾದ್ ಈ ಮಧ್ಯದಲ್ಲಿ 'ಬಿಗ್ ಬಾಸ್' ಎಂಬ ರಿಯಾಲಿಟಿ ಷೋನಲ್ಲಿ ಭಾಗವಹಿಸಿ, ಇತ್ತೀಚೆಗಷ್ಟೇ ಹೊರಬಿದ್ದಿದ್ದಾರೆ. ಇಷ್ಟಕ್ಕೂ ಈ ವ್ಯಕ್ತಿಯ ಒಣಜಂಬ, ನಡತೆ 'ಬಿಗ್ ಬಾಸ್' ಮನೆಯ ಮಂದಿಗೆ ಹಿಡಿಸಲಿಲ್ಲ ಎಂಬ ಮಾತುಗಳೂ ಕೇಳಿಬರುತ್ತಿವೆ. ಇನ್ನಾದರೂ ಗುರುಪ್ರಸಾದ್ ಎಂಬ ಜಂಬದ ಹುಂಜ ನೆಟ್ಟಗಿರುವ ಒಂದು ಸಿನಿಮಾ ಮಾಡಲಿ ಎಂಬುದು ನಮ್ಮ ಆಶಯ.

ಹೀಗೊಂದು ಟೈಟಲ್ ಮಾಫಿಯಾ

ಗಾಂಧಿನಗರದಲ್ಲಿ ಹಣಕ್ಕಾಗಿ ಏನೇನೆಲ್ಲ ದಂಧೆಗಳು ನಡೆಯುತ್ತದೆ ಎಂದು ಬಿಡಿಸಿ ಹೇಳಿದರೆ ನೀವು ಬೆಚ್ಚಿ ಬೀಳುವಿರಿ. 'ಚಾನ್ಸ್



ಕೊಡಿಸುತ್ತೇನೆ ಕಾಸು ಕೊಡಿ' ಎನ್ನುವವರು ಒಂದು ಕಡೆಯಾದರೆ, 'ಕೆಲಸ ಕೊಡುತ್ತೇನೆ ಕಮಿಷನ್ ಕೊಡಿ' ಎನ್ನುವ ಗುಂಪು ಮತ್ತೊಂದೆಡೆ. ಮೊದಲನೇ ವರ್ಗ ಹೊಸದಾಗಿ ಸಿನಿಮಾ ಕನಸು ಕಟ್ಟಿಕೊಂಡು ಗಾಂಧಿನಗರಕ್ಕೆ ಬರುವವರಿಂದ ಸುಲಿಗೆ ಮಾಡುವ ವರ್ಗವಾದರೆ, ಎರಡನೆಯದು ಸಿನಿಮಾ ಮಂದಿಯೇ ಸಿನಿಮಾ ಮಂದಿಯಿಂದ ಹಣ ಕೀಳುವ ವರ್ಗ. ಇಲ್ಲಿ ಹಣ ಮಾಡಲು ದಾರಿ ಹುಡುಕಿಕೊಳ್ಳುವ ಇನ್ನೊಂದು ವರ್ಗವಿದೆ. ಅದೇ ಟೈಟಲ್ ಮಾಫಿಯ. ಒಬ್ಬ ತನ್ನ ಬ್ಯಾನರಿನಲ್ಲಿ ಒಂದಿಷ್ಟು ಟೈಟಲ್‌ಗಳನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ನೋಂದಾವಣೆ ಮಾಡಿಸಿರುತ್ತಾನೆ. ಮುಂದೊಮ್ಮೆ ಯಾರಿಗೋ ಅದೇ ಟೈಟಲ್ ಬೇಕಿರುತ್ತದೆ. ಅವರು 'ಆ ಟೈಟಲ್ ಕೊಡ್ರಿ ನಮಗೆ' ಅಂತ ಕೇಳುತ್ತಾರೆ. ಅದಕ್ಕೆ 'ಇಷ್ಟು ಕೊಟ್ಟರೆ ಕೊಡುತ್ತೇನೆ' ಅಂತ ನೋಂದಾಯಿಸಿರುವ ವ್ಯಕ್ತಿ ಹಣ ಡಿಮ್ಯಾಂಡ್ ಮಾಡುತ್ತಾನೆ. 'ಕಮ್ಮಿ ಮಾಡ್ಕೋ ಮಾರಾಯ' ಅಂತೆಲ್ಲಾ ಏನೇನೋ ಚೌಕಾಸಿ ವ್ಯಾಪಾರಗಳು ನಡೆದ ಬಳಿಕ ಒಂದು ರೇಟಿಗೆ ಟೈಟಲ್ ಮಾರಾಟವಾಗುತ್ತದೆ. ಆ ಟೈಟಲ್ ಅಗತ್ಯವಿದ್ದವರು ಹಣ ಕೊಟ್ಟು ಪಡೆಯುತ್ತಾರೆ. ಅಲ್ಲಿಗೆ ಎಲ್ಲ ಸಲೀಸು. ಸಿನಿಮಾ ಶುರು ಆಗುತ್ತದೆ. ಇಂಥದೊಂದು ಘಟನೆ ಇತ್ತೀಚೆಗೂ ನಡೆದಿದೆ.

'ರನ್ನ' ಎನ್ನುವ ಟೈಟಲ್ 'ಸೈಕೋ' ಎಂಬ ಆಮೆವೇಗದ ಸಿನಿಮಾ ಮಾಡಿದ್ದ ದೇವದತ್ತ ತಮ್ಮ ಬ್ಯಾನರಿನಡಿ ನೋಂದಾಯಿಸಿದ್ದರಂತೆ. ಅದೀಗ ಸುದೀಪ್ ನಟಿಸುತ್ತಿರುವ ಹೊಸಚಿತ್ರದ ಟೈಟಲ್ ಆಗಿದೆ. ಇದರ ಹಿಂದೆ ನಡೆದದ್ದು ಮಾತ್ರ ಮೂರು ಲಕ್ಷಗಳ ಡೀಲ್. ದೇವದತ್ ಮೊದಲಿಗೆ ಐದು ಲಕ್ಷ ಕೇಳಿದ್ದು, ಚೌಕಾಶಿಯ ನಂತರ ಮೂರಕ್ಕೆ ಒಪ್ಪಿ ಟೈಟಲ್ ಬಿಟ್ಟುಕೊಟ್ಟಿದ್ದಾರೆ. ಇಷ್ಟಕ್ಕೂ ಕೇವಲ ಟೈಟಲ್‌ನಿಂದ ಒಂದು ಸಿನಿಮಾ ಗೆಲ್ಲಲು ಸಾಧ್ಯಾನಾ? ತಮಿಳು ಚಿತ್ರವೊಂದನ್ನು ಕನ್ನಡಕ್ಕೆ ತಂದು 'ಅಧ್ಯಕ್ಷ'ನಾಗಿಸಿ ಗೆದ್ದ ನಿರ್ದೇಶಕ ನಂದಕಿಶೋರ್ ಈ ಪ್ರಶ್ನೆಗೆ ಉತ್ತರವಾಗಿ ತಮ್ಮ 'ರನ್ನ' ಥಿಯೇಟರಿನಲ್ಲಿ ಚೆನ್ನಾಗಿ ರನ್ ಆಗುವಂತೆ ಮಾಡಬೇಕು.



ಹರ್ಷಿಕಾ ಕಿಸ್ ಸ್ಟೋರಿ



ತಮಿಳಿನ ಟಿ.ರಾಜೇಂದ್ರನ್ ಎಂಬ ಪ್ರತಿಭಾವಂತ ನಟನ ಮಗನ ಹೆಸರು ಸಿಂಬು ಅಲಿಯಾಸ್ ಸಿಲಂಬರಸನ್. 'ಕಾದಲ್ ಅಳಿವದಿಲ್ಲೈ' ಎಂಬ ಚಿತ್ರದ ಮೂಲಕ ಬಣ್ಣ ಹಚ್ಚಿದ ಈ ಸ್ಟಾರ್ ಪುತ್ರ ರಜನಿಕಾಂತ್‌ರನ್ನು ಕಾಪಿ ಮಾಡುವ ಮೂಲಕ ಲಿಟಲ್ ಸೂಪರ್ ಸ್ಟಾರ್ ಅಂತ ತಾವಾಗಿ ಫೇಮಸ್ ಆಗಬಯಸಿದ್ದು ಹಳೇ ಮಾತು. ಈತ ಮುಂದೆ ನಯನತಾರಾ ಎಂಬ ಹುಡುಗಿಯ ತುಟಿಗೆ ತುಟಿಗೆ ಸೇರಿಸಿ ಪತ್ರಿಕೆಗಳ ಅಡ್ಡೆಯಲ್ಲಿ ಚರ್ಚೆಗೆ ಆಹಾರವಾಗಿದ್ದೂ ಉ ಇಂತಹ ಖ್ಯಾತಿ ಹೊಂದಿರುವ ಸಿಂಬು ಈಗ ಮತ್ತೊಂದು ಕಿಸ್ಸಿಂಗ್ ಪ್ರಕರ ಸಿಲುಕಿದ್ದಾರೆ. ಸಿಂಬು ಈ ಬಾರಿ ನಮ್ಮ ಕನ್ನಡತಿ ಹರ್ಷಿಕಾ ಪೂಣಚ್ಚಳ ಕಚ್ಚಿದ್ದಾರೆ. ಅಂದರೆ ಮೊನ್ನೆ ಎಸ್.ಐ.ಐ.ಎಂ.ಎ ಪ್ರಶಸ್ತಿ ಪ್ರದಾನ ಕಾರ್ಯ ಮಲೇಷ್ಯಾಗೆ ಹೋಗಿದ್ದ ಹರ್ಷಿಕಾಳಿಗೆ ಸಿಂಬು ಎಂಬ ಜೂನಿಯರ್ ಇ ಹಷ್ಮಿ ಲಿಪ್ ಟು ಲಿಪ್ ಕಿಸ್ ಹೊಡೆದಿದ್ದಾರೆ. ಅದು ಸಿ.ಸಿ.ಟಿ.ವಿ ರೆಕಾರ್ಡ್ ಆಗಿದೆ. ಹೀಗೊಂದು ಸುದ್ದಿ ಎಲ್ಲಾ ಕಡೆ ಹಬ್ಬಿದ್ದು ಇದ ಹರ್ಷಿಕಾ ನೀಡಿದ ಪ್ರತಿಕ್ರಿಯೆ ಏನೆಂದರೆ "ಇದರ ಬಗ್ಗೆ ನನ ಗೊತ್ತಿಲ್ಲ!"

ವೀಕೆಂಡ್ ವಿತ್ ಶಿವ



ರಮೇಶ್ ಅರವಿಂದ್ ನಡೆಸಿಕೊಂಡುವ 'ವೀಕೆಂಡ್ ರಮೇಶ್' ಕಾರ್ಯಕ್ರಮದ ಬಗ್ಗೆ ನಿಮಗೆಲ್ಲ ತಿಳಿದಿದೆ. ಈ ಕಾರ್ಯಕ್ರಮದ ಮೂಲಕ ಚಿತ್ರರಂಗದಲ್ಲಿ ಹೆಸರು ಮಾಡಿರುವವರ ಪೈಕಿ ಒಬ್ಬರನ್ನು ಕರೆದು ಕೂಡಿಸಿ ಅವರ ಬಾಲ್ಯ, ಯೌವನ, ಮದುವೆ, ಮಕ್ಕಳು, ವೃತ್ತಿ ಬದುಕು, ಸಾಧನೆ, ಸೋಲು, ಗೆಲುವು, ಸುಖ, ದುಃಖ ಇತ್ಯಾದಿಗಳ ಕುರಿತು ಮೆಲುಕು ಹಾಕುವುದು. ಆ ಸಂದರ್ಭದಲ್ಲಿ ಆ ಸೆಲೆಬ್ರಿಟಿಯ ಬಂಧುಗಳು, ಸ್ನೇಹಿತರು, ಚಿತ್ರರಂಗದ ಹಿತೈಷಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಅವರ ನಡುವಿನ ನಂಟು, ಆತ್ಮೀಯತೆಯ ಬಗ್ಗೆ ತಮ್ಮ ನೆನಪಿನಾಳದ ಮಾತುಗಳನ್ನು ಹಂಚಿಕೊಳ್ಳುವುದು, ಇಲ್ಲವೇ ವಿಡಿಯೋ ವ ತಮ್ಮ ಅಭಿಪ್ರಾಯಗಳನ್ನು ಹೇಳುವುದು. ಈ ಬಗೆಯ ಕಾರ್ಯಕ್ರಮಕ್ಕೆ ಈಗ ಚಿತ್ರರಂಗದ ಅನೇಕ ಮಂದಿ ಬಂದು ಭಾಗವಹಿಸಿದ್ದು ಈ ಬಾರಿ ಶಿವರಾಜ್ ಕು ಬರುತ್ತಿದ್ದಾರೆ. ಪುನೀತ್ ರಾಜಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಬಾಲ ಚಿ.ಗುರುದತ್ ಸೇರಿದಂತೆ ಶಿವರಾಜ್ ಕುಮಾರ್ ಬದುಕಿನಲ್ಲಿ ಬಂದ ಅ ಹಳೆಯ ನೆನಪುಗಳ ಲೋಕಕ್ಕೆ ಜಾರಿದ್ದಾರೆ. ಅಂದಹಾಗೆ ಈ ಕಾರ್ಯ ಮೂಲಕ ಶಿವಣ್ಣನ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಅವರ ಅಭಿಮಾ ಕಾತುರದಿಂದಿರುವುದು ಮಾತ್ರ ಸುಳ್ಳಲ್ಲ ಅಲ್ಲವೇ?

ಇಂದ್ರಜಿತ್ ಚಿತ್ರದಲ್ಲಿ ರವಿಚಂದ



ನಿರ್ದೇಶಕ ಇಂದ್ರಜಿತ್ ಲಂಕೇಶ್ ಈ ಬಾರಿ ರವಿಚಂದ್ರನ್ ಹಾಕಿಕೊಂಡು ಸಿನಿಮಾ ಮಾಡಲಿದ್ದಾರಂತೆ. ಇದೇ ಮೊದಲ ಬಾರಿಗೆ ರವಿಚಂದ್ರನ್ ಅವರಿಗೆ ಆಕ್ಷನ್ ಕಟ್ ಹೇಳಲಿರುವ ಇಂದ್ರಜಿತ್ ಯಶ್ ಜೊತೆ ಒಂದು ಸಿನಿಮಾ ಮಾಡಬೇಕಿತ್ತು. ಸದ್ಯಕ್ಕೆ ಯಶ್ ಬ್ಯುಸಿ ಇರುವುದರಿಂದ ಅಷ್ಟರಲ್ಲಿ ರವಿಚ ಜೊತೆ ಒಂದು ಸಿನಿಮಾ ಮಾಡಲು ತೀರ್ಮಾನಿಸಿದ್ದಾರಂತೆ. ಇನ್ನೂ ಹೆಸರಿ ಚಿತ್ರಕ್ಕೆ ಭೂಮಿಕಾ ಚಾವ್ಲಾ ನಾಯಕಿಯಾಗಲಿದ್ದು ಚಿತ್ರ ಕುರಿತ ಇನ್ನಷ್ಟು ಮಾಹಿ ಇನ್ನಷ್ಟೇ ಹೊರಬೀಳಬೇಕಿದೆ. ಅಂದಹಾಗೆ ಇಂದ್ರಜಿತ್ 'ತುಂಟಾಟ', 'ಮೋನ 'ಐಶ್ವರ್ಯ' ತರಹದ ಯಶಸ್ವೀ ಚಿತ್ರಗಳನ್ನು ನಿರ್ದೇಶಿಸಿದ್ದರು. ದಿಗಂತ್ ಜೊತೆಗಿನ ಇತ್ತೀಚಿನ ಚಿತ್ರ 'ದೇವ್ ಸ್ಯಾನ್ ಆಫ್ ಮುದ್ದೇಗೌಡ' ಸೋಲನುಭವಿಸಿತ್ತು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com